ಶ್ರೀ ಬಿ. ಹೆಚ್. ಬನ್ನಿಕೋಡ್.—ಮಾನ್ಯ ಅಧ್ಯಕ್ಷರೆ, ಇದೇ ವಿಚಾರದಲ್ಲಿ ನಾನು ಒಂದು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದೆ ..

ಅಧ್ಯಕ್ಷರು.—ಅದು ಏನು ಎಂಬುದನ್ನು ನಾನು ನೋಡುತ್ತೇನೆ. ಈಗ ಮಾನ್ಯ ರಾಜ್ಯಪಾಲರ ಭಾಷಣದಮೇಲೆ ಮಾನ್ಯ ದೇಶಪಾಂಡೆಯವರು ಭಾಷಣವನ್ನು ಪ್ರಾರಂಭ ಮಾಡಬಹುದು.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ದೇಶಪಾಂಡೆಯವರು ತಮ್ಮ ಭಾಷಣವನ್ನು ಪ್ರಾರಂಭ ಮಾಡುವುದಕ್ಕೆ ಮುನ್ನ ನನ್ನದೊಂದು ಮನವಿ ಏನೆಂದರೆ ಮೊನ್ನೆ ೭ನೇ ತಾರೀಖು ಮಾನ್ಯ ಸಿಂಧ್ಯರವರು ನನ್ನ ಬಗ್ಗೆ ಒಂದು ಆಪಾದನೆಯನ್ನು ಮಾಡಿದ್ದರು. ೨೦ ಅಂಶದ ಕಾರ್ಯಕ್ರಮದ ಬಗ್ಗೆ ನಾನು ಹಸ್ತಕ್ಷೇಪ ಮಾಡಿ ಬಡವರಿಗೆ ಹರಿಜನರಿಗೆ ಸೈಟುಗಳನ್ನು ವಿಲೇವಾರಿ ಮಾಡುವುದಕ್ಕೆ ಸಂಬಂಧಿಸಿದಂತೆ ತಡ ಮಾಡಿದೆ ಅಂತ. ನಾನು ಇದನ್ನು ಪ್ರಸ್ತಾಪಿಸಿದಾಗ ಈ ಬಗ್ಗೆ ಲಿಖಿತ ಮೂಲಕ ಕೊಡಬೇಕೆಂದು ತಾವು ಕೇಳಿದ್ದೀರಿ. ಅದರ ಪ್ರಕಾರ ನಾನು ಲಿಖಿತ ಮೂಲಕ ಕೊಟ್ಟಿದ್ದೇನೆ. ಅವರು ಇದರ ಬಗ್ಗೆ ಏನು ಧೃಢಪಡಿಸುತ್ತಾರೆ ಎಂಬುದನ್ನು ಕೇಳಬಯಸುತ್ತೇನೆ.

ಅಧ್ಯಕ್ಷರು.—ತಾವು ಕೊಟ್ಟಿರತಕ್ಕದ್ದು ನನಗೆ ಬಂದಿದೆ. ಅದನ್ನು ನೋಡಿ ನಾನು ಉತ್ತರ ಹೇಳುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ —ಅವರು ಹೇಳಿರತಕ್ಕದ್ದು ಸದನದ ಕಡತದಲ್ಲಿ ಹೋಗಿದೆ...

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ. ಮಾನ್ಯ ಚಿಕ್ಕೇಗೌಡರ ಹೆಸರನ್ನು ಹೇಳಿ ಅವರ ಮನಸ್ಸಿಗೆ ನೋವನ್ನುಂಟು ಮಾಡಬೇಕೆಂದು ಅಥವಾ ಅವರಿಗೆ ಅಗೌರವವನ್ನು ಸೂಚಿಸಬೇಕೆಂದು ನಾನು ಹೇಳಲಿಲ್ಲ. ಮಾನ್ಯ ಚಿಕ್ಕೇಗೌಡರು ಈ ಸದನದ ಹಿರಿಯ ಸದಸ್ಯರಾಗಿರುತ್ತಾರೆ. ಅವರಿಗೆ ಅಗೌರವವನ್ನು ತರಬೇಕು ಅವರ ಮನಸ್ಸಿಗೆ ನೋವನ್ನು ತರಬೇಕೆನ್ನುವ ಮಾತನ್ನು ನಾನು ಹೇಳಲಿಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಬಡವರಿಗೆ ನಿವೇಶನಗಳನ್ನು ಹಂಚತಕ್ಕಂಥ ಕಾರ್ಯದಲ್ಲಿ ಹಿಂದಿನ ಸರ್ಕಾರದವರು ಏನೂ ಮಾಡಲಿಲ್ಲ ಎನ್ನುವ ಮಾತನ್ನು ಹೇಳಿದರು. ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ, ಮಾನ್ಯ ಚಿಕ್ಕೇಗೌಡರು ಅದನ್ನು ನಾನು ಹೇಳಲಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಅವರಿಗೂ ನನಗೂ ಇರತಕ್ಕಂಥ ಗೆಳೆತನದಲ್ಲಿ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಈ ವಿಚಾರವನ್ನು ಅವರು ಹೇಳದೆ ಇರಬಹುದು, ಆದ್ದರಿಂದ ಅವರ ವ್ಯಕ್ತಿತ್ವಕ್ಕೆ ಧಕ್ಕೆಯಾಗುತ್ತದೆಂದು ಹೇಳಿದ್ದಾರೆ. ಅದಕ್ಕೆ ನಾನು ನನ್ನ ವಿಷಾದವನ್ನು ವ್ಯಕ್ತಪಡಿಸುತ್ತೇನೆ.

೬. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲೆ ಚರ್ಚೆ

ಶ್ರೀ ಆರ್. ವಿ. ದೇಶಪಾಂಡೆ(ಹಳಿಯಾಳ).—ಮಾನ್ಯ ಅಧ್ಯಕ್ಷರೇ, ಮಾನ್ಯ ಈ ರಾಜ್ಯಪಾಲರ ಭಾಷಣ ಏನು ಇದೆ, ಇದು ಕೇವಲ ಕೇಂದ್ರ ಸರ್ಕಾರಕ್ಕೆ ಮನವಿ, ಮೆಮೊರಂಡಮ್ ಕಳುಹಿಸತಕ್ಕಂಥದ್ದಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇದರಲ್ಲಿ ಕೇವಲ ನಾವು ಪರಿಶೀಲಿಸುತ್ತೇವೆ, ನಾವು ಎಲ್ಲ ಹಿತವನ್ನು ಕಾಯ್ದುಕೊಂಡು ಹೋಗುತ್ತೇವೆ ಎನ್ನುವ ವಿಚಾರ ಇದೆಯೋ ಹೊರತು ರೈತರ ಬಗ್ಗೆಯಾಗಲಿ. ಅಥವಾ ಕೃಷಿ ಕಾರ್ಮಿಕರ ಬಗ್ಗೆಯಾಗಲಿ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಬಗೆಯಾಗಲಿ, ಅಲ್ಪಸಂಖ್ಯಾತರ ಬಗ್ಗೆಯಾಗಲಿ ಯಾವುದೇ ಸ್ಪಷ್ಟವಾದ ನಿಲುವು ಈ ಒಂದು ಭಾಷಣದಲ್ಲಿ ಎಲ್ಲೂ ಇಲ್ಲದಿರುವುದು ಬಹಳ ಆಶ್ಚರ್ಯವಾಗುತ್ತದೆ, ಮಾನ್ಯ ಸಭಾನಾಯಕರು ಸಾಕಷ್ಟು ಅನುಭವ ಪಡೆದಿರುವವರು. ಅವರು ಮುಖ್ಯಮಂತ್ರಿಗಳಾಗಿದ್ದಾಗ ಇಂಥ ಒಂದು ಭಾಷಣ ಈ ಸದನದಲ್ಲಿ ಆಗಿರುವುದು ಬಹಳ ಖೇದವಾಗುತ್ತದೆ, ಬಹಳ ನೋವಾಗುತ್ತದೆ. ಅವರು ಹೇಳಿದ್ದಾರೆ ೨೦ ಅಂಶಗಳ ಕಾರ್ಯಕ್ರಮಗಳನ್ನು ನಾವು ಪುನರುಜ್ಜೀವನ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು. ನಮ್ಮ ಸರ್ಕಾರ ಇದ್ದಾಗಲೂ ಸಹ ಈ ೨೦ ಅಂಶಗಳ ಕಾರ್ಯಕ್ರಮವನ್ನೂ ಜಾರಿಗೆ ತಂದಿದ್ದು ಅಷ್ಟೇ ಅಲ್ಲ ಕೇಂದ್ರ ಸರ್ಕಾರದವರು ಕೂಡ ನಾವು ಮಾಡತಕ್ಕಂಥ ಕೆಲಸಗಳನ್ನು ನೋಡಿ ಎಷ್ಟೋ ಸಂದರ್ಭಗಳಲ್ಲಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಹೀಗಾಗಿ ಇವತ್ತು ಪ್ರತ್ಯಕ್ಷವಾಗಿ ಹಿಂದಿನ ಸರ್ಕಾರದಿಂದ ಏನೂ ಕೆಲಸವಾಗಲಿಲ್ಲ, ನಾವು ಮಾಡುತ್ತೇವೆನ್ನುವ ಪ್ರಯತ್ನವನ್ನು ಮಾಡುತ್ತಿದ್ದಾರೆ ಅದು ಸರಿಯಲ್ಲವೆನ್ನುವುದನ್ನು ನಾನು ಸದನದ ಗಮನಕ್ಕೆ ತರಬಯಸುತ್ತೇನೆ. ಅವರ ಪ್ರಕಾರ ಡೆಮಾಕ್ರಟಿಕ್ ಸೆಟ್‌ಅಪ್‌ನಲ್ಲಿ ಡೀಸೆಂಟ್ರಲೈಸೇಷನ್‌ಗೆ ನಾವು ಕಮಿಟ್ ಆಗಿದ್ದೇವೆಂದು ಹೇಳಿದ್ದಾರೆ. ಬಹಳ ಸಂತೋಷ. ನಮಗೊಂದು ಭಯವಾಗಿದೆ. ಏತಕ್ಕೆಂದರೆ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳನ್ನು ಅನುಷ್ಠಾನಕ್ಕೆ ತಂದಮೇಲೆ ಕೆಲವು ನಮ್ಮ ಕಾಂಗ್ರೆಸ್

ಪಕ್ಷದ ಮಿತ್ರರು ಪತ್ರಿಕಾ ಹೇಳಿಕೆಯನ್ನು ಕೊಟ್ಟು ನಾವು ಅಧಿಕಾರಕ್ಕೆ ಬಂದರೆ ಇವುಗಳನ್ನು ಡಿಸಾಲ್ವ್ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಅಲ್ಲಿ ಮಾನ್ಯ ಮಾಜಿ ಪ್ರಧಾನ ಮಂತ್ರಿಗಳು, ಪ್ರಧಾನ ಮಂತ್ರಿಗಳಾಗಿದ್ದಾಗ ಈ ಪಂಚಾಯತ್ ರಾಜ್ಯ ವ್ಯವಸ್ಥೆಯಲ್ಲಿ ವಿಶ್ವಾಸವಿದೆ, ಇದನ್ನು ಡಿಸೆಂಟ್ರಲೈಸ್ ಮಾಡುತ್ತೇವೆಂದ. ಹೇಳಿದಾಗ ಇಲ್ಲಿ ಸ್ವಲ್ಪ ಚೇಂಜ್ ಆಯಿತು. ಅದೂ ಬಹಳ ಸಂತೋಷ. ಇವತ್ತು ಅಧಿಕಾರದ ವಿಕೇಂದ್ರೀಕರಣವಾಗಿದೆ. ಇದರಲ್ಲಿ ಸ್ವಲ್ಪ ಲೋಪ ದೋಷಗಳು ಇರಬಹುದು. ಅದನ್ನು ಕುಳಿತು ಬಗೆಹರಿಸಿಕೊಳ್ಳುವುದಕ್ಕೆ ಸಾಧ್ಯತೆ ಇರುತ್ತದೆ. ಆದರೆ ಈ ವ್ಯವಸ್ಥೆಗೆ ತಮ್ಮ ಸರ್ಕಾರ ಕಮಿಟೆಡ್ ಎಂದು ಹೇಳಿದ್ದಾರೆ ಅದಕ್ಕೆ ಅಭಿನಂದನೆಯನ್ನು ಮಾಡುತ್ತೇನೆ. ಇವತ್ತು Elections to Municipalities and Corporations have not been held for a number of years. ಎಂದು ಏನು ಹೇಳಿದ್ದಾರೆ ಈ ಒಂದು ಹೇಳಿಕೆಯಿಂದ ಸದನವನ್ನು ತಪ್ಪು ದಾರಿಗೆ ಎಳೆಯತಕ್ಕಂಥ ಪ್ರಯತ್ನ ನಡೆದಿದೆ. ನಾವು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ೧೩–೧೪ ವರ್ಷಗಳಿಂದ ನಗರ ಸಭೆಗಳಿಗೆ ಚುನಾವಣೆಗಳು ಆಗಿರಲಿಲ್ಲ. ಪುರಸಭೆಗಳಿಗೆ ಚುನಾವಣೆಗಳು ಆಗಿರಲಿಲ್ಲ. ಎಪಿಎಂಸಿ ಸೊಸೈಟಿಗಳಿಗೆ ಚುನಾವಣೆಗಳು ಆಗಿರಲಿಲ್ಲ. ಬಹಳ ವರ್ಷಗಳಾದ ಮೇಲೆ ಈ ಚುನಾವಣೆಗಳನ್ನು ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ನಡೆಸಬೇಕಾಗಿತ್ತು. ಏತಕ್ಕೆಂದರೆ ಹಿಂದಿನ ಒಂದು ಕಾಯಿದೆ ಕಾನೂನು ಪ್ರಕಾರ ಎಲೆಕ್ಟ್ರೋಲ್ ರೋಲ್ ರಿವಿಷನ್ ಆಗಬೇಕಾಗಿತ್ತು. ಹೀಗಾಗಿ ಜನವರಿ ೮೯ರಲ್ಲಿ ಎಲೆಕ್ಟ್ರೋಲ್ ರೋಲ್ ರಿವಿಷನ್ ಆಗಿ ಚುನಾವಣೆಗಳು ಆಗಬೇಕಾಗಿತ್ತು. ಆದರೆ ನಮ್ಮ ಸರ್ಕಾರವನ್ನು ಯಾವ ಪ್ರಕಾರ ವಜಾ ಮಾಡಿದರು. ಎಂದು ತಮಗೆ ತಿಳಿದಿದೆ, ಈ ಒಂದು ಪ್ರಜಾತಂತ್ರದ ವ್ಯವಸ್ಥೆಯ ಮೇಲೆ ಘದಾ ಪ್ರಹಾರ ಮಾಡಿರುವುದು ನಿಜವಾಗಿಯೂ ಶೋಚನೀಯವಾದ ವಿಚಾರವಾಗಿದೆ. ಆದ್ದರಿಂದ ನಮಗೆ ಚುನಾವಣೆ ಮಾಡಲಿಕ್ಕೆ ಸಾಧ್ಯವಾಗಲಿಲ್ಲ.

ಇವತ್ತು ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ, ಬಹಳ ಸಂತೋಷ, ಮಾಡಿ. ಆದಷ್ಟು ಬೇಗ ಮಾಡಿ. ಅಲ್ಲಿ ಜನರ ಪ್ರತಿನಿಧಿಗಳು ಇರಬೇಕು. ಅದೇ ರೀತಿ ಎ. ಪಿ. ಎಂ. ಸಿ.ಗೆ ಚುನಾವಣೆ ಆಗಬೇಕಾಗಿದೆ. ಸಹಕಾರ ಸಂಘಗಳ ಚುನಾವಣೆ ಆಗಬೇಕಾಗಿದೆ ಆ ಚುನಾವಣೆಗಳು ಸಹ ಆದಷ್ಟು ಬೇಗನೆ ಆಗಬೇಗನೆ ಆಗಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ಜವಹಾರ್ ರೋಜ್‌ಗಾರ್ ಯೋಜನೆ ಬಗ್ಗೆ ಹೇಳಿದ್ದಾರೆ. ಈ ಯೋಜನೆಯಿಂದ, ನಾನು ಬಹಳ ವಿನಯದಿಂದ ಹೇಳುತ್ತಿದ್ದೇನೆ ಇದರಿಂದ ಅಭಿವೃದ್ಧಿ ಕುಂಠಿತವಾಗಿದೆ. ಇದರಿಂದ ಬಡಜನರ ಮೇಲೆ ಸಾಕಷ್ಟು ಪರಿಣಾಮವಾಗಿದೆ. ಬಡವರಿಗೆ ಉದ್ಯೋಗಾವಕಾಶ ಸಿಕ್ಕುತ್ತಿಲ್ಲ. ಹೀಗಾಗಿ ಈ ಯೋಜನೆ ಬಗ್ಗೆ ಪುನರ್ ಪರಿಶೀಲನೆಯನ್ನು ಕೇಂದ್ರದಲ್ಲಿ ನಮ್ಮ ಸರ್ಕಾರ ಸಹ ಮಾಡಬೇಕಾಗಿದೆ ಈ ಯೋಜನೆಯನ್ನು ಕೇಂದ್ರ ಸರ್ಕಾರ ಮಾಡಿದ್ದು ಎಂದು ಹೇಳಿದ್ದಾರೆ. ಈ ಒಂದು ಯೋಜನೆಯಲ್ಲಿ ಡೆಲ್ಲಿಯಿಂದ ಕಂಟ್ರೋಲ್ ಮಾಡುವುದು ಏನಿದೆ ? ಡೀಸೆಂಟ್ರಲೈಜೇಷನ್ ಅಲ್ಲ ಸೆಂಟ್ರಲೈಜೇಷನ್ ಆಗಿದೆ. ಡೆಲ್ಲಿಯಿಂದ ನೇರವಾಗಿ ಹಣ ಮಂಡಳಿಗೆ ಹೋಗಬೇಕು. ಮಂಡಳಿಯನ್ನು ಕಂಟ್ರೋಲ್ ಮಾಡುವ ಸೆಂಟ್ರಲೈಜೇಷನ್ ಸ್ಕೀಂ ಇದು. ಹೀಗಾಗಿ ಡೀಸೆಂಟ್ರಲೈಜೇಷನ್ ಆಗಲಿಕ್ಕೆ ಸಾಧ್ಯವಿಲ್ಲ, ಮೂರನೆಯದಾಗಿ ಏನಾಗಿದೆ ಎಂದರೆ ಉತ್ತರ ಕನ್ನಡ ಜಿಲ್ಲೆಗೆ ಬರುವ ಹಣ ಏನಿದೆ ಅದಕ್ಕಿಂತ ಕಡಿಮೆ ಹಣ ಬರುತ್ತಿದೆ ಜವಹಾರ್ ಯೋಜನೆ ಏನಿದೆ ಇದರಲ್ಲಿ ಹೊಸದೇನೂ ಇಲ್ಲ. ಹಿಂದೆ ಇದ್ದ ಎನ್. ಆರ್. ಇ. ಪಿ., ಆರ್. ಎಲ್. ಇ. ಜಿ. ಪಿ ಎಲ್ಲಾ ಯೋಜನೆಗಳು ಕೂಡಿ ಒಂದು ಹೆಸರು ಹೊಂದಿದೆ ಅಷ್ಟೆ, ಇದು ಪೊಲಿಟಿಕಲ್ ಸ್ಟಂಟ್ ಚುನಾವಣೆಯನ್ನು ಕಣ್ಮುಂದೆ ಇಟ್ಟುಕೊಂಡು ಮಾಡಿರುವುದು. ಈ ಪ್ರಕಾರ ಪೊಲಿಟಿಕಲ್ ಸ್ಟಂಟ್ ಮಾಡಿದ್ದಾರೆಯೇ ಹೊರತು ಬಡವರ ಪರವಾಗಿ ಗ್ರಾಮಾಂತರ ಪ್ರದೇಶದ ಅಭಿವೃದ್ಧಿಗಾಗಿ ಇದರಿಂದ ಏನೂ ಪ್ರಯೋಜನವಿಲ್ಲ. ಇದರಿಂದ ಯಾವುದೂ ಅಭಿವೃದ್ಧಿ ಯಾಗಿಲ್ಲ. ಇವತ್ತು ಈ ಯೋಜನೆಯಲ್ಲಿ ಉದ್ಯೋಗಿಗಳಿಗೆ ಕನಿಷ್ಟ ೫೦ ದಿನಗಳಾದರೂ ಕೆಲಸ ಕೊಡಬೇಕೆಂದು ಇದೆ, ನಿರುದ್ಯೋಗಿಗಳು ಯಾರಿದ್ದಾರೆ ಅವರಲ್ಲಿ ೫೦ ದಿನ ಉದ್ಯೋಗವಕಾಶವನ್ನು ಕೊಡಬೇಕೆಂದು ಇದೆ. ಆದರೆ ಕೇಂದ್ರ ಸರ್ಕಾರ ಏನು ಹಣವನ್ನು ಈ ಯೋಜನೆಗಾಗಿ ಬಿಡುಗಡೆ ಮಾಡಿದೆ ಅದರಿಂದ ಕೇವಲ ೫–೬ ದಿನ ಕೂಡ ಕೆಲಸ ಕೊಡಲಿಕ್ಕೆ ಸಾಧ್ಯವಿಲ್ಲ. ಇದನ್ನು ಸರ್ಕಾರ ಪರಿಶೀಲನೆ ಮಾಡಬೇಕು. ಇವತ್ತು ಕೇಂದ್ರದಲ್ಲಿ ಬೇರೆ ಸರ್ಕಾರ ಇದೆ. ಅವರಾದರೂ ಈ ಯೋಜನೆಯನ್ನು ಬದಲಾವಣೆ ಮಾಡಬೇಕು. ಇದರಲ್ಲಿ ಸತ್ಯ ಇದ್ದರೆ ರಾಜೀವ್ ಗಾಂಧಿಯವರಾದರೂ ಯೋಜನೆಯನ್ನು ಬದಲಾವಣೆ ಮಾಡಲಿಕ್ಕೆ ಸಲಹೆ ಮಾಡಲಿಕ್ಕೆ ಸಾಕು ಇದರಲ್ಲಿ ಮಲೆನಾಡಿನ ಹಿತವನ್ನು ಕಾಪಾಡಿಕೊಂಡು ಹೋಗಬೇಕು. ಅದು ಉತ್ತರ ಕನ್ನಡ ಜಿಲ್ಲೆ ಇರಬಹುದು, ಸೌತ್ ಕೆನರಾ ಇರಬಹುದು, ಕೊಡಗು, ಶಿವಮೊಗ್ಗ ಇರಬಹುದು ಯಾವುದೇ ಜಿಲ್ಲೆಯಾದರೂ ಅದರ ಹಿತವನ್ನು ಕಾಪಾಡಬೇಕು. ಈಗಾಗಲೇ ಹೇಳಿದ ಹಾಗೆ ಇದು ಮತ್ತೊಂದು ಅನ್ಯಾಯ. ತಾವು, ಏನು ಮಾಡಿದಿರಿ ಎಂದು ಕೇಳಬಹುದು. ಇದರ ಬಗ್ಗೆ ನಾವು ಸಾಕಷ್ಟು ಪ್ರಯತ್ನ ಮಾಡಿದ್ದೇವೆ. ಆದರೆ ಕೇಂದ್ರ ಸರ್ಕಾರ ಎಲ್ಲಿಯುವರೆಗೆ ತಮ್ಮ

ನಿಯಮದಲ್ಲಿ ಬದಲಾವಣೆ ಮಾಡುವುದಿಲ್ಲ ಅಲ್ಲಿಯವರೆಗೆ ರಾಜ್ಯ ಸರ್ಕಾರಕ್ಕೆ ಸಾಧ್ಯವಿಲ್ಲ. ಜವಹಾರ್ ರೋಜ್‌ಗಾರ್ ಯೋಜನೆ ಇರಲಿ, ಆರ್.ಎಲ್.ಇ.ಜಿ.ಪಿ. ಇರಲಿ; ಎನ್.ಆರ್.ಇ.ಪಿ. ಇರಲಿ, ಅದರಲ್ಲಿ ಬರುವ ಹಣ ಏನಿದೆ ಅದು ಆ ಜಿಲ್ಲೆಯ ಜನಗಳಿಗೆ ಮುಟ್ಟಬೇಕು. ಯೋಜನೆಗೆ ಬರತಕ್ಕ ಹಣ ಅಲ್ಲಿನ ಜನಸಂಖ್ಯೆಗನುಗುಣವಾಗಿ ಬರುತ್ತದೆ. ಆದರೆ ಮಲೆನಾಡು ಜಿಲ್ಲೆಗಳು ಏನಿವೆ ಅಲ್ಲಿ ಜನಸಂಖ್ಯೆ ಕಡಿಮೆ ಇದ್ದು ಭೌಗೋಳಿಕವಾಗಿ ಬಹಳ ದೊಡ್ಡ ವಿಸ್ತಾರ ಇದೆ. ಆದುದರಿಂದ ಅಲ್ಲಿ ಬರುವ ಹಣ ಕಡಿಮೆ. ಆದರೆ ಸಮಸ್ಯೆಗಳು ಬಹಳ. ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ಮಂಡಲ ಅಂದರೆ ಕನಿಷ್ಟ ೨೦-೨೫ ಹಳ್ಳಿಗಳು ಬರುತ್ತವೆ. ಧಾರವಾಡ, ಗುಲ್ಬರ್ಗ, ಬಿಜಾಪುರದಲ್ಲಿ ಒಂದು ಮಂಡಲ ಅಂದರೆ ಒಂದೆರಡು ಹಳ್ಳಿಗಳು ಮಾತ್ರ ಬರುತ್ತವೆ. ಅಲ್ಲಿ ಜನಸಂಖ್ಯೆ ೧೫-೨೦ ಸಾವಿರ ಇರುತ್ತದೆ. ಆದ್ದರಿಂದ ಅಲ್ಲಿಗೆ ಅನುದಾನಕೂಡ ಹೆಚ್ಚು ಬರುತ್ತದೆ. ಅಲ್ಲಿ ಎರಡು ಹಳ್ಳಿಗಳಿಗೆ ವಿದ್ಯುದೀಕರಣ ವಾದರೆ ಆಯಿತು ಎರಡು ಹಳ್ಳಿಗಳಿಗೆ ರಸ್ತೆ ಆದರೆ ಆಯಿತು. ಆದರೆ ಇಲ್ಲಿ ೨೦-೨೫ ಹಳ್ಳಿಗಳಿಗೆ ವಿದ್ಯುದೀಕರಣವಾಗಬೇಕು, ರಸ್ತೆಗಳು ಆಗಬೇಕು. ಆದರೂ ಬರುವ ಹಣ ಕಡಿಮೆ. ಹೀಗಾಗಿ ಭೌಗೋಳಿಕ ವಿಸ್ತಾರಕ್ಕೂ ಕೂಡ ವೈಟೇಜ್ ಕೊಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ಇದರಿಂದ ಇಡೀ ರಾಜ್ಯದಲ್ಲಿ ಸರ್ವಾಂಗೀಣ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗಬಹುದು. ಈ ಸಂದರ್ಭದಲ್ಲಿ ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿಗಾಗಿ ಒಂದು ಅಭಿವೃದ್ಧಿ ಮಂಡಳಿಯನ್ನು ತಾವು ಮಾಡಿದ್ದೀರಿ. ಅದೇರೀತಿ ಮಲೆನಾಡು ಪ್ರದೇಶದ ಜಿಲ್ಲೆಗಳ ಅಭಿವೃದ್ಧಿಗಾಗಿ ಮಲೆನಾಡು ಡೆವಲಪ್ಮೆಂಟ್ ಬೋರ್ಡ್ ಎಂದು ಮಾಡಿದರೆ ಮಲೆನಾಡು ಜಿಲ್ಲೆಗಳು ಅಭಿವೃದ್ಧಿ ಆಗುವುದಕ್ಕೆ ಸಾಧ್ಯವಾಗಬಹುದು ಎಂದು ನನ್ನ ಅನಿಸಿಕೆ. ರೈತರ ವಿಚಾರ ಬಂದಾಗ ನಾವೆಲ್ಲರೂ ಮಾತನಾಡುತ್ತೇವೆ ರೈತರು ನಮ್ಮ ದೇಶದ ನಮ್ಮ ಪಕ್ಷದ ಬೆನ್ನೆಲುಬು ಎಂದು ಹೇಳುತ್ತೇವೆ. ಇದರ ಬಗ್ಗೆ ಯಾವ ಪಕ್ಷದ್ದೂ ಭಿನ್ನಾಭಿಪ್ರಾಯ ಇಲ್ಲ. ಹಾಗಾದರೆ ರಾಜ್ಯಪಾಲರ ಭಾಷಣದಲ್ಲಿ ರೈತರ ಬಗ್ಗೆ ಏತಕ್ಕೆ ಏನೂ ಹೇಳಿಲ್ಲ. ರೈತರಿಗೆ ಸಾಲ ಮನ್ನಾ ಮಾಡುತ್ತೇವೆಂದು ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. ಆದರೆ ರಾಜ್ಯಪಾಲರ ಭಾಷಣದಲ್ಲಿ ಏತಕ್ಕೆ ಹೇಳಲಿಲ್ಲ ? ಕೇಂದ್ರ ಸರ್ಕಾರದವರು ಇದರ ಬಗ್ಗೆ ಹೇಳಿದ್ದಾರೆ. ನಿನ್ನೆ ರಾಷ್ಟ್ರಾಧ್ಯಕ್ಷರು ತಮ್ಮ ಭಾಷಣದಲ್ಲಿ ೧೦ ಸಾವಿರ ರೂಪಾಯಿವರೆಗಿನ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ. ಅದೇರೀತಿ ತಮ್ಮ ಕಮಿಟ್‌ಮೆಂಟ್ ಇದ್ದರೆ ಇಲ್ಲಿನ ರಾಜ್ಯಪಾಲರ ಭಾಷಣದಲ್ಲೂ ಬರಬೇಕಾಗಿತ್ತು. ನೀವು ಚುನಾವಣಾ ಪ್ರಣಾಳಿಕೆಯಲ್ಲಿ ಈ ವಿಚಾರವನ್ನು ಹೇಳುವಾಗ ವಿಚಾರ ಮಾಡಿ ಹೇಳಬೇಕಾಗಿತ್ತು. ಕೇವಲ ಎಲೆಕ್ಷನ್ ಸ್ಟಂಟ್‌ಗೋಸ್ಕರ ಮಾಡುವುದು ಸರಿಯಲ್ಲ. ರೈತರು ಇವತ್ತು ಕಂಗಾಲಾಗಿದ್ದಾರೆ. ಅವರಿಗೆ ಸಾಲದ ಭಾರ ಹೆಚ್ಚಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ನಮಗೆ ನಿಮಗೆ ಒಳ್ಳೆ ಬಾಂಧವ್ಯ. ಸ್ನೇಹ ಉಂಟು. ಮಾನ್ಯ ಅಧ್ಯಕ್ಷರೇ, ಆರು ವರ್ಷದ ಹಿಂದೆ ಜನತಾ ಪಕ್ಷದ ಸರ್ಕಾರ ಬಂತು. ಹಿಂದೆ ಅವರು ರೈತರಿಗೆ ಅನೇಕ ಭರವಸೆಗಳನ್ನು ಕೊಟ್ಟು ಬಂದರು, ಅವರ ಸಹಕಾರ, ಬೆಂಬಲ ತೆಗೆದುಕೊಂಡು ಬಂದರು. ಬಂದ ಮೇಲೆ ಏನೂ ನೀವು ಮಾಡಲಿಲ್ಲ ಎಂದು ರೈತರೇ ಒಂದು ರಾಜಕೀಯ ಪಕ್ಷ ಮಾಡಿಕೊಂಡರು. ಮತ್ತೆ ರೈತರ ಬಗ್ಗೆ ಮಾತನಾಡುತ್ತಾರೆ. ರೈತರು ಅತೃಪ್ತರಾಗಿ ಬೇರೆ ಪಕ್ಷ ಮಾಡಿಕೊಂಡು ಇದಕ್ಕೆ ಕಾರಣ ನಾವಲ್ಲ. ಜನತಾ ಪಕ್ಷ ಕಾರಣ. ನೀವೂ ಮಂತ್ರಿಯಾಗಿದ್ದಿರಿ. ರೈತರಿಗೆ ಏನೇನು ಮಾಡಬೇಕಾಗಿತ್ತೋ ಅದನ್ನು ನೀವು ಮಾಡಬಹುದಾಗಿತ್ತು. ಮಾನ್ಯ ಬಾಬೂಗೌಡರು ಚೆನ್ನಾಗಿ ಮಾತನಾಡಿದರು. ರೈತರಿಗೆ ಏನೇನು ಮಾಡಬೇಕು ಎಂಬುದನ್ನು ಹೇಳಿದರು. ನೀವು ಅಧಿಕಾರದಲ್ಲಿದ್ದಾಗ ರೈತರ ಸಾಲ ಎಷ್ಟೆಷ್ಟು ವಜಾ ಮಾಡಬೇಕಾಗಿತ್ತೋ ಅದನ್ನು ಮಾಡಿ ಈಗ ನೀವು ಈ ರೀತಿ ಮಾಡಿ ಎಂದು ಎದೆ ತಟ್ಟಿಕೊಂಡು ಹೇಳಿದ್ದರೆ ನಾನು ಸಂತೋಷಪಡುತ್ತಿದ್ದೆ. ಈ ಹಿನ್ನೆಯಲ್ಲಿ ಮಾತನಾಡಬೇಕು ತಾವು.

ಶ್ರೀ ಆರ್.ವಿ. ದೇಶಪಾಂಡೆ.—ಮಾನ್ಯ ಮಂತ್ರಿಗಳು ಒಂದು ವಿಚಾರ ಮಾಡಬೇಕು. ಜನತಾದಳದ ಸರ್ಕಾರ ರೈತರಿಗೆ ಮಾಡಿರುವಷ್ಟು ಸಹಾಯ ರಾಜ್ಯದ ಇತಿಹಾಸದಲ್ಲಿ ಯಾವ ಸರ್ಕಾರವೂ ಮಾಡಿಲ್ಲ. ಇದನ್ನು ನಾನು ಹೆಮ್ಮೆಯಿಂದ ಹೇಳುತ್ತಿದ್ದೇನೆ. ನಾವು ಸಕಾಲದಲ್ಲಿ ಸಾಲ ಮರುಪಾವತಿ ಮಾಡಿದ ರೈತರ ಸಾಲಕ್ಕೆ ಬಡ್ಡಿ ಮನ್ನಾ ಮಾಡಿದ್ದೇವೆ. ವಿಫಲವಾದ ಬಾವಿ ಸಾಲ ಮನ್ನಾ ಮಾಡಿದ್ದೇವೆ. ರಾಜಸ್ಥಾನದಲ್ಲಿ ಯು.ಪಿ.ಯಲ್ಲಿ ಮಾಡಿದ್ದಾರೆಯೇ ? ನೀವು ಏನು ಮಾಡಿದ್ದಿರಿ ? ಗುಂಡೂರಾವ್ ಅವರು ಮುಖ್ಯಮಂತ್ರಿಯಾಗಿದ್ದಾಗ ನೀವು ರೈತರಿಗೆ ಗುಂಡು ಹಾರಿಸಿದಿರಿ.

ಶ್ರೀ ಎಂ.ಎಚ್. ಹಿಂಡಸಗೇರಿ.—ರಷೀದ್ ಮರ್ಡರ್ ಕೇಸ್‌ನಲ್ಲಿ ಹಿಂದಿದ್ದ ಹೋಮ್ ಮಿನಿಸ್ಟರ್ ರಾಜೀನಾಮೆ ಕೊಟ್ಟರು. ಆಗಿದ್ದ ಎಸ್.ಪಿ. ಈಗ ಒಳಗಿದ್ದಾರೆ, ಯಾರಿಗೆ ಗುಂಡು ಹಾರಿಸಿದ್ದೀರಿ ?

ಶ್ರೀ ಪಿ ಜಿ.ಆರ್. ಸಿಂಧ್ಯ —(****) ನೀವು ರೈತರ ಮೇಲೆ (**) ಕೇಸ್ ಹಾಕಿದ್ದೀರಿ. ನಾಚಿಕೆಯಾಗಬೇಕು ನಿಮಗೆ. ಮಾನ್ಯ ಅಧ್ಯಕ್ಷರೇ, ಅವರು ಹೇಳಿದ ಮಾತನ್ನು ವಿತ್‌ಡ್ರಾ ಮಾಡಿಕೊಳ್ಳಬೇಕು. ರೆಕಾರ್ಡ್‌ನಿಂದ ತೆಗೆಯಬೇಕು. ಯಾವುದಕ್ಕೂ ಮಿತಿ ಇರಲಿ.

ಶ್ರೀ ಆರ್ ವಿ. ದೇಶಪಾಂಡೆ.—ರೆಕಾರ್ಡ್‌ನಿಂದ ಅದನ್ನು ತೆಗೆಯಬೇಕು.

ಅಧ್ಯಕ್ಷರು.—ಆಯಿತು.

ಆದುದರಿಂದ ಮಾನ್ಯ ಅಧ್ಯಕ್ಷರೇ, ಇವತ್ತು ರೈತರ ಪರವಾಗಿ ಏನು ಮಾಡುತ್ತೇವೆಂದು ಸ್ಪಷ್ಟವಾದ ನೀತಿ ಸರ್ಕಾರದಲ್ಲಿ ಇಲ್ಲ. ೭ ರೂಪಾಯಿ ಬಡ್ಡಿ ಬಗ್ಗೆ ತಾವು ಏನು ಮಾಡುತ್ತೀರಿ ? ಇದನ್ನು ನಬಾರ್ಡ್ ಮಾಡಬೇಕು. ಇಲ್ಲಿ ಏನೇ ಮಾಡಿದರೂ ಡಿಲ್ಲಿಗೆ ಹೋದಮೇಲೆ ಮತ್ತೆ ಛೇಂಜ್ ಮಾಡಬೇಕಾಗುತ್ತದೆ. ಇವತ್ತು ರೈತರಿಗೆ ೭ ರೂಪಾಯಿ ಬಡ್ಡಿ ಕೊಡುವುದಕ್ಕೆ ತಯಾರು ಇಲ್ಲ.

ಅಧ್ಯಕ್ಷರು.— ಮಾನ್ಯ ಸದಸ್ಯರು ಉಪಯೋಗಿಸಿದ ಪದ ಸುಳ್ಳು ಎಂದು ಏನು ಇದೆ ಅದು ಅನ್‌ಪಾರ್ಲಿಮೆಂಟರಿಯಾದ್ದರಿಂದ ಅದನ್ನು ಕಡತದಿಂದ ತೆಗೆಯುವುದಕ್ಕೆ ಸೂಚನೆ ಮಾಡುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.— ತಾವು ಒಪ್ಪಿಕೊಂಡರೆ ನಬಾರ್ಡ್‌ನವರ ಜೊತೆ ನಾವೂ ನೀವೂ ಕುಳಿತು ಕನ್ವಿನ್ಸ್ ಮಾಡೋಣ. ರೈತರು ದೇಶದ ಬೆನ್ನೆಲುಬು ಎಂದು ಹೇಳುತ್ತಿದ್ದೇವೆ. ಇವತ್ತು ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳಿಗೆ ಕೋಟಿಗಟ್ಟಲೆ ಸಾಲ ಕೊಟ್ಟಮೇಲೆ ಅವರು ದೀವಾಳಿಯಾದರೆ ಅವರಿಗೆ ಸಾಲ ಮನ್ನ ಮಾಡುತ್ತೀರಿ. ಇಂಟರೆಸ್ಟ್ ಕನ್ಸೆಷನ್ ಕೊಡುತ್ತೀರಿ. ಇವತ್ತು ರೈತರು ಬೆಳೆದ ಬೆಳೆಗೆ ಯೋಗ್ಯವಾದ ಬೆಲೆ ಸಿಗುವುದಿಲ್ಲ. ಅವರ ಸಾಲವನ್ನು ಮನ್ನ ಮಾಡುವುದಿಲ್ಲ. ಇದಕ್ಕೆ ನಾವೂ ನೀವೂ ಇಬ್ಬರೂ ಜವಾಬ್ದಾರರು. ಇದಕ್ಕೆ ಇವತ್ತು ಸರ್ಕಾರ ಸಿದ್ಧ ಇದೆಯೋ ಇಲ್ಲವೋ ಎಂದು ಕೇಳುತ್ತೇನೆ. ಇವತ್ತು ನಬಾರ್ಡ್‌ನವರು ಒಂದು ಆದೇಶ ಕೊಟ್ಟಿದ್ದಾರೆ. ೩೦.೧೨.೮೯ರೊಳಗೆ ಸಹಕಾರಸಂಘಗಳಿಗೆ ಏನು ಸಬ್ಸಿಡಿ ಹಣ ಸಿಗಬೇಕೋ ಅದು ಸಿಗದೇ ಇದ್ದರೆ ರೀಫೈನಾನ್ಸ್ ಬಂದ್ ಮಾಡುತ್ತೇವೆಂದು ಹೇಳಿದ್ದಾರೆ. ಇದಕ್ಕೆ ಸರ್ಕಾರ ಏನು ಮಾಡಬೇಕು ? ರಾಷ್ಟ್ರಪತಿ ಆಡಳಿತ ಇದ್ದಾಗ ರಾಜ್ಯದಲ್ಲಿ ಹಣಕಾಸಿನ ಪರಿಸ್ಥಿತಿ ಸುಧಾರಣೆ ಆಗಿದೆ ಎಂದು ರಾಜ್ಯಪಾಲರು ಸಾಕಷ್ಟು ಸಾರಿ ಹೇಳಿದ್ದಾರೆ. ಸಾಕಷ್ಟು ರೆವಿನ್ಯೂ ಬಂದಿದೆ ಎಂದು ಹೇಳಿದ್ದಾರೆ. ಹಾಗಿದ್ದರೆ ಇವತ್ತು ಹಣವನ್ನು ಏಕೆ ರಿಲೀಸ್ ಮಾಡಿಲ್ಲ ? ಹಣಕಾಸಿನ ಪರಿಸ್ಥಿತಿಯನ್ನು ನಾವು ಕೆಡಿಸಿದ್ದೇವೆ ಎಂದು ಹೇಳುತ್ತಿದ್ದೀರಿ. ಈಗ ರಾಜ್ಯಪಾಲರ ಆಡಳಿತ ಮುಗಿದಿದೆ. ಇವತ್ತು ತಾವು ಹೇಳಬೇಕಾಗಿದೆ, ಎಷ್ಟು ಹಣವನ್ನು ಸೊಸೈಟಿಗಳಿಗೆ ರಿಲೀಸ್ ಮಾಡುತ್ತೀರಿ ? ಇವತ್ತು ರೈತರಿಗೆ ಸಾಲ ಸಿಗುವುದಕ್ಕೆ ತೊಂದರೆ ಇದೆ. ೩೧.೧೨.೮೯ರೊಳಗೆ ಹಣವನ್ನು ರಿಲೀಸ್ ಮಾಡಬೇಕಾಗಿದೆ. ಕಳೆದ ವರ್ಷ ಭೂ ಅಭಿವೃದ್ಧಿ ಬ್ಯಾಂಕ್‌ನವರು ೫೫ ಕೋಟಿ ರೂಪಾಯಿಗಳ ಕಾರ್ಯಕ್ರಮ ಅಪ್ರೂವ್ ಮಾಡಿದ್ದರು. ಹಾಗೂ ೧೦೦ ಕೋಟಿ ರೂಪಾಯಿ ಫೈನಾನ್ಸ್ ಮಾಡಿದ್ದರು. ಈ ವರ್ಷ ೮೫ ಕೋಟಿ ರೂಪಾಯಿಗಳ ಪ್ರೋಗ್ರಾಂ ಅಪ್ರೂವ್ ಮಾಡಿದ್ದಾರೆ. ಆದರೆ ರೈತರಿಗೆ ಇವತ್ತಿನವರೆಗೆ ಸಿಕ್ಕಿರತಕ್ಕ ಸಾಲ ಕೇವಲ ೩೫ ಕೋಟಿ ರೂಪಾಯಿಗಳು. ಏಕೆಂದರೆ ಬಡ್ಜೆಟ ನಲ್ಲಿ ಡಿಬೆಂಚರ್ ಫ್ಲೋಟ್ ಮಾಡಬೇಕಾದರೆ ಸರ್ಕಾರ ಕಾಂಟ್ರಿಬ್ಯೂಷನ್ ಮಾಡಬೇಕಾಗುತ್ತದೆ. ಈ ಬಗ್ಗೆ ೫ ಕೋಟಿ ೮೫ ಲಕ್ಷ ರೂಪಾಯಿ ಸರ್ಕಾರದಿಂದ ಕಾಂಟ್ರಿಬ್ಯೂಷನ್ ಬರಬೇಕಾಗಿದ್ದು ಕೇವಲ ೨ ಕೋಟಿ ೨೦ ಲಕ್ಷ ರೂಪಾಯಿ ಬಂದಿದೆ. ಈ ಹಣ ಎಕ್ಸಾಸ್ಟ್ ಆಗಿದೆ. ಇವೊತ್ತು ಡಿಬೆಂಚರ್ ಫ್ಲೋಟ್ ಆಗುತ್ತಾ ಇಲ್ಲ. ಹಾಗಾಗಿ ರೈತರಿಗೆ ಸಾಲ ಸಿಗುತ್ತಾ ಇಲ್ಲ. ಈ ಬಗ್ಗೆ ಮಾನ್ಯ ಹಣಕಾಸಿನ ಹಾಗೂ ಮುಖ್ಯಮಂತ್ರಿಗಳು ಬೆಳಕು ಚೆಲ್ಲಬೇಕಾಗುತ್ತದೆ. ತಾವು ರೈತರ ಸಹಾಯಕ್ಕೆ ಹೋಗುತ್ತೀರೋ ಇಲ್ಲವೋ ? ಇದನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಆ ಪ್ರಕಾರ ನಾವು ಈಗ ಕೇಂದ್ರ ಸರ್ಕಾರ ಮಾಡಿರತಕ್ಕ ಒಂದು ಘೋಷಣೆಯನ್ನು ಮೆಚ್ಚಬೇಕಾಗುತ್ತದೆ. ೧೦ ಸಾವಿರ ರೂಪಾಯಿಂವರೆಗಿನ ಸರ್ಕಾರಿ ಸಾಲವನ್ನು ಮನ್ನಾ ಮಾಡುತ್ತೇವೆಂದು ರಾಷ್ಟ್ರಪತಿಗಳು ಹೇಳಿದ್ದಾರೆ. ಇದರ ಬಗ್ಗೆ ರಾಜ್ಯ ಸರ್ಕಾರದ ನೀತಿ ಏನು ? ಇದರ ಬಗ್ಗೆ ತಮ್ಮ ನೀತಿ ಏನು ? ಅದನ್ನೂ ಕೂಡಾ ಇವತ್ತು ಸ್ಪಷ್ಟ ಮಾಡಬೇಕಾಗಿದೆ. ರೈತರ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ. Farmers will be provided technical gudiance, fertilizers and seeds. ಬಹಳ ಸಂತೋಷ, ನಾನು ಒಂದು ಸಲಹೆ ಮಾಡುತ್ತೇನೆ. ರೈತರಿಗೆ ಸಿಂಗಲ್ ವಿಂಡೋಸಿಸ್ಟಂ ಮಾಡಿ. ರೈತರಿಗೆ ಸಕಾಲದಲ್ಲಿ ಬೀಜ ಸಿಗಬೇಕು, ಗೊಬ್ಬರ ಸಿಗಬೇಕು, ಪೆಸ್ಟಿಸೈಡ್ಸ್ ಸಿಗಬೇಕು, ತಾಂತ್ರಿಕ ಗೈಡ್‌ಲೈನ್ಸ್ ಸಿಗಬೇಕು. ಸಾಲ ಸಿಗಬೇಕು. ಅದಕ್ಕೆ ಒಂದು ಲೀಗಲೈಸ್ ಪಾಸ್‌ಬುಕ್ ಕೊಡಿ. ಆ ಕೆಲಸ

* ಅಧ್ಯಕ್ಷರ ಆದೇಶದ ಮೇರೆಗೆ ತೆಗೆದುಹಾಕಲಾಗಿದೆ.

ಆಗಬೇಕಾಗಿದೆ. ಲೀಗಲ್ಸ್ ಪಾಸ್‌ಬುಕ್ ಇಶ್ಯೂ ಮಾಡಿದರೆ ಅವೊಂದು ಆಧಾರದಮೇಲೆ ರೈತರಿಗೆ ಎಲ್ಲಾ ರಿಯಾಯಿತಿಗಳನ್ನು ಎಲ್ಲಾ ಸಹಾಯಗಳನ್ನು ಮಾಡಲಿಕ್ಕೆ ಸಾಧ್ಯವಾಗಬಹುದು. ರೈತರ ಮೇಲೆ ಸಾಕಷ್ಟು ಸಾಲದ ಹೊರೆ ಇದೆ. ಅವರ ಉತ್ಪಾದನೆ ಹೆಚ್ಚಾಗಬೇಕಾದರೆ ಅದು ಕೇವಲ ಕೃಷಿಯಿಂದ ಹೆಚ್ಚಾಗುವುದಕ್ಕೆ ಸಾಧ್ಯವಿಲ್ಲ. ಕೆಲವು ಸಬ್‌ಸಿಡಯರಿ ಅಕ್ಯುಪೇಷನ್ ಮಾಡಬೇಕಾಗುತ್ತದೆ, ಪೌಲ್ಟ್ರಿ, ಡೇರಿ ಇರಬಹುದು ಆ ತರಹ ಕಾರ್ಯಕ್ರಮಗಳನ್ನು ಮಾಡಬೇಕು, ಮುಂದಿನ ೨೦೦೦ದ ಇಸವಿಯ ಹೊತ್ತಿಗೆ ರೈತರು ಸಾಲದಿಂದ ಮುಕ್ತರಾಗಬೇಕಾದರೆ, ಎಷ್ಟು ಯೋಗ್ಯವಾದ ಸಾಲ ಸಿಗಬೇಕಾದರೆ ಇಂತಹ ಕಾರ್ಯಕ್ರಮಗಳಿಗೆ ಸರ್ಕಾರ ಚಾಲನೆಯನ್ನು ಕೊಡಬೇಕಾಗಿದೆ, ಆ ದೃಷ್ಟಿಯಲ್ಲಿ ರೈತರ ಪರವಾಗಿ ಸ್ಪಷ್ಟವಾದ ನೀತಿ ರಾಜ್ಯಪಾಲರ ಭಾಷಣದಲ್ಲಿ ಇಲ್ಲ. ರೈತರ ಸಲುವಾಗಿ ಸ್ಪಷ್ಟವಾದ ನೀತಿ ಏನು ? ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಾಗುತ್ತದೆ. ರೈತರಿಗೆ ೧೫ ಸಾವಿರದ ತನಕ ಸ್ಟ್ಯಾಂಪ್ ಡ್ಯೂಟಿ ಕನ್ಸೆಷನ್ ಇದೆ. ಇದು ಸಣ್ಣ ರೈತರಿಗೆ ಮಾತ್ರ ಆ ಅವಧಿ ಬರುವ ಮಾರ್ಚಿ ತಿಂಗಳಿನೊಳಗೆ ಮುಗಿಯುತ್ತಿದೆ. ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದೊಳಗೆ ಆ ಸ್ಲ್ಯಾಬ್ ಹೆಚ್ಚು ಇದೆ. ಆದ್ದರಿಂದ ಸ್ಟ್ಯಾಂಪ್ ಡ್ಯೂಟಿ ಎಕ್ಸೆಮ್ಷನ್ ಎಲ್ಲಾ ರೈತರಿಗೂ ಸಿಗುವಂತೆ ಆಗಬೇಕು. ಕನಿಷ್ಟ ಅದು ೪೦ ಸಾವಿರದವರೆಗೆ ಇರಬೇಕು. ಇರಿಗೇಷನ್‌ನಲ್ಲಿ ರೈತರಿಗೆ ಮಿನಿಮಮ್ ೩೦ ಸಾವಿರ ರೂಪಾಯಿ ಸಾಲ ಕೊಡುತ್ತೇವೆಂದು ಹೇಳುತ್ತಿದ್ದಾರೆ, ಇದು ಆದಷ್ಟುಬೇಗ ಸಿಗಬೇಕು. ಇದನ್ನು ಇನ್ನೂ ಹೆಚ್ಚಿಸಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ತೋಟಗಾರಿಕೆಯ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಅದರ ಬಗ್ಗೆ ಬಹಳ ಸಂತೋಷವಾಗಿದೆ. ತೋಟಗಾರಿಕೆಗೆ ಹೆಚ್ಚಿನ ಮಹತ್ವ ಕೊಡಬೇಕಾಗಿದೆ. ನಿಜವಾಗಿಯೂ ರೈತರ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕಾದರೆ, ಎಲ್ಲೆಲ್ಲಿ ತೋಟಗಾರಿಕೆ ಮಾಡಲಿಕ್ಕೆ ಸಾಧ್ಯವಿದೆ ಅಲ್ಲೆಲ್ಲಾ ರೈತರಿಗೆ ಉತ್ತೇಜನ ಕೊಡಬೇಕಾಗುತ್ತದೆ. ಆ ದಿಶೆಯಲ್ಲಿ ಉತ್ತರ ಕನ್ನಡ ಜಿಲ್ಲೆಗೆ ಪಾಮೊಯಿಲ್ ಸ್ಕೀಮ್‌ನಲ್ಲಿ ಎಕ್ಸ್‌ಪರ್‌ಮೆಂಟ್ ಬೇಸಿಸ್ ಮೇಲೆ ಈ ರಾಜ್ಯಕ್ಕೆ ಒಂದು ಸ್ಕೀಮ್ ಮಂಜೂರಾಗಿದೆ. ಪಾಮಾಯಿಲ್ ತಯಾರು ಮಾಡಲಿಕ್ಕೆ ಗಿಡಗಳನ್ನು ಬೆಳಸಲಿಕ್ಕೆ ಮತ್ತು ಇನ್ನಾವ ರೀತಿಯಲ್ಲಿ ಸಾಧ್ಯವಿದೆ ಎಂಬುದನ್ನು ಸರ್ಕಾರ ವಿಚಾರ ಮಾಡಬೇಕು. ಅದನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾಡಲಿಕ್ಕೆ ಸಾಧ್ಯವಾಗುತ್ತದೆ ಅದನ್ನು ಸರ್ಕಾರ ಪರಿಶೀಲಿಸಬೇಕು.

ಮಾನ್ಯ ಬೈರೇಗೌಡರು ಕೆ. ಇ. ಬಿ. ಮತ್ತು ಕೆ.ಎಸ್. ಆರ್. ಟಿ. ಸಿ. ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ. ರಾಷ್ಟ್ರಪತಿ ಆಡಳಿತದ ಕಾಲದಲ್ಲಿ ಇದನ್ನು ನಾನು ಬಹಳ ವಿನಯದಿಂದ ಹೇಳುತ್ತಿದ್ದೇನೆ, ಮಿತ್ರರು ಇದನ್ನು ಒಪ್ಪಿಕೊಳ್ಳಬೇಕಾಗುತ್ತದೆ ಎಷ್ಟೋ ಹಳ್ಳಿಗಳಲ್ಲಿ ಬಸ್ ರೂಟ್ಸ್‌ಗಳನ್ನು ಕ್ಯಾನ್ಸಲ್ ಮಾಡಿದ್ದಾರೆ. ಬಸ್‌ಗಳಿಗೆ ಡ್ರೈವರ್‌ಗಳು ಇದ್ದರೆ ಕಂಡಕ್ಟರ್‌ಗಳು ಇಲ್ಲ, ಕಂಡಕ್ಟರುಗಳು ಇದ್ದರೆ ಡ್ರೈವರ್‌ಗಳು ಇರಲಿಲ್ಲ. ಇನ್ನು ಕೆ. ಇ. ಬಿ ಯಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಇಲ್ಲ. ದಿನಾಂಕ ೧-೪-೧೯೮೯ರಿಂದ ಸಾಕಷ್ಟು ಹಣ ಖಜಾನೆಗೆ ಬಂದಿದೆಯೆಂದು ಹೇಳಿದರು. ಹಣವೆಲ್ಲ ಎಲ್ಲಿ ಹೋಯಿತು? ಟ್ರಾನ್ಸ್‌ಫಾರ್ಮರ್‌ಗಳು ಕಂಡಕ್ಟರ್‌ಗಳು ಇಲ್ಲ, ವೈರ್‌ಗಳು ಇಲ್ಲ, ಕೆ. ಇ. ಬಿ. ಯಲ್ಲಿ ಕಂಡಕ್ಟರ್ಸ್ ಇಲ್ಲ.

೧೨-೧೫ ಪಿ.ಎಂ.

ಮಾನ್ಯ ಸಚಿವರು ಇದರ ಬಗ್ಗೆ ಕೆಲವು ಸದಸ್ಯರ ಒಂದು ಸಭೆ ಕರೆದು ಚರ್ಚೆ ಮಾಡಬೇಕು. ಈ ರಾಜ್ಯದಲ್ಲಿ ಏನು ನಡೆಯುತ್ತದೆ ಎಂದು ನೋಡಬೇಕು. ಶ್ರೀ ಭೈರೇಗೌಡರು ಹೇಳಿದ್ದುದು ನಿಜ. ಟ್ರಾನ್ಸ್‌ಮಿಷನ್ ಲಾಸ್ ಎಷ್ಟು ಆಗುತ್ತಿದೆ? ಇದನ್ನು ಸರ್ಕಾರ ನೋಡಬೇಕಾಗುತ್ತದೆ. ಏನೋ ವಿರೋಧ ಪಕ್ಷದವರು ಹೇಳುತ್ತಾರೆ ಎಂದು ಸುಮ್ಮನೆ ಕೂಡುವುದಲ್ಲ, ಕೇಂದ್ರ ಸರ್ಕಾರದವರು ಒಂದು ಮಾತನ್ನು ಹೇಳಿದ್ದಾರೆ. ಪವರ್ ಶಾರ್ಟೇಜ್ ಇದೆ. ನಿಜ ಇದನ್ನು ಒಪ್ಪಿಕೊಳ್ಳುತ್ತೇನೆ. ಇದರಿಂದ ಇಂಡಸ್ಟ್ರಿಯಲೈಸೇಷನ್ ಆಗುತ್ತಿಲ್ಲ. ಯಾವ ರಾಜ್ಯ if it is not self-sufficient in power it cannot prosper. ಇವತ್ತು ಈ ದೇಶದಲ್ಲಿ ಅಭಿವೃದ್ಧಿಯಾಗಬೇಕಾದರೆ ರಾಜಕೀಯವಾಗಿ ಬೆಳವಣಿಗೆ ಆಗಬೇಕಾದರೆ, ರಾಜ್ಯದ ಪ್ರಗತಿ ಆಗಬೇಕಾದರೆ ಪವರ್ ವಿಷಯದಲ್ಲಿ ವಿದ್ಯುತ್ ಶಕ್ತಿ ಹೆಚ್ಚು ಉತ್ಪಾದನೆ ಮಾಡಲಿಕ್ಕೆ ನಾವು ಪ್ರಯತ್ನ ಮಾಡಬೇಕು. ಇದಕ್ಕೆ ಕಾರಣ ಯಾರು? ಇವತ್ತು ಕೇಂದ್ರ ಸರ್ಕಾರ ಏನು ಮಾಡಿದೆ? ಒಂದು ಕೈಗಾ ಪ್ರಾಜೆಕ್ಟ್ ಬಿಟ್ಟರೆ ಇವತ್ತು ಕೇಂದ್ರ ಸರ್ಕಾರದ ಇನ್ವೆಸ್ಟ್‌ಮೆಂಟ್ ಈ ರಾಜ್ಯದಲ್ಲಿ ಎಷ್ಟು? ನಾವು ಅಲ್ಲಿ ಕಂಳಿತು ಹೇಳುತ್ತಿದ್ದೆವು. ಈಗ ತಾವೇ ಹೇಳಿ, ತಮ್ಮ ಕೈಯಲ್ಲಿ ಅಧಿಕಾರ ಇದೆ. ಕೇಂದ್ರ ಸರ್ಕಾರ ನಮಗೇನು ಕೊಟ್ಟಿದೆ ಎಂದು ತಾವು ಚೆನ್ನಾಗಿಯೇ ಹೇಳಬಹುದು ಹೀಗಾಗಿ ಇವತ್ತು ಕೆ.ಇ.ಬಿ. ಕೆಲಸ, ಪಿ.ಡಬ್ಲ್ಯೂ.ಡಿ. ಕೆಲಸ

ಏನಾಗಿದೆ? ಅಸ್‌ಫಾಲ್ಟರ್ ಇಲ್ಲ. ಆಂಧ್ರ ಪ್ರದೇಶದವರು ತೆಗೆದುಕೊಂಡು ಹೋಗಿದ್ದಾರೆ. ತಮಿಳು ನಾಡಿನವರು ತೆಗೆದುಕೊಂಡು ಹೋಗಿದ್ದಾರೆ ಎಂದು ಹೇಳುವಾಗ ಇಲ್ಲಿ ಕೆಲಸ ನಿಂತುಹೋಗಿದೆ. ಇದು ತಮಗೂ ಗೊತ್ತಿರಬಹುದು. ಹೀಗಾಗಿ ಇವತ್ತು ಕೆಇಬಿ, ಕೆಎಸ್‌ಆರ್‌ಟಿಸಿ, ಪಿಡಬ್ಲ್ಯುಡಿ, ಜಿಲ್ಲಾಪರಿಷತ್ತುಗಳಲ್ಲೇ ಇರಬಹುದು ಯಾವ ಕೆಲಸಗಳೂ ಚೆನ್ನಾಗಿ ನಡೆಯುತ್ತಿಲ್ಲ. ಇದರ ಬಗ್ಗೆ ಸರ್ಕಾರ ವಿಚಾರ ಮಾಡಬೇಕಾಗಿದೆ. ಇದರ ಬಗ್ಗೆ ಆದಷ್ಟು ಬೇಗ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕು. ಇವತ್ತು ತಾವು ಸ್ಟೇಟ್ ಡಿಸ್ಟ್ರಿಬ್ಯೂಶನ್ ಬಗ್ಗೆ ಹೇಳಿದ್ದೀರಿ, ಒಳ್ಳೆಯ ಕೆಲಸ ಮಾಡಿ. ಒಳ್ಳೆಯ ಕೆಲಸವನ್ನು ಮಾಡಲಿಕ್ಕೆ ಬೇಕು. ಈ ದೇಶಕ್ಕೆ ಸ್ವಾತಂತ್ರ್ಯ ಬಂದು ೪೩ ವರ್ಷಗಳಾದರೂ ಸಹ ಇವತ್ತು ನೂರಕ್ಕೆ ಐವತ್ತರಷ್ಟು ಜನ ಕಡು ಬಡವರಿದ್ದಾರೆ. ಅವರಿಗೆ ಮನೆ ಇಲ್ಲ, ನಿವೇಶನ ಇಲ್ಲ. ಇದನ್ನೆಲ್ಲಾ ಮಾಡುವುದಕ್ಕೆ ಮೊದಲು ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಒಂದು ಸರ್ವೆ ಮಾಡಿ. ಈ ರಾಜ್ಯದಲ್ಲಿ ಎಷ್ಟು ಜನರಿಗೆ ನಿವೇಶನ ಬೇಕಾಗಿದೆ, ಎಷ್ಟು ಜನರಿಗೆ ಮನೆ ಬೇಕಾಗಿದೆ ಎಂದು ಇದರ ಬಗ್ಗೆ ಒಂದು ಸರ್ವೆ ಆಗಬೇಕಾಗಿದೆ, ಮತ್ತೊಂದು ನ್ಯಾಷನಲ್ ಹೌಸಿಂಗ್ ಬ್ಯಾಂಕ್. ಈ ದೇಶದಲ್ಲಿ ಮೊದಲಬಾರಿ ಕರ್ನಾಟಕ ರಾಜ್ಯದಲ್ಲಿ ನಮ್ಮ ಅಗ್ರಿಕಲ್ಚರಲ್ ರೂರಲ್ ಡೆವಲಪ್‌ಮೆಂಟ್ ಬ್ಯಾಂಕ್ ಮುಖಾಂತರ ಮನೆಗೆ ೫೦ ಸಾವಿರ ರೂಪಾಯಿ ತನಕ ಸಾಲ ಕೊಡುವ ವ್ಯವಸ್ಥೆಯನ್ನು ಮಾಡಿದೆ. ಕಳೆದ ಆರೇಳು ತಿಂಗಳಿಂದ ಈ ಯೋಜನೆ ರಾಜ್ಯದಲ್ಲಿ ಜಾರಿ ಬಂದಿದೆ. ಆದರೆ ಇದು ಈಗ ಕುಂಠಿತವಾಗಿದೆ. ಏಕೆ? ಸರ್ಕಾರ ಇದಕ್ಕೆ ಗ್ಯಾರಂಟಿ ಕೊಡಬೇಕು. ಸರ್ಕಾರ ಗ್ಯಾರಂಟಿ ಕೊಡದೇ ಇರುವುದರಿಂದ ಅವರು ರಿಜೆಕ್ಟ್ ಮಾಡಿದ್ದಾರೆ. ಎಷ್ಟು ಹಣವನ್ನು ಲ್ಯಾಂಡ್ ಬ್ಯಾಂಕ್ ಅಥವಾ ಅಪೆಕ್ಸ್ ಬ್ಯಾಂಕುಗಳು ಸಾಲವಾಗಿ ಕೊಡುತ್ತವೆ, ಪ್ರತಿಯೊಂದು ಹಂತದಲ್ಲಿ ಸರ್ಕಾರ ಬ್ಯಾಂಕ್ ಗ್ಯಾರಂಟಿ ಕೊಡುತ್ತದೆ. ಅದೇ ಪ್ರಕಾರ ನಿಜವಾಗಿಯೂ ಈ ಸರ್ಕಾರಕ್ಕೆ ಬಡವರಿಗೆ ಮನೆ ಸಿಗಬೇಕು, ನಿವೇಶನ ಸಿಗಬೇಕು ಎಂಬ ಕಮಿಟ್‌ಮೆಂಟ್ ಇದ್ದರೆ ಈ ಯೋಜನೆಗೆ ಸರ್ಕಾರದವರು ಗ್ಯಾರಂಟಿ ಕೊಡಬೇಕಾಗುತ್ತದೆ. ಆದರೆ ಈಗ ಗ್ಯಾರಂಟಿ ಕೊಡದೆ ರಿಜೆಕ್ಟ್ ಮಾಡಿದ್ದಾರೆ. ಆದ್ದರಿಂದ ಇದು ಏನೊಂದು ಉದ್ದೇಶ ಇದೆ, ಇದರಿಂದ ಎಷ್ಟೋ ಜನರಿಗೆ ಸಹಾಯ ಆಗುತ್ತದೆ. Safe and adequate drinking water will be provided to all the habitation in the State under the rural water supply scheme. ಇದರ ಬಗ್ಗೆ ನಾವು ಸಾಕಷ್ಟು ಕೇಂದ್ರ ಸರ್ಕಾರದ ಮೆಚ್ಚುಗೆಯನ್ನು ಪಡೆದಿದ್ದೇವೆ. ಇವತ್ತು ನಾವು ಶ್ರೀ ನಜೀರ್‌ಸಾಬ್ ಅವರನ್ನು ನೆನೆಸಿಕೊಳ್ಳಬೇಕು. ಆದರೆ ಇದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಏನೂ ಇಲ್ಲ. ಅರ್ಬನ್ ಏರಿಯಾ ಬಗ್ಗೆ ಯಾವ ಪ್ರಸ್ತಾಪವೂ ಇಲ್ಲ. ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಒಂದು ಶಬ್ದವಾದರೂ ಈ ಭಾಷಣದಲ್ಲಿ ಈ ಪಟ್ಟಣಗಳಲ್ಲಿ ಕುಡಿಯುವ ನೀರಿನ ಅಭಾವ ಇರುವುದನ್ನು ದೂರ ಮಾಡುವುದಕ್ಕೆ ಇಲ್ಲ. ನಮ್ಮ ಸರ್ಕಾರ ಕಳೆದ ವರ್ಷ ಹೆಚ್ಚು ಅಲೋಕೇಶನ್ ಮಾಡಿತ್ತು. ಪ್ರತಿವರ್ಷ ಅರ್ಬನ್ ವಾಟರ್ ಸಪ್ಲೈ ಡ್ರೈನೇಜ್ ಬೋರ್ಡ್‌ಗೆ ೧೦ ಕೋಟಿ ೯ ಕೋಟಿ ಕೊಟ್ಟು, ಕಳೆದ ವರ್ಷ ೨೫ ಕೋಟಿ ಕೊಟ್ಟಿದ್ದೆವು. ಅಧಿಕಾರಕ್ಕೆ ತಾವು ೨೧ನೇ ತಾರೀಖಿಗೆ ಬಂದಿರಿ, ನಮ್ಮನ್ನು ೨೧ನೇ ತಾರೀಕಿಗೆ ಮನೆಗೆ ಕಳಿಸಿದರು. ಹೊಸ ವರ್ಷ ಏಪ್ರಿಲ್ ೧ನೇ ತಾರೀಕಿಗೆ ಶುರುವಾಗಿದೆ.

ಶ್ರೀ ಪ್ರಭಾಕರ್ ಎಸ್. ರಾಣೆ.— ಏಪ್ರಿಲ್ ೨೧ರಂದು ಮನೆಗೆ ಕಳುಹಿಸಿದ್ದು ನಾವಲ್ಲ, ನಿಮ್ಮ ಕಚ್ಚಾಟವನ್ನು ಜನ ನೋಡಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ.— ಅದು ಒಂದು ಕಾರಣ ನಾನು ಒಪ್ಪುತ್ತೇನೆ. ನಮ್ಮಲ್ಲಿ ಒಡಕು ತಂದು ನೀವೂ ಸಾಕಷ್ಟು ಪ್ರಯತ್ನ ಮಾಡಿದಿರಿ, ನಾವು ೨೫ ಕೋಟಿ ಪ್ರಾವಿಷನ್ ಮಾಡಿದ್ದೆವು. ಅರ್ಬನ್ ವಾಟರ್ ಸಪ್ಲೈ ಬಗ್ಗೆ ಏನೂ ಇಲ್ಲ. ಹೀಗಾಗಿ ಮುನಿಸಿಪಲ್ ಚುನಾವಣೆ ಮಾಡುತ್ತೇವೆ, ಕಾರ್ಪೊರೇಷನ್ ಚುನಾವಣೆ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇವರಿಗೆ ಅರ್ಬನ್ ಏರಿಯಾ ಬಗ್ಗೆ ಚಿಂತೆ ಇಲ್ಲ. ಅಲ್ಲಿ ಕುಡಿಯುವ ನೀರಿನ ಅಭಾವದ ಬಗ್ಗೆ ಹೇಳಿಲ್ಲ.

ಶ್ರೀ ವಿನಯಕುಮಾರ್ ಸೊರಕೆ.— ನೀವು ಪ್ರಾವಿಷನ್ ಮಾಡಿದ್ದಿರಿ, ಇಂಪ್ಲಿಮೆಂಟ್ ಎಷ್ಟು ಎಂದು ಹೇಳಿ, ನಿಮ್ಮದು ಬರೀ ಪುಸ್ತಕದಲ್ಲಿ ಮಾತ್ರ.

ಶ್ರೀ ಆರ್.ವಿ. ದೇಶಪಾಂಡೆ.— ಹುಬ್ಬಳ್ಳಿಯಲ್ಲಿ ಹಿಂಡಸ್‌ಗೇರಿಯವರು ರೈಸ್ ಮಾಡಿದರು. ಮಲಪ್ರಭಾ ಸೆಕೆಂಡ್ ಸ್ಟೇಜ್‌ಗೆ ಸರ್ಕಾರದಿಂದ ಮಂಜೂರು ಮಾಡಿದ್ದೇವೆ. ೧೦೦ ಲಕ್ಷ ನಾನು ಮಂತ್ರಿಯಾಗಿದ್ದಾಗ ಹುಬ್ಬಳ್ಳಿ ಕಾರ್ಪೊರೇಷನ್‌ನಲ್ಲಿ ಠೇವಣಿ ಇಡಲಾಗಿದೆ ಹುಬ್ಬಳ್ಳಿ ಕಾರ್ಪೊರೇಷನ್‌ನವರಿಗೆ ಮಾಡಿ ಎಂದು ಹೇಳಿದ್ದೇವೆ. ನಾನು ಒಂದು ಜವಾಬ್ದಾರಿ ಸ್ಥಾನದಲ್ಲಿ ಇದ್ದು ಈ ಮಾತನ್ನು ಹೇಳುತ್ತೇನೆ. 100 lakhs of rupees, Fixed deposit was made by the Hubli-dharwad Corporation only for Malaprabha project. You implement that...

ಇವತ್ತು ಕಾವೇರಿ ಬಗ್ಗೆ ಇದರಲ್ಲಿ ನಮೂದು ಮಾಡಿಲ್ಲ, ವರ್ಲ್ಡ್ ಬ್ಯಾಂಕ್‌ನವರ ನೆರವು ತೆಗೆದುಕೊಳ್ಳಬಹುದಿತ್ತು...

SRI DHARM SINGH.-- How much you have spent...

SRI R.V. DESHPANDE.-It is a new schme. ಇವತ್ತು ವರ್ಲ್ಡ್ ಬ್ಯಾಂಕ್ ಸಹಾಯದಿಂದ ಗುಲ್ಬರ್ಗಾದಲ್ಲಿ, ಹುಬ್ಬಳ್ಳಿಯಲ್ಲಿ ಮತ್ತು ಬೆಂಗಳೂರಿನಲ್ಲಿ ನಿವೇಶನ ಮತ್ತು ಮನೆ ಕಟ್ಟುವ ಕಾರ್ಯಕ್ರಮ, ಕುಡಿಯುವ ನೀರಿನ ಕಾರ್ಯಕ್ರಮ ಇದೆ, ಇದರ ಬಗ್ಗೆ ಹೇಳಲಿಲ್ಲ. ಇದರ ಬಗ್ಗೆಯೂ ಹೇಳಬೇಕು. ಈಗಾಗಲೇ ನಾನು ತಿಳಿದುಕೊಂಡಿದ್ದೇನೆ. ವರ್ಲ್ಡ್ ಬ್ಯಾಂಕ್‌ನವರು ಒಂದು ಹೋಗಿರಬಹುದು. ಇವತ್ತು ಅರ್ಬನ್ ಏರಿಯಾ ಬಗ್ಗೆ ಏನೂ ಇಲ್ಲ.

ಶ್ರೀ ಎಂ. ಮಹದೇವ್.— ಎಲ್ಲಾ ವಸತಿಗಳಿಗೆ ಕುಡಿಯುವ ನೀರನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಲಾಗುವುದು ಎಂದು ಹೇಳಿದ್ದಾರೆ, ಇದನ್ನು ಬಿಟ್ಟು ಬಿಟ್ಟಿರಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಅವರು ಎಲ್ಲಾ ಕೆಲಸ ಮಾಡಿದ್ದಾರೆ, ಈ ಬಾರಿಯೂ ಅವರೇ ಬರುತ್ತಿದ್ದರು. ಅದೇ ನೀವು ಹೋದ ಸಾರಿ ಆರಿಸಿ ಬರಲಿಲ್ಲ...

ಶ್ರೀ ಎಂ. ಮಹದೇವ್.— ನಮ್ಮ ಪಕ್ಷದ ವರ್ಚಸ್ಸಿನ ಮೇಲೆ ಬಂದಿದ್ದೇವೆ.

ಶ್ರೀ ಆರ್. ವಿ. ದೇಶಪಾಂಡೆ.— ಇವತ್ತು ನೀವು ಬಂದಿದ್ದೀರಿ ಸಂತೋಷ. ಅರ್ಬನ್ ವಾಟರ್ ಸಪ್ಲೈ ಬಗ್ಗೆ ಏನೇನೂ ಇಲ್ಲ, ಏನು ಮಾಡುತ್ತೀರಿ. ಯಾವ ಪ್ರಕಾರ ಸಮಸ್ಯೆ ಬಗೆಹರಿಸುತ್ತೀರಿ. ಹೀಗಾಗಿ ಇವತ್ತು ಅರ್ಬನ್ ಏರಿಯಾ ಬಗ್ಗೆ ಚಕಾರ ಶಬ್ದ ಇಲ್ಲ. ನೀವು ಇದನ್ನು ಮರೆತು ಬಿಟ್ಟಿದ್ದೀರಿ. ಮುಖ್ಯಮಂತ್ರಿಗಳು ಇದರ ಬಗ್ಗೆ ಬೆಳಕು ಚೆಲ್ಲಬೇಕು ಅರ್ಬನ್ ಏರಿಯಾ ಬಗ್ಗೆ ತಮ್ಮ ನೀತಿ ಏನು, ತಾವು ಏನು ಮಾಡುತ್ತೀರಿ ಎಂಬುದನ್ನು ಹೇಳಬೇಕಾಗುತ್ತದೆ. ಇವತ್ತು ಬೆಂಗಳೂರಿನಲ್ಲಿ ನಿವೇಶನ ಸಮಸ್ಯೆ ಹೆಚ್ಚಾಗಿದೆ. Bangalore Development Authority is not in a position to fulfill the demand, There are number of good Employees Housing Societies. You encourage them and solve the housing problem in Bangalore. ಎಷ್ಟು ಸಾಧ್ಯ ಅಷ್ಟನ್ನು ಬಿ.ಡಿ.ಎ ಕಡೆಯಿಂದ ಭೂಮಿ ಅಕ್ವೈರ್ ಮಾಡಿ, ಪ್ರತಿ ವರ್ಷ ಒಂದು ಲಕ್ಷ ಸೈಟ್ ಕೊಡುತ್ತಾರೆ. ಇವತ್ತು ಯಾರಿಗೆ ಸೈಟ್ ಇಲ್ಲ ಅಂತಹವರಿಗೆ ಸೈಟ್ ಅಲಾಟ್ ಮಾಡಿ. ಜೊತೆಗೆ ಒಳ್ಳೆಯ ಸಹಕಾರಿ ಸಂಘಗಳು ಇದ್ದರೆ, ಅವರಿಗೆ ಎನ್‌ಕರೇಜ್ ಮಾಡಿ. ಮತ್ತು ಈ ಸೊಸೈಟಿಗಳ ಬಗ್ಗೆ ಇರತಕ್ಕ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು.

ಮತ್ತೊಂದು ಸಮಸ್ಯೆ ಆಗಿದೆ. ಈ ಮಾತನ್ನು ಧರ್ಮಸಿಂಗ್‌ರವರು ಒಪ್ಪಿಕೊಳ್ಳುತ್ತಾರೆ ಎಂದು ತಿಳಿದಿದ್ದೇನೆ. ನಮ್ಮ ಇಡೀ ಕರ್ನಾಟಕ ರಾಜ್ಯದ ಅರ್ಬನ್ ಏರಿಯಾದಲ್ಲಿನ ಲ್ಯಾಂಡ್ ಯೂಸ್ ಬಗ್ಗೆ ಒಂದು ಬಿಲ್ ಇಂಟ್ರಡ್ಯೂಸ್ ಮಾಡಿದಾಗ ತಾವು ಗಲಾಟೆ ಮಾಡಿದಿರಿ. ಚೇಂಜ್ ಆಫ್ ಲ್ಯಾಂಡ್ ಯೂಸ್ ಪಾಲಿಸಿ ಬಗ್ಗೆ ಮುಂಚೆ ಒಂದು ಪ್ರಸ್ತಾವನೆ ಬರುತ್ತಿತ್ತು. ಅದನ್ನು ಮಿನಿಸ್ಟರ್‌ರವರು ಮಾಡಿ ಬಿಡುತ್ತಿದ್ದರು. We tried to lay a procedure ಯಾವುದೇ ಅರ್ಜಿ ಇದರ ಬಗ್ಗೆ ಬಂದಾಗ ಅದರ ಬಗ್ಗೆ ಪರಿಶೀಲನೆ ಆಗಬೇಕು, ರೆಸಲ್ಯೂಷನ್ ಆಗಬೇಕು, ನೋಟಿಫಿಕೇಷನ್ ಆಗಬೇಕು. ಅಬ್ಜೆಕ್ಷನ್ಸ್ ಕಾಲ್ ಫಾರ್ ಮಾಡಬೇಕು. ಅದಾದನಂತರ ಸರಕಾರಕ್ಕೆ ಬರಬೇಕೆಂದು ನಾವು ಮಾಡಿದ್ದೆವು. ಇದು ಗ್ರೀನ್ ಬೆಲ್ಟ್‌ನಲ್ಲಿದೆಯೋ, ಅದರ ಒಳಗಿದೆಯೋ, ಹೊರಗಿದೆಯೋ ಕಮರ್ಷಿಯಲ್‌ನ್ನು ರೆಸಿಡೆನ್ಷಿಯಲ್ ಮಾಡಬೇಕೋ ರೆಸಿಡೆನ್ಷಿಯಲ್‌ನ್ನು ಕಮರ್ಷಿಯಲ್ ಮಾಡಬೇಕೋ ಇದನ್ನೆಲ್ಲಾ ನೋಡುವುದರ ಬಗ್ಗೆ ಒಂದು ಬಿಲ್ ಇಂಟ್ರಡ್ಯೂಸ್ ಮಾಡಿದಾಗ ಇದನ್ನು ಪಾಸ್ ಮಾಡಲು ಸಾಧ್ಯ ಇಲ್ಲ ಎಂದು ನೀವು ಹೇಳಿದಿರಿ.

ಶ್ರೀ ರಮೇಶ್ ಎಸ್.—ತಾವು ಸಚಿವರಾಗಿದ್ದಾಗ ನಂದಿನಿ ಲೇಔಟ್ ಮಾಡಿದಾಗ ಬಡವರಿಗೆ ಎಷ್ಟು ಸೈಟ್ ಕೊಟ್ಟಿದ್ದೀರಿ?

ಶ್ರೀ ಆರ್. ವಿ. ದೇಶಪಾಂಡೆ.—ನಾನು ಆಗಸ್ಟ್ ೧೩ ರಿಂದ ಏಪ್ರಿಲ್ ೨೧ರವರೆಗೆ ಸಚಿವನಾಗಿದ್ದೆ. ನಂದಿನಿ ಲೇಔಟ್ ಅದಕ್ಕಿಂತ ಒಂದು ವರ್ಷ ಹಿಂದೆ ಆಗಿತ್ತು. ನಿಮಗೆ ಗೊತ್ತಿಲ್ಲ ಎಂದರೆ ನಾನು ಇನ್‌ಫರ್ಮೇಷನ್ ಕೊಡುತ್ತೇನೆ ನಾನು ಚಾಲೇಂಜ್ ಕೊಡುತ್ತೇನೆ. ನನ್ನ ಕಾಲದಲ್ಲಿ ಎಲ್ಲಿ ಅನ್ಯಾಯ ಆಗಿದೆ ಎಲ್ಲಿ ತಪ್ಪು ನಿರ್ಣಯ ಆಗಿದೆ ತೆಗೆದು ನೋಡಿರಿ. ಒಂದೇ ಒಂದು ಫೈಲ್ ತಂದು ಇಡಿರಿ.

ಒಂದು ಇನ್‌ಸ್ಟೆನ್ಸ್ ಹೇಳಿರಿ. ನನಗೆ ಮಾರಲ್ ಕರೆ ಜ್ ಇದೆ, ಮತ್ತು ಆ ಒಂದು ಮಾರಲ್ ಕರೇಜ್‌ನಿಂದ ಇಲ್ಲಿ ಮಾತನಾಡುತ್ತೇನೆ.

ಹೀಗೆ ಇವೊತ್ತು ಲ್ಯಾಂಡ್ ಯೂಸ್ ಪಾಲಿಸಿಯಲ್ಲಿ ತಾವು ಏನು ಮಾಡಿದಿರಿ ಎಂದರೆ, ನಾವು ಬಿಲ್ ಇಂಟ್ರಡ್ಯೂಸ್ ಮಾಡಿದಾಗ ಅದನ್ನು ವಿರೋಧ ಮಾಡಿದಿರಿ. ಆದರೆ ರಾಷ್ಟ್ರಪತಿಗಳ ಆಡಳಿತದಲ್ಲಿ ಗೌರ್ನರ್‌ರವರು ಅದನ್ನು ರಾಷ್ಟ್ರಪತಿಗಳಿಗೆ ಕಳುಹಿಸಿದರು. ಆರ್ಡಿನೆನ್ಸ್ ಇಷ್ಯೂ ಮಾಡಿರಿ ಎಂದು ಕಳುಹಿಸಿದರು. ಇಲ್ಲ ಪಾಸ್ ಮಾಡುವುದಿಲ್ಲ ಎಂದು ಹೇಳಿ, ಪ್ರೆಸಿಡೆಂಟ್ ರೂಲ್‌ನಲ್ಲಿ ಅದನ್ನು ರಾಷ್ಟ್ರಪತಿಗಳಿಗೆ ಕಳುಹಿಸುವುದಕ್ಕೆ ಮ್ಯಾನೇಜ್ ಮಾಡಿದಿರಿ. ಇದರಿಂದ ಇಡೀ ರಾಜ್ಯದಲ್ಲಿ ತೊಂದರೆಯಾಗಿದೆ. You have managed to send it to the President for issue Ordinance, ಆ ಆಕ್ಟ್ ಈಗ ವಾಪಸ್ ಬರುತ್ತಿದೆ. ಅದರ ಬಗ್ಗೆ ಆರ್ಡಿನೆನ್ಸ್ ಇಷ್ಯೂ ಆಗಲಿಲ್ಲ. ಇದರ ಬಗ್ಗೆ ತಾವು ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಅದೇ ಪ್ರಕಾರ ತಾವು ಕೈಗಾರಿಕೆಗಳ ಬಗ್ಗೆ ಹೇಳಿದಿರಿ ಕೈಗಾರಿಕೆ ಬೆಳೆಸಿ, ಸಂತೋಷ. ಆದರೆ ರಾಜ್ಯದಲ್ಲಿ ಈಗಿರುವ ಕೈಗಾರಿಕೆಗಳ ಬಗ್ಗೆ ಏನು ಮಾಡುತ್ತೀರಿ? ಕೈಗಾರಿಕೆಗಳನ್ನು ಬಂದ್ ಮಾಡುವ ಕಾರ್ಯಕ್ರಮ ರಾಷ್ಟ್ರಪತಿಗಳ ಆಡಳಿತದ ಕಾಲದಲ್ಲಿ, ಗೌರ್ನರ್ ಸಾಹೇಬರ ಕಾಲದಲ್ಲಿ ನಡೆಯಿತು. ಗೌರ್ನರ್ ಹುದ್ದೆಯ ಬಗ್ಗೆ ಆ ಸ್ಥಾನದ ಬಗ್ಗೆ ನನಗೆ ಮರ್ಯಾದೆ ಇದೆ ಗೌರವ ಇದೆ. ಆದರೆ ಏನು ಮಾಡಿದ್ದಾರೆ? ಎಂಟೈರ್ ಲಿಕ್ಕರ್ ಟ್ರೇಡ್ ಟೇಕ್ ಓವರ್ ಮಾಡುವ ಡಿಸಿಷನ್ ಗೌರ್ನರ್ ತೆಗೆದುಕೊಂಡರು. ಇದಕ್ಕೆ ಕಾರಣ ಏನು? ಇದು ಪಾಲಿಸಿ ಡಿಸಿಷನ್. ಯಾವ ಪ್ರಕಾರ ಒಬ್ಬ ಚುನಾಯಿತ ಮುಖ್ಯಮಂತ್ರಿ ಒಳ್ಳೆಯದಕ್ಕೆ, ಕೆಟ್ಟದ್ದಕ್ಕೆ ಜವಾಬ್ದಾರನಾಗಿರುತ್ತಾನೆ, ಅದೇ ಪ್ರಕಾರವಾಗಿ ರಾಷ್ಟ್ರಪತಿಗಳ ಆಡಳಿತದ ಕಾಲದಲ್ಲಿ ಅವರ ಏಜೆಂಟ್ ಆಗಿ ಕಾರ್ಯನಿರ್ವಹಿಸುವ ಗೌರ್ನರ್ is also responsible for good and bad deeds. What was the motive to take over this? ಇದರ ಹಿಂದೆ ಏನು ಕಾಳಜಿ ಇತ್ತು. ಏನು ಮೋಟಿವೇಷನ್ ಇತ್ತು ಎಂದು ಕೇಳುತ್ತೇನೆ. ಒಂದೇ ಒಂದು ಮೋಟಿವೇಷನ್ ಎಂದರೆ ರಾಜ್ಯದ ಹೊರಗೆ ಇದ್ದ ಲಿಕ್ಕರ್ ಇಂಡಸ್ಟ್ರೀಸ್‌ಗೆ ಸಹಾಯ ಮಾಡಬೇಕು. ರಾಜ್ಯದ ಒಳಗೆ ಇರುವ ಲಿಕ್ಕರ್ ಇಂಡಸ್ಟ್ರೀಸ್ ಮುಚ್ಚಬೇಕು, ಅವರಿಗೆ ತೊಂದರೆಯಾಗಬೇಕು, ಸ್ಟೇಟ್ ಎಕ್ಸ್‌ಚೆಕ್ಕರ್‌ಗೆ ತೊಂದರೆಯಾಗಬೇಕು. ಇದೇ ಉದ್ದೇಶವೇ? ಕೆ.ಎಸ್.ಆರ್.ಟಿಸಿ. ಫೇರ್ಸ್ ಹೈಕ್ ಬಂದಾಗ ಮಾನ್ಯ ಮುಖ್ಯಮಂತ್ರಿಗಳಾಗಿರುವವರು ಒಂದು ಮಾತನ್ನು ಹೇಳಿದರು ಇದು ಪಾಲಿಸಿ ಡಿಸಿಷನ್ ಎಂದು ಹೇಳಿದರು These are all policy decisions which the Governor cannot take on his own. But still why did the Governor took such a policy decision? the Central Government did not authorise him to take such a decision. It was manatory on his part to keep before the Legislature or the then Parliament of both the Houses to keep the amended rules of Excise Act, a notification was issued giving concession in sales tax why that was not placed before the House?

ಈ ಆಜ್ಞೆಯ ಉದ್ದೇಶ ಏನೆಂದರೆ ಸೆಕೆಂಡ್ಸ್ ಕಂಟ್ರೋಲ್ ಮಾಡುವುದು. ಅದಕ್ಕೆ ನನ್ನ ತಕರಾರು ಏನೂ ಇಲ್ಲ. ಆದರೆ ಇವತ್ತು ಸೆಕೆಂಡ್ಸ್ ಕಂಟ್ರೋಲ್ ಮಾಡುತ್ತೇವೆಂದು ಹೇಳಿ ಹೊರ ರಾಜ್ಯಗಳ ಇಂಡಸ್ಟ್ರಿಯವರಿಗೆ ಸಹಾಯ ಮಾಡುವುದಕ್ಕೆ ಹೋದರೆ ಏನಾಗುತ್ತದೆ? ತಾವು ಎಂ.ಎಸ್.ಐ.ಎಲ್. ನವರನ್ನು ಈ ಏಜೆಂಟ್ ಆಗಿ ಮಾಡಿದ್ದೀರಿ. ಎಂ.ಎಸ್.ಐ.ಎಲ್.ನವರ ಪರ್ಫಾರ್ಮೆನ್ಸ್ ಏನಾಗಿವೆ ಎನ್ನುವುದು ಈಗಾಗಲೇ ಈ ದೇಶದಲ್ಲಿ ಎಲ್ಲರಿಗೂ ಚೆನ್ನಾಗಿ ಗೊತ್ತಿದೆ. ತಾವು ಎಂ.ಎಸ್.ಐ.ಎಲ್.ಗೆ ಎಂ.ಡಿ. ಯಾರನ್ನು ಪೋಸ್ಟ್ ಮಾಡಿದ್ದೀರಿ ಜೂನ್ ತಿಂಗಳಲ್ಲಿ ಡಿವಿಜನಲ್ ಕಮಿಷನರ್ ಆಫ್ ಬೆಂಗಳೂರು ಇದ್ದಂತಹವರನ್ನು ಅಲ್ಲಿಗೆ ಪೋಸ್ಟ್ ಮಾಡಿದ್ದೀರಿ ನಿಮಗೆ ಬೇರೆ ಅಧಿಕಾರಿ ಸಿಗಲಿಲ್ಲವೇ? It was politically motivated and also the decision was for some other considerations. I strongly allege this. There was no necessity for the Governor to take such a policy decision. He should have left it to the elected Government. As far as seconds are concerned make the rules and regulations more stonger and keep vigilance on them. Even if you entrust the same to MSIL the system remains the same. You are throwing the officers of the Excise Department

and entrusting it to the officers of the MSIL. When you have belief in an officer of MSIL and keep him in the distillery why don't you have the same belief on the officers of Excise Department. You remove all the officers of the Excise Department then. If you have no faith, You are only changing the officers and did not do any other thing except that Then, at a stroke you change all the officers. ನಿಮಗೆ ಎಂ.ಎಸ್.ಐ.ಎಲ್. ಅಧಿಕಾರಿಗಳ ಮೇಲೆ ವಿಶ್ವಾಸ ಇದೆ. ಎಕ್ಸೈಜ್ ಡಿಪಾರ್ಟ್‌ಮೆಂಟ್ ಅಧಿಕಾರಿಗಳ ಮೇಲೆ ವಿಶ್ವಾಸ ಇಲ್ಲ. ಇದು ಯಾವ ರೀತಿ ಎಕ್ಸೈಜ್ ಡಿಪಾರ್ಟ್‌ಮೆಂಟಿನಲ್ಲಿರತಕ್ಕಂಥ ಎಲ್ಲಾ ಅಧಿಕಾರಿಗಳನ್ನು ತೆಗೆದು ಬಿಡಿ. ಇದರಿಂದ ಏನಾಗಿದೆ ಎಂದರೆ ಸ್ಟೇಟ್ ಎಕ್ಸೈಜ್ ಮೇಲೆ ಪರಿಣಾಮ ಬೀರುತ್ತದೆ. ಸೇಲ್ಸ್ ಟ್ಯಾಕ್ಸ್‌ನಿಂದ ಲೋಕಲ್ ಇಂಡಸ್ಟ್ರಿಗಳಿಗೆ ತೊಂದರೆ ಬಂದಿದೆ. Products of local industry have become more costlier because of this policy. Outside products are cheaper. Due to this the consumer is put to loss. He has to pay more money for State liquors. ಇದು ತಮಿಳುನಾಡಿನಲ್ಲಿ ಇದೆ. ಕೇರಳದಲ್ಲಿ ಇದೆ. ಈ ಬಗ್ಗೆ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಒಂದು ಆರ್ಟಿಕಲ್ ಬಂದಿದೆ. ಅದು ಈ ರೀತಿ ಇದೆ.

> "The Karnataka Government has now constituted a Corporation to handle the trade in foreign liquor. All distilleries and all outside liquor manufacturers will sell their products only to this Corporation which will distribute liquors to licenced wholesalers. This is in line with practice prevailant over a long time in Kerala and Tamilnadu. This by itself did not check the loss of revenue in Tamilnadu. under MGR. where total exemption form Excise Duty on the rectified spirit used for making liquor and the levy of Excise duty on liquor only in the hands of the Government wholesale purchaser lead to considerable loss of revenue which the present **DMK** Government has Sought to plug"

ಇದರಿಂದ ಇವತ್ತು ಏನಾಗಿದೆ ಎಂದರೆ ಫೇವರಿಟಿಸಮ್ ಮಾಡಿದಂತಾಗುತ್ತದೆ. ಫೇವರಿಟಿಜಮ್ ಮಾಡಲು ಎಂ. ಎಸ್. ಐ. ಎಲ್. ನವರಿಗೆ ಅವಕಾಶವಿದೆ. ಡಿಸ್ಟಿಲರಿಯನ್ನು ಮಾನ್ಯ ಬಸವರಾಜುರವರಿಗೆ ಬೇಕಾದರೆ ಸಹಾಯ ಮಾಡಬಹುದು. ಇದರಿಂದ ಕನ್‌ಜ್ಯೂಮರ್ಸ್‌ಗೆ ಬೇಕಾದ ಪ್ರಾಡಕ್ಟ್ಸ್ ಸಿಗುವುದಿಲ್ಲ. In addition to that he has to be under the mercy of the MSIL to drink. We have accepted the policy of prohibition But, we have licenced the prohibition as well as prostitution. Why? Because of some social problems. We cannot overcome them. The Government should go ahead to eradicate such things. We are not worried about it. But, the act of the Govenor is malafide. It has to be questioned. ಸರ್ಕಾರಕ್ಕೆ ಬೇರೆ ಉದ್ಯೋಗವಿಲ್ಲವೇ ಈ ರೀತಿಯಾದರೆ ಅಂಡರ್‌ಟೇಕಿಂಗ್ಸ್ ಯಾವ ಪ್ರಕಾರ ಕೆಲಸ ಮಾಡುತ್ತವೆ ಎಂತಹ ಪರಿಸ್ಥಿತಿ ಇದೆ ಎನ್ನುವುದನ್ನು ನೀವೆ ನೋಡಿ ನಿರ್ಧಾರ ಮಾಡಿ. The Governor has no business to bring into force such policy matters.

ಆದ್ದರಿಂದಲೂ ಸರ್ಕಾರಕ್ಕೆ ಸುಮಾರು ೧ ಕೋಟಿ ರೂಪಾಯಿ ಲಾಸ್ ಆಗಬಹುದು. ಈ ಒಂದು ಲಿಕ್ಕರ್ ಏನಿತ್ತು, ರಾಜ್ಯಪಾಲರ ಆಡಳಿತ ಬರುವುದಕ್ಕಿಂತ ಮುಂಚೆ the local rum measuring 180 ml was sold at Rs. 66 per bottle. before whereas the bottles that are procured from Tamilnadu and Andhra Pradesh is now sold at Rs. 64 and the local one at Rs 70. In other words, local liquor has become costlier and the liquor that is brought from outside the State is cheaper after amendment ಹೊರಗಿನ ಇಂಡಸ್ಟ್ರೀಗಳಿಗೆ

ಸಹಾಯ ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆಂದು ನಾನು ಸ್ಪಷ್ಟವಾಗಿ ಆರೋಪ ಮಾಡುತ್ತಿದ್ದೇನೆ. ಡಿವಿಷನಲ್ ಕಮೀಷನರ್‌ರವರು ಎಂ.ಎಸ್.ಐ.ಎಲ್.. ಗೆ ಎಂ.ಡಿ., ಯಾಗಿ ಮಾಡಿದ್ದೀರಿ. ಬೇರೆಯುವರು ಇರಲಿಲ್ಲವೇ ? ಇದನ್ನು ವಿಚಾರ ಮಾಡಬೇಕಾಗಿದೆ. ಈ ವಿಷಯ ಬಹಳ ಗಂಭೀರವಾದುದು. Local industry is suffering in the Karnataka and out side markets. As a result of which production will falland consumption will fall. There will also be loss in terms of crores by way of sales taxes and excise duty. ಇದರ ಬಗ್ಗೆ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಹೇಳುವುದು ಇಷ್ಟೇ: ರಾಜ್ಯಪಾಲರು ಮಾಡಿರುವ ನಿರ್ಣಯ ಸರಿಯಿದ್ದರೆ ಅದನ್ನು ಇಂಪ್ಲಿಮೆಂಟ್ ಮಾಡಿ. ತಪ್ಪಿದ್ದರೆ ಅದನ್ನು ಮಾಡಬೇಡಿ. ಇದರಿಂದ ಸ್ಟೇಟ್ ಎಕ್ಸ್‌ಚೇಕರ್‌ಗೆ ಪರಿಣಾಮವಾಗುವುದಿದ್ದರೆ, ಮಾಲಾಫೈಡ್ ಆಗುವುದಿದ್ದರೆ ಲೋಕಲ್ ಇಂಡಸ್ಟ್ರೀಗಳಿಗೆ ತೊಂದರೆ ಯಾಗುವುದಿದ್ದರೆ ಇದನ್ನು ವಿಚಾರ ಮಾಡಬೇಕು. ಇವತ್ತು ಸಿಕ್ ಇಂಡಸ್ಟ್ರೀಗಳಿಗೆ ಸಿಂಗಲ್ ವಿಂಡೋ ಸಿಸ್ಟಮ್ ಮಾಡಲಾಗುತ್ತದೆಂದು ಪೇಪರ್‌ಗಳಲ್ಲಿ ಬಂದಿದೆ. Single window concept was one of the best concepts. It is only in paper. I tried to reserve nearly 410 items for small sectors. All the Government Department were only to purchase from small sectors. Otherwise, we will make them liable. but, unfortunately it does not happen. Under the Single Window Agency system you will get everything from the agency. Land, water, power and what not. It is a good system. But, implementation is to be done. It has gone to doldrums. ಹೀಗೆ ಸಿಂಗಲ್ ವಿಂಡೋ ಸಿಸ್ಟಮ್ ಮಾಡಿದರೆ ಅಲ್ಲಿ ಕಮಿಟೆಡ್ ಅಧಿಕಾರಿ ಕೆಲಸ ಮಾಡಬೇಕಾಗುತ್ತದೆ. ಇದರಿಂದ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ಸಾಲ್ವ್ ಮಾಡುವುದಕ್ಕೆ ಸಾಧ್ಯ. ದೊಡ್ಡ ಇಂಡಸ್ಟ್ರೀಗಳಿಗೆ ಎನ್‌ಕರೇಜ್ ಮಾಡುತ್ತೇವೆಂದು ತಾವು ಹೇಳಿದ್ದೀರಿ. ದೊಡ್ಡ ಇಂಡಸ್ಟ್ರೀಗಳನ್ನು ಮಾಡಿದರೆ ಅದು ಲೇಬರ್ ಓರಿಯೆಂಟೆಡ್ ಅಲ್ಲ. They are not labour intensive industries. They will try to put 50 people and invest 200 crores of rupees and go away. They may get a big cake. ನಮ್ಮ ರಾಜ್ಯದಲ್ಲಿ ಬಡತನ ದೂರವಾಗಬೇಕಾದರೆ, ಅನ್‌ಎಂಪ್ಲಾಯ್‌ಮೆಂಟ್ ದೂರ ಮಾಡಬೇಕಾದರೆ, try to encourage agro-based industries, try to encourage rural and backward areas. ಇದರಿಂದ ಎಷ್ಟೋ ಯುವಕರುಗಳಿಗೆ ಉದ್ಯೋಗವಕಾಶ ಸಿಗಬಹುದು. ಬೆಂಗಳೂರು, ಬೆಳಗಾವ್, ಹುಬ್ಬಳ್ಳಿ ಮುಂತಾದ ಶಹರುಗಳಿಗೆ ಹಳ್ಳಿಗಳಿಂದ ಬರುವ ನಿರುದ್ಯೋಗಿಗಳನ್ನು ತಡೆಯಬಹುದು. ಆದ್ದರಿಂದ ಆಗ್ರೋ ಬೇಸ್ಡ್ ಇಂಡಸ್ಟ್ರೀಗಳನ್ನು ಮಾಡಬೇಕು. ಇದರಿಂದ ಲಾ ಅಂಡ್ ಆರ್ಡರ್ ಸಮಸ್ಯೆ ತಪ್ಪಬಹುದು. ಆದ್ದರಿಂದ, ಈ ದೃಷ್ಟಿಯಿಂದ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಗಳಿಗೆ ಎನ್ಕರೇಜ್ ಮಾಡಬೇಕು. ರೂರಲ್ ಮತ್ತು ಬ್ಯಾಕ್‌ವರ್ಡ್ ಏರಿಯಾಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇವತ್ತು ಭೂ ಸುಧಾರಣೆ ಕಾಯಿದೆ ಬಗ್ಗೆ ಹೇಳಿದ್ದಾರೆ. ಭೂ ಸುಧಾರಣಾ ಕಾಯ್ದೆಯಲ್ಲಿ ನಮ್ಮ ಸರ್ಕಾರ ಇದ್ದಾಗ ಯಾರಿಗೂ ಅನ್ಯಾಯವಾಗಿಲ್ಲ. ಯಾವ ಒಬ್ಬ ರೈತನಿಗೂ ಇದರಿಂದ ತೊಂದರೆ ಯಾಗಿಲ್ಲ.

ರೈತರ ಹಿತದೃಷ್ಟಿಯಿಂದ ಯಾವ ಯಾವ ತಿದ್ದುಪಡಿಗಳನ್ನು ಬೇಕಾದರೂ ತನ್ನಿ ಅದನ್ನು ನಾವು ಸ್ವಾಗತ ಮಾಡುತ್ತೇವೆ. We will welcome it. We are also committed to land reforms. The Central Govt. has also mentioned about it in the President's address ಈಗಾಗಲೇ ನಮ್ಮ ಸರಕಾರ ಲ್ಯಾಂಡ್ ರಿಫೋರ್ಮ್ಸ್ ಬಗ್ಗೆ ಹೇಳಿದೆ. ನಮ್ಮ ಎದುರು ಇರುವ ಇನ್ನೊಂದು ಸಮಸ್ಯೆ ಅಂದರೆ ಆದಾಯ ಸರ್ಟಿಫಿಕೇಟ್ ಬಗ್ಗೆ ನಾವು ಒಂದು ಲಿಮಿಟ್‌ನ್ನು ಹಾಕಿಕೊಂಡಿದ್ದೇವೆ. ಯಾರದ್ದೇ ವಾರ್ಷಿಕ ಉತ್ಪನ್ನ ಅಗ್ರಿಕಲ್ಚರ್ ರಿಸೋರ್ಸಸ್ ಬಿಟ್ಟು 12 ಸಾವಿರ ವರೆಗೆ ಇದೆ, they can not own agricultural lands ಇದರಿಂದ ಸಮಸ್ಯೆ ಏನಾಗಿದೆ ಅಂದರೆ ಇವೊತ್ತು ಹಳ್ಳಿಗಳಲ್ಲಿ ಭೂಮಿ ಮಾಡಲು ಜನರು ಸಿಗುತ್ತಾ ಇಲ್ಲ. ರೈತರು ಕಂಗಾಲಾಗಿದ್ದಾರೆ ಬಡವರಿಗೆ ಸಾಲದ ಭಾರ ಇದೆ. ರೈತನ ಇರುವ ಮೂರು-ನಾಲ್ಕು ಮಕ್ಕಳು ಅಷ್ಟಾಗಿ ವಿದ್ಯಾವಂತರೂ ಅಲ್ಲ. ಇದ್ದುದರಲ್ಲಿಯೇ ಏನಾದರೂ ಒಂದು

ನೌಕರಿ ಸಿಕ್ಕೀತೆ ಎಂದು ಪರದಾಡುತ್ತಾರೆ. ನಿರುದ್ಯೋಗಿಗಳಾಗಿದ್ದವರಿಗೆ ಊರಿನಲ್ಲಿ ಕೂಲಿ ಕೂಡ ಸಿಗುವುದು ಕಠಿಣವಾಗಿದೆ. ನೌಕರಿ ಹುಡುಕೋಣ ಎಂದರೆ ಕೆಲವರಿಗೆ ಈ ಆದಾಯದ ಸರ್ಟಿಫಿಕೇಟ್‌ನ ತೊಂದರೆ. ಮಾನ್ಯ ದೇವರಾಜ್ ಅರಸ್‌ರವರ ಕಾಲದಲ್ಲಿ ಹಾಕಿದ ಈ ಲಿಮಿಟೇಶನ್‌ನ್ನು ಇನ್ನೂ ಮುಂದುವರಿಸಿಕೊಂಡು ಬಂದಿದ್ದೇವೆ. ಬಹುಶಃ ಇವೊತ್ತು ಒಬ್ಬ ಪೀವನ್ 2 ಸಾವಿರ ರೂಪಾಯಿಗಳಷ್ಟು ಸ್ಯಾಲರಿ ತೆಗೆದುಕೊಳ್ಳುತ್ತಾನೆ. ಆದುದರಿಂದ ರೈತರ ಹಿತದೃಷ್ಟಿಯನ್ನು ಕಾಪಾಡಿಕೊಳ್ಳುವಲ್ಲಿ ದಯಮಾಡಿ ಈ ಲಿಮಿಟೇಶನ್ ಏನು ಹಾಕಿದ್ದೀರಿ ಅದನ್ನು ಹೆಚ್ಚಿಗೆ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ. ಹೀಗೆ ಹೆಚ್ಚಿಗೆ ಮಾಡಿದರೆ ಯಾರಿಗೆ ಕೃಷಿ ವ್ಯವಸಾಯ ಮಾಡುವ ಇಚ್ಛೆ ಇದೆಯೋ. ಅವರಿಗೂ ಒಂದು ಅವಕಾಶವನ್ನು ಕಲ್ಪಿಸಿಕೊಡಲು ಅನುಕೂಲವಾಗುತ್ತದೆ. ಆದುದರಿಂದ ಇದರ ಬಗ್ಗೆ ತಿದ್ದುಪಡಿಯೊಂದನ್ನು ತಂದು ಅನುಕೂಲ ಮಾಡಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಇನ್ನು ಪವರ್ ಪ್ರಾಜೆಕ್ಟ್‌ಗಳ ಬಗ್ಗೆ ಹೇಳುವುದಾದರೆ ಪವರ್ ಪ್ರಾಜೆಕ್ಟ್‌ಗಳು ನಮ್ಮ ಜಿಲ್ಲೆಗೂ ಸಾಕಷ್ಟು ಬಂದಿವೆ. ಇವೊತ್ತು ನಮ್ಮಲ್ಲಿ ಹೆಚ್ಚು ಹೆಚ್ಚಾಗಿ ಪವರ್ ಜನರೇಟ್ ಆಗಬೇಕು. ಆದರೆ ಅದನ್ನು ಮಾಡುವಾಗ ಅಲ್ಲಿದ ಂಥ ಮೂಲವಾಸಿಗಳ ಪುನರ್‌ವಸತಿ ಸರಿಯಾಗಿ ಆಗುತ್ತಾ ಇಲ್ಲ. ಆ ಕುರಿತು ಅನೇಕ ತೊಂದರೆಗಳು ಇವೆ. ಈ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಗಳಿಸಿಕೊಡುವಲ್ಲಿ ಯಾರು ತ್ಯಾಗಬಲಿದಾನಗಳನ್ನು ಮಾಡಿದ್ದಾರೋ, ಅವರಿಗೆ ನಾವು ಏಷ್ಟು ಗೌರವವನ್ನು ಕೊಡುತ್ತಿದ್ದೇವೋ ಅದೇ ಗೌರವವನ್ನು ನಾವು ಇವೊತ್ತು ಈ ಯೋಜನೆಗಳಿಗಾಗಿ ಭೂಮಿಯನ್ನು ಕಳೆದುಕೊಂಡವರಿಗೆ ಕೊಡಬೇಕಾಗುತ್ತದೆ. ಅದು ನಮ್ಮ ಕರ್ತವ್ಯವೂ ಆಗಿದೆ.

ಹೀಗೆ ಅವರಿಗೆ ಪುನರ್ ವಸತಿಯನ್ನು ಕಲ್ಪಿಸುವಲ್ಲಿ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದರೂ ಸಹ ಇತರ ಅನೇಕ ತೊಂದರೆಗಳು ಸಮಸ್ಯೆಗಳು ಬಂದಿವೆ. ನಮ್ಮ ಜಿಲ್ಲೆಯಲ್ಲಿ ಬಂದ ಯೋಜನೆಗಳು, ಅದು ಸೀಬರ್ಡ್ ನೌಕಾ ನೆಲೆ ಇರಬಹುದು. ಕೈಗಾ ಇರಬಹುದು, ಅಂಥ ಎಲ್ಲಾ ಕಡೆಗಳಲ್ಲಿಯೂ ಪುನರ್‌ವಸತಿ ಕಾರ್ಯವನ್ನು ಮಾತ್ರ ಪ್ರಾಮಾಣಿಕವಾದ ರೀತಿಯಲ್ಲಿ ಮಾಡಬೇಕು. ಸಿ ಬರ್ಡ್ ನಲ್ಲಿ ನಮ್ಮ ರಿಹ್ಯಾಬಿಲಿಟೇಶನ್ ಕಮಿಟಿ ಏನು ನಿರ್ಣಯವನ್ನು ತೆಗೆದುಕೊಂಡಿದ್ದಾರೆ ಅದಕ್ಕೆ ನಮ್ಮ ಸರಕಾರದ ವತಿಯಿಂದ ಕ್ಯಾಬಿನೆಟ್ ಅಪ್ರೂವಲ್ ಕೊಟ್ಟಿದ್ದೇವೆ. ಅದು ಅಂತಿಮವಾಗಿ ಇಂಪ್ಲಿಮೆಂಟ್ ಆಗಬೇಕಾಗಿದೆ. ಕೈಗಾ ಮತ್ತು ಕೂಡ ಸುಳ್ಳ ಜನರಿಗೆ ಅಂಕೋಲ ತಾಲ್ಲೂಕಿನಲ್ಲಿನ ಡೊಂಗ್ರಿ ಎನ್ನುವಲ್ಲಿ ಕಲ್ಲೇಶ್ವಾಂನಲ್ಲಿ ರೀಹ್ಯಾಬಿಲಿಟೇಷನ್ ಮಾಡಲು ನಿರ್ಣಯ ತೆಗೆದುಕೊಂಡಿದ್ದೇವೆ. ಅಲ್ಲಿ ಕಟ್ಟಿಂಗ್ ಕೆಲಸವೂ ಆಯಿತು. ಆದರ ಅನಂತರ ಅರಣ್ಯ ಇಲಾಖೆಯವರು ಕೆಲವೊಂದು ತಾಂತ್ರಿಕ ಸಮಸ್ಯೆಗಳನ್ನು ತಂದ ಕಾರಣ ಸ್ವಲ್ಪ ಕಾಲ ಸ್ಥಗಿತವಾಗಿದು. ಇನ್ನು ಮುಂದೆ ಆದಕ್ಕೆ ಚಾಲನೆ ಬರಬೇಕಾಗಿದೆ. ಈ ವಿಚಾರದಲ್ಲಿ ರೈತರ ಹಿತದೃಷ್ಟಿಯಿಂದ ಕೇಂದ್ರ ಸರಕಾರದವರಿಂದ ಏನು ಸಹಾಯ ಬೇಕಾಗಿದೆ ಅದನ್ನು ಸಂಪೂರ್ಣವಾಗಿ ಕೊಡಲಿಕ್ಕೆ ನಾವು ತಯಾರಾಗಿದ್ದೇವೆ. ನಿಮ್ಮ ಸರಕಾರಕ್ಕೆ ಆ ವಿಚಾರದಲ್ಲಿ ನಮ್ಮ ಪೂರ್ಣ ಸಹಕಾರವನ್ನು ಕೊಡಲಿಕ್ಕೆ ನಾವು ಸಿದ್ಧರಿದ್ದೇವೆ. ಇವೊತ್ತು ಕಾರವಾರದಲ್ಲಿ ಕೈಗಾ ಪ್ರಾಜೆಕ್ಟ್ ಆಗುತ್ತದೆ ಯಾವುದೇ ಸಂದರ್ಭದಲ್ಲಿ ನಿಲ್ಲುವುದಿಲ್ಲ ಎಂದು ಹೇಳಿರುತ್ತೀರಿ. ಆ ವಿಚಾರದಲ್ಲಿ ನಾನು ಸರಕಾರಕ್ಕೆ ಒಂದು ಎಚ್ಚರಿಕೆಯನ್ನು ಕೊಡಬಯಸುತ್ತೇನೆ: ಆ ಕುರಿತು ಒಂದು ಡಿಬೆಟ್ ಬೆಂಗಳೂರಿನಲ್ಲಿ ಮಾಡಿದ್ದೇವೆ. ಅದರಲ್ಲಿ ಆದ ಪ್ರೊಸೀಡಿಂಗ್ಸ್ ಕೇಂದ್ರ ಸರಕಾರಕ್ಕೂ ಹೋಗಿದೆ. ಆ ಕುರಿತು ಜನರ ಮನಸ್ಸಿನಲ್ಲಿ ಎರಡು ತರಹದ ಭಯ ಇದೆ. ಒಂದು ಆರೋಗ್ಯದ ವಿಚಾರವಾದರೆ ಇನ್ನೊಂದು ಪರಿಸರದ ವಿಚಾರ. ರಾಜ್ಯ ಸರ್ಕಾರ ಅವರ ಭಯವನ್ನು ನಿವಾರಣೆ ಮಾಡಲು ಮೊದಲು ಯತ್ನ ಮಾಡಬೇಕು. ಡಿಬೇಟ್‌ನಲ್ಲಿ ನಾವು ಸ್ಪಷ್ಟವಾಗಿ ಹೇಳಿದ್ದೇವೆ. ನಮ್ಮಲ್ಲಿ ಕೋಲ್ ಪ್ರಾಬ್ಲಮ್ ಇದೆ. ಥರ್ಮಲ್ ಸಮಸ್ಯೆ ಇದೆ. ಮಳೆ ಕಡಿಮೆಯಾದುದರಿಂದ ಹೈಡಲ್ ಪವರ್ ಜನರೇಟ್ ಆಗುವುದರಲ್ಲಿ ತೊಂದರೆಯಾಗಿದೆ.

12–45 P.M.

The Health Hazard Controlling Agency should not be under the Nuclear Power Authority. It should be separeted ಅದಕ್ಕೆ ಸಪರೇಟ್ ಕಂಟ್ರೋಲ್ ಇರಬೇಕು. ಜನರ ಮನಸ್ಸಿನಲ್ಲಿರುವ ಭಯ ಹೋಗಲು ಕ್ರಮ ಕೈಗೊಳ್ಳಬೇಕು. ಎರಡನೆಯದಾಗಿ, ಆ ಜನರ ವಿಶ್ವಾಸವನ್ನು ಗಳಿಸಿಕೊಳ್ಳಬೇಕು. When we say that it is a for peace, the power generation is for peace, why are you hesitant to tell the people? Why there should be secrecy? ಮೂರನೆಯದಾಗಿ ಎನ್‌ವೈರಾನ್‌ಮೆಂಟ್ ಕಾಪಾಡಲು ಎಷ್ಟು ಗಿಡ ಕಟಾವ್ ಆಗುತ್ತದೆ. ಅದಕ್ಕಿಂತ 000 ಪಟ್ಟು

ಗಿಡಗಳನ್ನು ಬೆಳೆಸಲು ಕ್ರಮ ಕೈಗೊಳ್ಳಬೇಕು. ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ಎನ್‌ವೈರನ್‌ಮೆಂಟನ್ನು ಪ್ರೊಟೆಕ್ಟ್ ಮಾಡಲು ಸಾಧ್ಯವೋ ಅಷ್ಟನ್ನು ಮಾಡಬೇಕು. ಕೊನೆಯದಾಗಿ ಈ ರಾಜ್ಯಪಾಲರ ಭಾಷಣದಲ್ಲಿ ಚುನಾವಣೆಗಳು ಪೀಸ್‌ಫುಲ್ ಆಗಿತ್ತೆಂದು ಹೇಳಿದ್ದಾರೆ. ನನ್ನ ಮಿತ್ರರಾದ ಶ್ರೀ ರಾಣೆಯವರು ಮಾತನಾಡುತ್ತಾ, ಮಾಜಿ ಸಚಿವರಾದ ಶ್ರೀ ದೇಶಪಾಂಡೆಯವರು ಅಧಿಕಾರಿಗಳ ಮೇಲೆ ಪ್ರಭಾವ ಬೀರಿದ್ದಾರೆಂದು ಹೇಳಿದ್ದಾರೆ. ಅವರಿಗೆ ನನ್ನ ಪರಿಚಯ ಚೆನ್ನಾಗಿದೆ. ನಾನು ಮಂತ್ರಿಯಾಗಿದ್ದಾಗ, ಮತ್ತು ಶಾಸಕನಾಗಿದ್ದಾಗ ಅವರ ಜೊತೆಯಲ್ಲಿ ಕೆಲಸ ಮಾಡಿದ್ದೇನೆ. ಆರೂವರೆ ವರ್ಷಗಳ ಕಾಲ ನಾನು ಮಂತ್ರಿಯಾಗಿದ್ದೆ. ಆ ಕಾಲದಲ್ಲಿ ನಾನೇನಾದರೂ ಕಾಂಗ್ರೆಸ್ (ಐ)' ಕಾರ್ಯಕರ್ತರಮೇಲೆ ಹಲ್ಲೆ ಮಾಡಿರುವುದಾಗಲಿ ಅಧಿಕಾರಿಗಳನ್ನು ಬಂಗಲೆಗೆ ಸೇರಿಸಿಕೊಂಡು ಏನಾದರೂ ಕೆಲಸಗಳನ್ನು ಮಾಡಿದ್ದೇ ಆಗಲಿ ಇದ್ದರೆ ಮತ್ತು ಅವರು ಅದನ್ನು ಸಾಬೀತು ಮಾಡಿದರೆ ನಾನು ನನ್ನ ರಾಜಕೀಯ ಜೀವನದಿಂದ ನಿವೃತ್ತನಾಗಲು ತಯಾರಿದ್ದೇನೆ. ನೀವು ಆ ಬೆಂಚಿನಿಂದ ಮುಂದಿನ ಬೆಂಚಿಗೆ ಬರಲು ಏತಕ್ಕೆ ಈ ರೀತಿ ಮಾತನಾಡಿದ್ದೀರಿ. ನೀವು ಮುಂದಿನ ಬೆಂಚಿಗೆ ಬರಬೇಕೆನ್ನುವುದೇ ನಮ್ಮ ಇಚ್ಛೆ ಇದೆ. ಆದರೆ ಮಾತನಾಡುವಾಗ ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ. ನನಗೆ ಅಧಿಕಾರಿಗಳು ಸಹಾಯ ಮಾಡಿದ್ದರೆ, ಅದರಿಂದ ಗೆದ್ದು ಬಂದಿದ್ದರೆ, ನಿಮಗೂ ಸಹ ಅಧಿಕಾರಿಗಳು ಸಹಾಯ ಮಾಡಿದ್ದರು ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಶ್ರೀ ಪ್ರಭಾಕರ್ ಎಸ್. ರಾಣೆ.— ಬೇರೆ ಯಾವ ಕ್ಷೇತ್ರದಲ್ಲಿಯೂ ಆಗಿಲ್ಲ. ಆದರೆ ನಿಮ್ಮ ಕ್ಷೇತ್ರದಲ್ಲಿ ಆಗಿದೆ.

ಶ್ರೀ ಆರ್. ವಿ. ದೇಶಪಾಂಡೆ.— ಡಿಸ್ಟ್ರಿಕ್ಟ್ ಎಲೆಕ್ಷನ್ ಆಫೀಸರ್ ಅವರು ಒಬ್ಬ ಐ.ಎ.ಎಸ್. ಆಫೀಸರ್ ಅವರು ಎನ್‌ಕ್ವೈರಿ ಮಾಡಿಸಿ ಇಲ್ಲಿ ಯಾವ ಅಧಿಕಾರದ ದುರುಪಯೋಗವು ಸಹ ಆಗಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ನಿಮ್ಮ ಕಾಂಗ್ರೆಸಿನ ಪ್ರಚಾರಿ ಬೆಂಡಗೇರಿ ಅವರು ಈ ಬ್ಯಾಲೆಟ್ ಪೇಪರನ್ನು ಸುಟ್ಟ ಪ್ರಕರಣದಲ್ಲಿ ಇನ್‌ವಾಲ್ವ್ ಆಗಿದ್ದಾರೆ. ಎಂದು ಹೇಳಿದ್ದಾರೆ. ಡೆಪ್ಯೂಟಿ ಕಮಿಷನರ್ ಅವರ ಪೋಸ್ಟಿಂಗ್ ಪ್ರೆಸಿಡೆಂಟ್ ರೂಲ್‌ನಲ್ಲಿ ಆಗಿದೆ. ಅಸಿಸ್ಟೆಂಟ್ ಕಮಿಷನರ್ ಅವರ ಪೋಸ್ಟಿಂಗ್ ಆವಾಗಲೇ ಆಗಿದೆ. ನಾವಿದ್ದಾಗ ಏನೂ ಇವರಿಗೆ ಪೋಸ್ಟಿಂಗ್ ಕೊಟ್ಟಿಲ್ಲ. You have to prove it.

SRI P. S. RANE.— We will prove it.

ಶ್ರೀ ಆರ್. ವಿ. ದೇಶಪಾಂಡೆ.— ಅಧಿಕಾರದಲ್ಲಿ ಆರೂವರೆ ವರ್ಷ ನಾವು ಇದ್ದೆವು. ಜಿಲ್ಲಾ ಪರಿಷತ್ತು, ಅಸೆಂಬ್ಲಿ ಮತ್ತು ಪಾರ್ಲಿಮೆಂಟ್ ಚುನಾವಣೆಗಳನ್ನು ಮಾಡಿದ್ದೇವೆ. ಜಿಲ್ಲೆಯಲ್ಲಿ ಆಗ ಒಂದೂ ಇಂಥ ಇನ್ಸಿಡೆಂಟ್ಸ್ ನಡೆದಿಲ್ಲ. ಕಾಂಗ್ರೆಸ್ ಕಾರ್ಯಕರ್ತರಿಗೆ ಅನ್ಯಾಯ ಮಾಡಿಲ್ಲ. ಆದರೆ ೩೦ನೇ ತಾರೀಖು ಶ್ರೀ ವೀರೇಂದ್ರ ಪಾಟೀಲ ರ ಸ್ಟೇರಿಂಗ್ ಏನು ಆಗುತ್ತದೆ ಹಳಿ ತಾಲ್ಲೂಕಿನಲ್ಲಿ ಗೂಂಡಾಗಿರಿ ಮಾಡಿ ಮುಂಡಗೋಡಿನ ನಮ್ಮ ಅಧ್ಯಕ್ಷರ ಮನೆಯ ಮೇಲೆ ಚಪ್ಪಲಿ ಕಲ್ಲು ಎಲ್ಲಾ ಬಿತ್ತು. ನಮ್ಮ ಪಕ್ಷದ ಕಛೇರಿಗಳ ಮೇಲೆ ಕಲ್ಲು ಹೊಡೆಯುವಂತಹ ಪ್ರಸಂಗಗಳು ನಡೆಯಿತು. ಇದೇ ೧ನೇ ತಾರೀಖು ನಮ್ಮ ಕಾರ್ಯಕರ್ತರು ಪೋಲೀಸು ಕಂಪ್ಲೈಂಟ್ ಮಾಡಿದ್ದಾರೆ. ಪೋಲೀಸಿನವರು ಯಾವುದೇ ಆಕ್ಷನ್ ತೆಗೆದುಕೊಂಡಿಲ್ಲ. ನಾವು ಆಗ ದೆಹಲಿಯಲ್ಲಿದ್ದೆವು.

ಶ್ರೀ ಪ್ರಭಾಕರ ಎಸ್. ರಾಣೆ.— ರೈತ ಸಂಘದ ಮಿತ್ರರು ಇದ್ದಾರೆ. ಅವರಿಗೂ ಗೊತ್ತು ನೀವು ಏನು ಮಾಡಿದ್ದೀರೆಂದು.

ಶ್ರೀ ಆರ್. ವಿ. ದೇಶಪಾಂಡೆ.— ನಿಮ್ಮ ಹಾಗೆ ಎಜ್ಯುಕೇಷನ್, ಇನ್ಸ್‌ಟ್ಯೂಷನ್ಸ್ ಏನೂ ನಾನು ಜಿಲ್ಲೆಯಲ್ಲಿ ಪ್ರಾರಂಭ ಮಾಡಿಲ್ಲ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.— ಜನಕ್ಕೆ ಗೊತ್ತಿದೆ, ಕುಳಿತುಕೊಳ್ಳಿ. ಆಯ್ತಪ್ಪ, ಒಂದು ಕೆಲಸ ಮಾಡೋಣ, ನಾನೂ ನೀವೂ ಇಬ್ಬರೂ ಬೇಡ. ನಿಮ್ಮ ಮುಖ್ಯಮಂತ್ರಿಗಳ ಮೇಲೆ ನನಗೆ ಸಂಪೂರ್ಣ ವಿಶ್ವಾಸ ಇದೆ. ಅವರೇ ಇದನ್ನು ತೀರ್ಮಾನಿಸಲಿ ಎಂಟೈರ್ ಫೈಲ್ ತರಿಸಲಿ ಅವರು ಹೇಳಿದ್ದನ್ನು ಒಪ್ಪಿಕೊಳ್ಳುತ್ತೇನೆ. I was not in my constituency for six days. I was touring in other parts. ಬೇಜವಾಬ್ದಾರಿಯಿಂದ ಮಾತಾಡಲಿಕ್ಕೆ ಹೋಗಬೇಡಿ. ಜನತಾದಳ ವರ್ಕರ್ಸ್‌ಗೆ ಚಪ್ಪಲೀಲಿ ಹೊಡೆದಿದ್ದಾರೆ. ಅವರ ಮನೆಗಳವರ ಮೇಲೆ ಹಲ್ಲೆಯಾಗಿದೆ. ಇದರ ಬಗ್ಗೆಯೆಲ್ಲ ಏನು ಕ್ರಮ ತೆಗೆದುಕೊಳುತ್ತಾರೆಂದು ಮುಖ್ಯಮಂತ್ರಿಗಳು ಹೇಳಲಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ಅವರು ವೈಯಕ್ತಿಕ ಆಪಾದನೆ ಮಾಡುತ್ತಿದ್ದಾರೆ. ಅದನ್ನು ನಿಲ್ಲಿಸಬೇಕು.

(ಗೊಂದಲ)

ಅಧ್ಯಕ್ಷರು.— ಎಲ್ಲಾ ಸದಸ್ಯರು ಕುಳಿತುಕೊಳ್ಳಬೇಕು. ಎಲ್ಲರಿಗೂ ಅವಕಾಶ ಕೊಡುತ್ತೇನೆ. ರಾಣೆಯವರ ಮೇಲೆ ಅಪಾದನೆ ಮಾಡಿದ್ದರೆ ಅದಕ್ಕೆ ಉತ್ತರಿಸುವ ಹಕ್ಕು ರಾಣೆಯವರಿಗಿದೆ.

SRI R. V. DESH PANDE.— I have got full faith in the Chief Minister. Let him decide. What else you want ?

(ಗೊಂದಲ)

ಹೀಗಾಗಿ ಇವತ್ತು ಎಮರ್ಜೆನ್ಸಿಯಲ್ಲಿ ೭೭ರಲ್ಲಿ ಹೀಗೆಯೇ ಆಗಿತ್ತು. ಆಮೇಲೆ ಸಾಕಷ್ಟು ಕೇಸೂ ನಡೆಯಿತು. ಇವತ್ತು ಅಲ್ಲಿ ನಮ್ಮ ಕಾರ್ಯಕರ್ತರಿಗೆ ಸಾಕಷ್ಟು ಸಂರಕ್ಷಣೆ ಬೇಕಾಗಿದೆ. ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂದು ಹೇಳಬೇಕು ಎಂದು ಹೇಳಿ ನನಗೆ ತಿಳಿದಷ್ಟು ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಇಷ್ಟು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಪ್ರಭಾಕರ ಎಸ್. ರಾಣೆ.— ನಿನ್ನೆ ದಿವಸ ನಾನು ಪ್ರಸ್ತಾಪ ಮಾಡಿದ ವಿಷಯಗಳ ಬಗ್ಗೆ ಮಾನ್ಯ ದೇಶಪಾಂಡೆಯವರು ಕೆಲವು ಮಾತುಗಳನ್ನು ಹೇಳಿದ್ದಾರೆ. ನಿನ್ನೆಯೇ ಮಾನ್ಯ ಸಿಂಧ್ಯ ಅವರೂ ನಾವೂ ಇದರ ಬಗ್ಗೆ ಗಮನ ಸೆಳೆಯುವ ಸೂಚನೆ ಕಳಿಸಿದ್ದೇವೆ. ಆ ವಿಷಯದ ಬಗ್ಗೆ ಎನ್‌ಕ್ವಯರಿ ಆಗಬೇಕು ಮಾನ್ಯ ಮುಖ್ಯಮಂತ್ರಿಗಳ ಮೇಲೆ ನಮಗೆ ವಿಶ್ವಾಸ ಇದೆ, ಎಂದಿದ್ದಾರೆ. ಅದಕ್ಕೇ ಅವರನ್ನು ಮುಖ್ಯ ಮಂತ್ರಿಗಳನ್ನು ಮಾಡಿದ್ದೇವೆ. ಅವರು ಕೇಳಿದಂತೆ ನಾವೂ ಸಹ ಕೂಡಲೇ ಸಿಒಡಿಯಿಂದ ಎನ್‌ಕ್ವಯರಿಗಾಗಿ ಒತ್ತಾಯ ಮಾಡಿದ್ದೇವೆ. ಮುಖ್ಯ ಮಂತ್ರಿಗಳೂ ರಿಪೋರ್ಟ್ ತರಿಸುತ್ತೇನೆ, ಬಂದ ನಂತರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದಾಗಿ, ಹೇಳಿದ್ದಾರೆ ಆ ವಿಚಾರಣೆಯಿಂದ ಹಿಂದೇಟು ಹಾಕುವ ಪ್ರಮೇಯ ಏನೂ ಇಲ್ಲ. ಅವರು ಹೇಳುತ್ತಾರೆ ನಾನು ಅಧಿಕಾರಕ್ಕೆ ಬಂದ ೪೮ ಗಂಟೆಯೊಳಗೆ ನಮ್ಮ ಜಿಲ್ಲೆಯಲ್ಲಿ ಗೂಂಡಾಗಿರಿಯಾಗಿದೆ ಎಂದು ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ. ಕಳೆದ ೬ ವರ್ಷಗಳಲ್ಲಿ ಏನು ಗೂಂಡಾಗಿರಿ ನಡೆದಿದೆ ಅದಕ್ಕೆ ಜೀವಂತ ಉದಾಹರಣೆಗಳಿವೆ. ಅನೇಕ ರೈತರ ರಕ್ತ ಸುರಿಸುವ ಕೆಲಸ ಈ ಜನ ಮಾಡಿದ್ದಾರೆ. ಅದಕ್ಕೇ ಜನ ಇವರಿಗೆ ಬುದ್ಧಿ ಕಲಿಸಿದ್ದಾರೆ. ಈಗ ಮತ್ತೆ ಬೊಬ್ಬೆ ಹಾಕುವುದು ವ್ಯರ್ಥ ಪ್ರಲಾಪವಷ್ಟೆ. ನಾಟಕ ಮಾಡುವುದು ಬೇಡ.

ಶ್ರೀ ಆರ್. ವಿ. ದೇಶಪಾಂಡೆ.—ಅಧ್ಯಕ್ಷರೇ, ಹಿಂದೆ ನಾನು ೬ ವರ್ಷಗಳ ಕಾಲ ಮಿನಿಸ್ಟರಾಗಿದ್ದೆ ಆಗ ಒಂದು ಸಲವಾದರೂ ಮಾನ್ಯ ಸದಸ್ಯರು ಇಂಥಾ ಕಡೆ ಗೂಂಡಾಗಿರಿ ನಡೆಯಿತು ಎಂದು ನನಗೆ ಹೇಳಲಿಲ್ಲ. ಈಗ ಇವರು ಹೇಳುತ್ತಿದ್ದಾರೆ. ಅವರು ಈ ಕಡೆ ಇದ್ದಾಗ ಸಿಬಿಐ ಎನ್‌ಕ್ವಯರಿ ಕೇಳುತ್ತಿದ್ದರು. ಈಗ ಸಿಒಡಿ ಬೇಕು ಎನ್ನುತ್ತಿರುವುದು ಏಕೆ ?

ಸಿ ಓ ಡಿ ಬೇಡ, ಸಿ ಬಿ ಐ ಬೇಡ. ಸಧ್ಯದಲ್ಲಿ ಡಿ.ಸಿ. ವರದಿ ಇದೆ ಅದರ ಮೇಲೆ ಕ್ರಮ ತೆಗೆದುಕೊಳ್ಳಲಿ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಎರಡೂ ಕಡೆಯ ಅನೇಕ ಜನ ಹಿರಿಯ ಸದಸ್ಯರು ಮಾತನಾಡುತ್ತಾ ಈ ರಾಜ್ಯದ ಜನತೆಯ ಪರಿಸ್ಥಿತಿಯನ್ನು ತಿಳಿಸುವಂತಹ ಪ್ರಯತ್ನವನ್ನು ಮಾಡುತ್ತಾ ಪರಿಸ್ಥಿತಿ ಸುಧಾರಣೆಯ ಬಗ್ಗೆ ಅನೇಕ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಇತ್ತೀಚಿನ ಚುನಾವಣೆಯ ಫಲಿತಾಂಶವನ್ನು ಎರಡೂ ಕಡೆಯ ಸದಸ್ಯರು ಗಮನಿಸಬೇಕು. ಕೇಂದ್ರದಲ್ಲಿರುವಂತಹ ಸರಕಾರವನ್ನು ಮತ್ತು ರಾಜ್ಯಗಳಲ್ಲಿ ಅಧಿಕಾರದಲ್ಲಿರುವಂತಹ ಸರಕಾರವನ್ನು ಅಧಿಕಾರದಿಂದ ಕಿತ್ತು ಒಗೆಯುವಂತಹ ಪ್ರಯತ್ನವನ್ನು ಈ ದೇಶದ ಮತದಾರ ಮಾಡಿದ್ದಾನೆ. ಯಾರು ಯಾವ ಕಡೆ ಕೂಳಿತಿದ್ದಾರೆ ಎಂಬುದು ಮುಖ್ಯವಲ್ಲ. ಸ್ವಾತಂತ್ರ್ಯ ಬಂದ ೪೨ ವರ್ಷಗಳಲ್ಲಿ ಅಧಿಕಾರಕ್ಕೆ ಬಂದಂತಹ ಜನ ಜನಪರ ಕಾರ್ಯಕ್ರಮವನ್ನು ರೂಪಿಸಿ ಜನರ ಕಣ್ಣೀರನ್ನು ಒರೆಸುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡದಿದ್ದರೆ ಇವೊತ್ತು ಈ ದೇಶದ ಪರಿಸ್ಥಿತಿ ಏನು ದುಸ್ಥಿತಿಯಲ್ಲಿ ತೊಳಲಾಡುತ್ತಿದೆ. ಈ ದುಸ್ಥಿತಿ ಇರುತ್ತಿರಲಿಲ್ಲವೆಂದು ನನ್ನ ಭಾವನೆ. ಈ ಕಡೆ ಕುಳಿತಿರತಕ್ಕಂತಹ ಜನ ನಾವು ಸಾಧನೆ ಮಾಡಿದ್ದೇವೆಂದು ಹೆಮ್ಮೆ ಪಟ್ಟುಕೊಳ್ಳುವಂತಹ ಸ್ಥಿತಿ ಇಲ್ಲ. ಆಂಧ್ರದಲ್ಲಿದ್ದಂತಹ ವಿರೋಧ

ಪಕ್ಷದ ಸರಕಾರ ಬಿದ್ದಿದೆ. ಕರ್ನಾಟಕ ರಾಜ್ಯದಲ್ಲಿ ೮೪ ರವರೆಗೆ ಅಧಿಕಾರದಲ್ಲಿದ್ದಂತಹ ಕಾಂಗ್ರೆಸ್ ಪಕ್ಷದ ಬಗ್ಗೆ ಜನ ಬೇಸತ್ತು ಈಗ ಈ ರಾಜ್ಯದ ಜನ ಬದಲಾವಣೆಯನ್ನು ತಂದರು ಆ ಬದಲಾವಣೆ ಜನರ ನಿರೀಕ್ಷೆಯನ್ನು ಅಪೇಕ್ಷೆಯನ್ನು ಪೂರೈಸುವಲ್ಲಿ ಜನತಾ ದಳದ ಸರಕಾರ ವಿಫಲವಾದ ಪರಿಣಾಮ ಕರ್ನಾಟಕ ರಾಜ್ಯನಲ್ಲಿ ಮತ್ತೊಮ್ಮೆ ಬದಲಾವಣೆಯನ್ನು ತರುವಂತಹ ಪ್ರಯತ್ನವನ್ನು ಮತದಾರ ಮಾಡಿದ್ದಾನೆ. ಈ ಸದನದಲ್ಲಿ ನಾವು ಪರಸ್ಪರ ಆರೋಪ ಪ್ರತ್ಯಾರೋಪ ಮಾಡುವಂಥದ್ದರಲ್ಲಿ ತೊಡಗಿದ್ದೇವೆ. ಕಾಂಗ್ರೆಸ್ ಪಕ್ಷ ವಿರೋಧ ಪಕ್ಷದಲ್ಲಿ ಕುಳಿತಾಗ ನೀವು ಏನು ಮಾಡಿದಿರಿ ಎಂದು ಆಡಳಿತ ಪಕ್ಷದವರನ್ನು ಕೇಳುವುದು ಅವರ ವಿಫಲತೆಯನ್ನು ಎತ್ತಿ ಆಡುವುದು, ಅದೇ ಅವರು ಆಡಳಿತ ಪಕ್ಷದಲ್ಲಿ ಕುಳಿತು ಕೆಲವು ದಿವಸಗಳು ಕಳೆದಿವೆ ಆದರೆ ಜನ ಹಿತ ದೃಷ್ಟಿಯಿಂದ ಏನು ಆಗಬೇಕಾಗಿತ್ತೋ ಅದು ಆಗಿಲ್ಲ. ಇವತ್ತು ನಿಮಗೆ ಹೆಚ್ಚಿನ ಬಹುಮತ ಸಿಕ್ಕಿದೆ ಆದರೂ ರಾಜ್ಯದ ಜನತೆಯ ಕಣ್ಣೀರನ್ನು ಒರೆಸುವಂತಹ ಪ್ರಾಮಾಣಿಕ ಪ್ರಯತ್ನ ನಮಗೆ ಇಲ್ಲಿ ಕಾಣುತ್ತಿಲ್ಲ. ಆದಕ್ಕಾಗಿ ನಾನು ವಿಷಾದ ವ್ಯಕ್ತ ಪಡಿಸುತ್ತೇನೆ. ಈ ಮಾತನ್ನು ಹೇಳುವ ಒಂದು ಉದ್ದೇಶವೇನೆಂದರೆ ರಾಜ್ಯಪಾಲರ ಭಾಷಣದ ಬಗ್ಗೆ ಔಪಚಾರಿಕವಾಗಿ ವಂದನೆ ಸಲ್ಲಿಸಬೇಕು ಎನ್ನುವ ಪದ್ಧತಿ ಇದೆ. ಆದರೆ ವಂದನೆ ಸಲ್ಲಿಸುವಂತಹ ಅಗತ್ಯ ಇಲ್ಲ. ಈ ರಾಜ್ಯ ಸರಕಾರ ರಾಜ್ಯಪಾಲರ ಮುಖಾಂತರ, ತನ್ನ ಕಾರ್ಯಕ್ರಮ ಮುಂದೆ ಏನು ಎನ್ನುವುದನ್ನು ಈ ಸದನದ ಮೂಲಕ ರಾಜ್ಯದ ಜನತೆಗೆ ನೀಡುತ್ತದೆ. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ನನ್ನ ಸರಕಾರ ಪ್ರಚಂಡ ಬಹುಮತದಿಂದ ಅಧಿಕಾರಕ್ಕೆ ಬಂದಿದೆ ಜನರು ಹೊಸದೊಂದು ಅಭಿಲಾಷೆಯನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾರೆ, ಹೊಸದಾದ ಆಶೋತ್ತರಗಳು ಅವರ ಮನದಲ್ಲಿ ಇವೆ ಇದರ ಅರಿವು ನನ್ನ ಸರಕಾರಕ್ಕೆ ಇದೆ ಜನತೆಯ ಆಸೆ ಆಕಾಂಕ್ಷೆಗಳನ್ನು ಈಡೇರಿಸಲು ಸರ್ವ ಪ್ರಯತ್ನವನ್ನು ಅತ್ಯಂತ ಪ್ರಾಮಾಣಿಕವಾಗಿ ಮಾಡುತ್ತೇನೆಂದು ಹೇಳಿದ್ದಾರೆ. ಇದನ್ನು ತಾವು ಹೇಳಿಸಿದ್ದೀರಿ. ಈ ರಾಜ್ಯಪಾಲರ ಭಾಷಣದಲ್ಲಿ ಏನಾದರೂ ನಿರ್ದಿಷ್ಟವಾಗಿ ಈ ರಾಜ್ಯದ ಜನತೆಯ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಅವರ ಸಮೃದ್ಧಿಯ ಜೀವನಕ್ಕೆ ದಾರಿ ಮಾಡಿಕೊಡುವುದಕ್ಕೆ ಸ್ಪಷ್ಟವಾದ ಕಾರ್ಯಕ್ರಮ ಯಾವುದಾದರೂ ಇದೆಯೇ ? ಇದರ ಬಗ್ಗೆ ಮಾನ್ಯ ಬಸವಲಿಂಗಪ್ಪನವರು ಹೇಳುವುದಾದರೆ ನನ್ನ ಮಾತನ್ನು ವಾಪಸ್ ತೆಗೆದುಕೊಳ್ಳುತ್ತೇನೆ. ಇಲ್ಲವೇ ನಮಗೆ ೫ ವರ್ಷಗಳ ಕಾಲಾವಕಾಶ ಇದೆ ಮಾಡುತ್ತೇವೆ ನೀವು ಚಿಂತೆ ಮಾಡುವಂತಹ ಅಗತ್ಯವಿಲ್ಲವೆಂದು ತಾವು ಹೇಳಬಹುದು. ಹಿಂದೆ ಮಾಡಿರತಕ್ಕ ಕೆಲಸ, ಹಾಗೂ ಈಗ ಮಾಡಿರತಕ್ಕ ಕೆಲಸದ ಬಗ್ಗೆ ಹೇಳುತ್ತಿದ್ದೇನೆ. ಇಲ್ಲಿ ಕುಳಿತವರು ಅಲ್ಲಿ ಕುಳಿತಿದ್ದಾರೆ. ಅಲ್ಲಿ ಕುಳಿತಿರುವವರು ಇಲ್ಲಿ ಕುಳಿತಿರುತ್ತಾರೆ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಆಡಳಿತ ಪಕ್ಷಕ್ಕಿಂತ ಮಹತ್ತರವಾದ ಜವಾಬ್ದಾರಿ ವಿರೋಧ ಪಕ್ಷದ ಮೇಲಿದೆ. ತಾವು ಅಧಿಕಾರದಲ್ಲಿದ್ದಾಗ ತಮ್ಮ ಮನಸ್ಸಿನಲ್ಲಿ ಏನು ಭಾವನೆ ಇರುತ್ತದೆ ಅದನ್ನು ವ್ಯಕ್ತ ಮಾಡಲಿಕ್ಕೆ ಆಗುವುದಿಲ್ಲ. ಅಧಿಕಾರದಲ್ಲಿ ಇದ್ದಂತಹ ಜನತಾ ದಳ, ಜನತಾ ಪಕ್ಷ ಜನ ವಿರೋಧಿ, ರೈತರ ವಿರುದ್ಧ ನೀತಿ ಅನುಸರಿಸಿದ್ದು ಅದನ್ನು ವಿಧಾನ ಸಭೆಯ ಒಳಗಾಗಲಿ ಅಥವಾ ಹೊರಗಾಗಲಿ ಜನಜಾಗೃತಿ ಉಂಟು ಮಾಡಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದರೆ ಇವತ್ತು ರಾಜ್ಯದ ಜನತೆಗೆ ಈ ದುಃಸ್ಥಿತಿ ಬರುತ್ತಿರಲಿಲ್ಲ. ಸರ್ಕಾರಗಳು ತಪ್ಪನ್ನು ಮಾಡುತ್ತವೆ. ಆ ತಪ್ಪನ್ನು ತಿದ್ದಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಸರ್ಕಾರ ತಪ್ಪನ್ನು ಮಾಡಿದಾಗ ಅದರ ದುರ್ಲಾಭ ಪಡೆಯುವಂತಹ ಒಂದು ಪಾಯಿಂಟ್ ಪ್ರೋಗ್ರಾಮ್ ಮಾಡಿದ್ದಿರಿ ಆದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಹಿಂದಿನ ಸರ್ಕಾರ ಮಾಡಿದ ಕಾರ್ಯಕ್ರಮಗಳ ವೈಫಲ್ಯವನ್ನು ಹೇಳಿದರೆ ಆ ಕಡೆಯವರು ಚಪ್ಪಾಳೆ ತಟ್ಟುತ್ತಾರೆ. ಇವೊತ್ತಿನ ದಿವಸ ರಾಜಕೀಯ ಅಸ್ಥಿರತೆ ವ್ಯಾಪಕವಾಗಿ, ಭ್ರಷ್ಟಾಚಾರ ಅಧಿಕವಾಗಿ ಈ ರಾಜ್ಯದ ಜನ ಕಂಗಾಲಾಗಿದ್ದಾರೆ. ಈ ಪರಿಸ್ಥಿತಿಯನ್ನು ಸುಧಾರಣೆ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟು ಅಧಿಕಾರಕ್ಕೆ ಬಂದಿರುವ ತಾವು ರಾಜ್ಯಪಾಲರ ಭಾಷಣದಲ್ಲಿ ಸ್ಪಷ್ಟವಾದ ಯಾವುದೇ ಒಂದು ಕಾರ್ಯಕ್ರಮವನ್ನು ರೂಪಿಸದೆ ಇರುವುದು ನನಗೆ ನಿಜಕ್ಕೂ ದುಃಖವಾಗುತ್ತಿದೆ. ನಿಮಗೆ ಕಾರ್ಯ ಮಾಡುವುದಕ್ಕೆ ಶಕ್ತಿ ಇಲ್ಲವೆಂದಿಲ್ಲ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಿಮ್ಮ ಚಿಂತನೆ ಯಾವಾಗ ಶುರುವಾಗುತ್ತದೆ. ಚುನಾವಣೆ ಸಮಯದಲ್ಲಿ ಜನರ ಹತ್ತಿರ ಹೋಗಿ ಆಶ್ವಾಸನೆ ಕೊಟ್ಟು ಅಧಿಕಾರಕ್ಕೆ ಬಂದು ಮತ್ತೊಮ್ಮೆ ಜನಪರ ಕಾರ್ಯಕ್ರಮಗಳನ್ನು ರೂಪಿಸುವುದು. ಅಧಿಕಾರದಲ್ಲಿ ಇದ್ದ ಸಮಯದಲ್ಲಿ ಜನಪರ ಕಾರ್ಯಕ್ರಮದ ಬಗ್ಗೆ ಯೋಚನೆ ಮಾಡಲು ನಿಮಗೆ ಬಿಡುವು ಸಿಗುತ್ತದೆಯೇ. ನೀವು ಹಿರಿಯ ಸಚಿವರು ಇದ್ದೀರಿ. ಬೇರೆ ಸಚಿವರನ್ನು ಕೇಳಿದರೆ ಅವರು ವಿಧಾನ ಪರಿಷತ್ತಿಗೆ ಹೋಗಿದ್ದಾರೆ. ಎಂದು ಹೇಳುತ್ತೀರಿ. ನೀವುಗಳೆಲ್ಲಾ ಒಟ್ಟಾಗಿ ಸೇರಿ ಕಾರ್ಯಕ್ರಮದ ಬಗ್ಗೆ ಚರ್ಚೆ ಮಾಡುವುದಕ್ಕೆ ನಿಮಗೆ ಬಿಡುವು ಇದೆಯೇ ? ನೀವು ಹೇಳಬಹುದು ಇನ್ನೂ ಸಮಯ ಇದೆ, ಬಿಡುವು ಸಿಗುತ್ತದೆ ಎಂದು. ನಿಮ್ಮ ಮಂತ್ರಿಮಂಡಲದಲ್ಲಿರತಕ್ಕ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿಕೊಂಡು ಮಂತ್ರಿಮಂಡಲವನ್ನು ವಿಸ್ತರಿಸಿಕೊಂಡು ಆ ನಂತರ ಜನರ

ಕಲ್ಯಾಣದ ಬಗ್ಗೆ ಯೋಚನೆ ಮಾಡೋಣ ಎಂಬ ದೃಷ್ಟಿ ನಿಮಗೆ ಇರಬಹುದು. ಈ ರಾಜ್ಯದ ರೈತ ನಿರುದ್ಯೋಗಿ ಯುವಕ. ಕೃಷಿ ಕಾರ್ಮಿಕರು ದುಡಿಯುವುದಕ್ಕೆ ಶಕ್ತಿ ಇಲ್ಲ ಭಿಕ್ಷೆ ಕೊಡಿ ಎಂದು ಆತ ಕೇಳುತ್ತಿಲ್ಲ. ದುಡಿಯುವುದಕ್ಕೆ ಶಕ್ತಿ ಇದ್ದರೂ, ಆತ ಸಿದ್ಧ ಇದ್ದರೂ ಆತ ಕೇಳುವುದು ಏನನ್ನು ನನಗೆ ಕೈಗೆ ಕೆಲಸ ಕೊಡಿ. ಹೊಲಕ್ಕೆ ನೀರು ಕೊಡಿ ಎಂದು ಕೇಳುತ್ತಿದ್ದಾನೆ. ಸ್ವಾತಂತ್ರ್ಯ ಬಂದ ನಂತರ ೪೨ ವರ್ಷಗಳಲ್ಲಿ ನಿರುದ್ಯೋಗಿ ಯುವಕ, ತಂದೆ ತಾಯಿಗಳಿಗೆ ಭಾರವಾಗಿ ಸಮಾಜಕ್ಕೆ ಭಾರವಾಗಿ ಭಿಕ್ಷುಕನಾಗಿ ಅಲೆಯುತ್ತಿದ್ದಾನೆ. ನೀವು ಆತನ ಬಗ್ಗೆ ಚಿಂತೆ ಮಾಡುವುದು ಯಾವಾಗ? ಚುನಾವಣೆ ಇನ್ನೂ ಮೂರು ತಿಂಗಳಿದೆ ಎನ್ನುವಾಗಲೇ? ನೀವು ಈಗ ರಿಕ್ರೂಟ್‌ಮೆಂಟ್ ಬ್ಯಾನ್ ಮಾಡಿದ್ದೀರಿ, ಅದನ್ನು ತೆಗೆದು ಯುವಕರಿಗೆ ಉದ್ಯೋಗ ಒದಗಿಸಿಕೊಡುವ ಪ್ರಯತ್ನವನ್ನು ಮಾಡಿ.

ಸ್ಪಷ್ಟವಾದಂಥ ಯಾವ ಕಾರ್ಯಕ್ರಮವನ್ನು ತಾವು ರೂಪಿಸುತ್ತೀರಿ. ಇದು ಕೇಂದ್ರ ಸರ್ಕಾರಕ್ಕೆ ರಾಜ್ಯಪಾಲರು ಕೊಟ್ಟಂಥ ಒಂದು ಮೆಮೊರ್ಯಾಂಡಂ ರೀತಿ ಇದೆ. ಯಾವುದೇ ಒಂದು ಹೊಸ ದೃಷ್ಟಿ ಇದರಲ್ಲಿಲ್ಲ, ಜನಪರ ಕಾರ್ಯಕ್ರಮಗಳಿಲ್ಲ. ಇದು ಒಂದು ನಿರಾಶೆಯ ಮಾಮೂಲಿ ಕಾಗದದ ತುಂಡು ಈ ನಮ್ಮ ರಾಜ್ಯಪಾಲರ ಭಾಷಣ. ರಾಜ್ಯದಲ್ಲಿ ವ್ಯಾಪಕ ಭ್ರಷ್ಟಾಚಾರ ತಾಂಡವಾಡುತ್ತಿದೆ ಎಂದು ಹೇಳಿದಿರಿ. ತಾವು ಇಲ್ಲಿದ್ದಾಗ ಹೇಳುತ್ತಾ ಇದ್ದಿರಿ. ಆರ್ಥಿಕ ದಿವಾಳಿತನದಿಂದ ಸಂಬಳಕ್ಕೆ ದುಡ್ಡಿಲ್ಲದಂಥ ಸ್ಥಿತಿ ರಾಜ್ಯದಲ್ಲಿ ಇರಬೇಕಾದರೆ ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸುವಂಥ ಹೊಸ ದೃಷ್ಟಿ ಇದರಲ್ಲಿಯೇ? ಇದನ್ನೆಲ್ಲಾ ಯೋಚನೆ ಮಾಡುವಂಥ ಶಕ್ತಿ ನಿಮ್ಮ ಮುಖ್ಯ ಮಂತ್ರಿಗಳಿಗೆ ಇಲ್ಲ ಎಂದು ಹೇಳುವುದಿಲ್ಲ, ಚಿಂತನೆ ಮಾಡುವ ಶಕ್ತಿ ಇದೆ. ಅದಕ್ಕೋಸ್ಕರ ನೀವು ಮುಖ್ಯ ಮಂತ್ರಿಯನ್ನಾಗಿ ಅವರನ್ನು ಮಾಡಿದ್ದೀರಿ. ಆದರೆ ಇದನ್ನೆಲ್ಲಾ ಯೋಚನೆಮಾಡುವುದಕ್ಕೆ ಅವರಿಗೆ ಬಿಡುವು ಕೊಟ್ಟಿಲ್ಲದೇ ಇರಬಹುದು, ಆದ್ದರಿಂದ ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ವಿನಂತಿಸುತ್ತೇನೆ. ಪರಸ್ಪರ ಒಳಜಗಳ, ಗುಂಪುಗಾರಿಕೆ, ಗೊಂದಲಗಳ ಮಧ್ಯೆ ನೀವು ಆಕಸ್ಮಾತ್ ಸಿಕ್ಕಿಕೊಂಡಿದ್ದರೆ ಅದರಿಂದ ಬಿಡಿಸಿಕೊಂಡು ಇದರ ಬಗ್ಗೆ ಯೋಚನೆ ಮಾಡಿ ಎಷ್ಟು ದಿವಸ ಅಧಿಕಾರದಲ್ಲಿರುತ್ತೀರಿ ಎನ್ನುವುದು ಮುಖ್ಯವಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.—ನಮ್ಮಲ್ಲಿ ಭಿನ್ನಾಭಿಪ್ರಾಯ ಇದೆ ಎಂದು ನಿಮಗೆ ಯಾರು ಹೇಳಿದರು ನೀವು ಊಹೆ ಮಾಡಿಕೊಂಡು ಹೇಳುತ್ತಿದ್ದೀರಲ್ಲ, ನಿಮ್ಮದು ನೀವು ಹೇಳಿ. ನಮ್ಮ ಪಕ್ಷದ ಬಗ್ಗೆ ನೀವು ಹೇಳುವುದು ಬೇಡ, ದಯವಿಟ್ಟು ನಿಮ್ಮ ಭಾಷಣವನ್ನು ಮುಂದುವರಿಸಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಪತ್ರಿಕೆಯಲ್ಲಿ ವಿಚಾರಗಳು ಬರುತ್ತಿವೆ. ಅಡ್ವೋಕೇಟ್ ಜನರಲ್‌ನ್ನು ನೇಮಕ ಮಾಡಿದಿರಲ್ಲ ಆಗ ಭಿನ್ನಾಭಿಪ್ರಾಯ ಬಂದು ಬದಲಾವಣೆ ಆಗಲಿಲ್ಲವೇ. ನಿಮ್ಮ ಮುಖ್ಯ ಮಂತ್ರಿಗಳು ನೇಮಕ ಮಾಡಿದ್ದಕ್ಕೆ ಪ್ರತಿಭಟನೆ ಮಾಡಿ ಬದಲಾವಣೆ ಯಾಗಿರುವುದು ಪತ್ರಿಕೆಯಲ್ಲಿ ಬಂದಿಲ್ಲವೇ?

ಶ್ರೀ ಜಿ. ಎಸ್. ಶಿವನಂಜಪ್ಪ.—ನಿಮ್ಮ ಅಡ್ವೈಸ್ ನಮಗೆ ಬೇಕಾಗಿಲ್ಲ, ನಾವು ಸರಿಪಡಿಸಿಕೊಳ್ಳುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಡ್ವೋಕೇಟ್ ಜನರಲ್‌ನ್ನು ಅಪಾಯಿಂಟ್ ಮಾಡುವಾಗ ಕಚ್ಚಾಟ ಪ್ರಾರಂಭವಾಗಿದೆ. ಇದು ನಿಮ್ಮ ಸ್ವಂತ ಮನೆಯ ವ್ಯವಹಾರವೇ?

ಶ್ರೀ ಜಿ. ಎಸ್. ಶಿವನಂಜಪ್ಪ.—ಅದನ್ನು ಇಲ್ಲಿ ಡಿಸ್ಕಸ್ ಮಾಡುವುದು ಬೇಡ. ಅವರು ಬೇಕಾದವರನ್ನು ಅಪಾಯಿಂಟ್ ಮಾಡಿಕೊಳ್ಳುತ್ತಾರೆ ಅವರಿಗೆ ಪ್ರೊರೊಗೇಟೀವ್ ರೈಟ್ ಇದೆ ಮಾಡಿಕೊಂಡಿದ್ದಾರೆ, ನಿಮಗೆ ಏಕೆ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಶಿವನಂಜಪ್ಪನವರು ಕೆಣಕಿದರೆ ನನಗೆ ಸ್ವಲ್ಪ ಉತ್ಸಾಹ ಬರುತ್ತದೆ. ಅವರು ಹೇಳುವುದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ನಾನು ಒಂದು ಮಾತನ್ನು ಹೇಳುತ್ತೇನೆ. ಚುನಾಯಿತ ಪ್ರತಿನಿಧಿ ಇಲ್ಲಿ ಬಂದಮೇಲೆ, ನಾನು ಜನತೆಯ ಪ್ರತಿನಿಧಿಯಾಗಿ ಇಲ್ಲಿ ಬಂದಿದ್ದೇನೆ, ಇಲ್ಲಿ ಮಾತನಾಡುವಂಥ ಒಂದೊಂದು ಮಾತೂ ಸಹ ನನ್ನ ಕ್ಷೇತ್ರದಲ್ಲಿರುವ ಜನಗಳ ಮನಸ್ಸಿನಲ್ಲಿರುವ ಭಾವನೆಗಳನ್ನು ವ್ಯಕ್ತಪಡಿಸುವಂಥಾದ್ದಾಗಿರಬೇಕು, ನಾನು ಅವರ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ಬಂದಿರುವಂಥ ಅವರ ಪ್ರತಿನಿಧಿ ಎನ್ನುವಂಥ ಅರಿವು ನಮ್ಮಲ್ಲಿ ಇನ್ನೂ ಜಾಸ್ತಿ ಬಂದಾಗ ಮಾತ್ರ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಒಂದು ಅರ್ಥ ಬರುತ್ತದೆ, ಈ ಸದನದಲ್ಲಿ ನಮ್ಮ ಬುದ್ಧಿವಂತಿಕೆಯ ಪ್ರದರ್ಶನಕ್ಕೇ ಹೆಚ್ಚು ಸಮಯ ವ್ಯಯವಾಗುತ್ತಿದೆಯೇ ಹೊರತು ಈ ಕಡೆ ಕುಳಿತಂಥ ಕಡಿಮೆ ವಿರೋಧ ಪಕ್ಷದ ಸದಸ್ಯರು

ಕೊಡುವಂಥ ಸಲಹೆಗಳನ್ನು ಸರಿಯಾದ ರೀತಿಯಲ್ಲಿ ತೆಗೆದುಕೊಂಡು ಅವುಗಳನ್ನು ಕಾರ್ಯರೂಪಕ್ಕೆ ತರುವಂಥ ಪ್ರಯತ್ನ ನಿಮ್ಮ ಕಡೆಯಿಂದಾದರೆ ಬಹುಶಃ ಒಳ್ಳೆಯ ಆಡಳಿತ ಕೊಡುವುದಕ್ಕೆ ನಿಮ್ಮಿಂದ ಸಾಧ್ಯವಾಗಬಹುದು. ರಚನಾತ್ಮಕ ಟೀಕೆಗಳನ್ನು ಸ್ವಾಗತ ಮಾಡುವಂಥಾದ್ದು ನಿಮ್ಮ ಕಡೆಯಿಂದ ಆಗಬೇಕು ಎಂದು ಈ ಸಂದರ್ಭದಲ್ಲಿ ತಮ್ಮಿಂದ ನಾನು ನಿರೀಕ್ಷೆಯನ್ನು ಮಾಡುತ್ತೇನೆ. ಮಾನ್ಯ ಅಧ್ಯಕ್ಷರೆ ಕರ್ನಾಟಕ ರಾಜ್ಯದ ರೈತರ ಬಗ್ಗೆ, ಕೂಲಿ ಕಾರ್ಮಿಕರ ಬಗ್ಗೆ, ಕೃಷಿ ಕಾರ್ಮಿಕರ ಬಗ್ಗೆ ಅನೇಕ ದಿವಸಗಳಿಂದ ಇಲ್ಲಿ ಚರ್ಚೆಗಳು ಆಗುತ್ತಿವೆ. ಆರ್ಥಿಕ ಹೊರೆ ಇಲ್ಲದಂಥ ಕಾರ್ಯಕ್ರಮಗಳನ್ನು ತಾವು ರೂಪಿಸಬಹುದು ಉದಾಹರಣೆಗೆ ರಾಜ್ಯದಲ್ಲಿ ಮೂರೂವರೆ ಲಕ್ಷ ಕಡುಬಡವರು. ಕೃಷಿ ಕಾರ್ಮಿಕರು ಒಂದೆರಡು ಎಕರೆಗಳನ್ನು ಬಗರ್‌ಹುಕುಂ ಸಾಗುವಳಿ ಮಾಡುತ್ತಾ ಇದ್ದಾರೆ. ಆ ಬಡವರಿಗೆ ಆ ಜಮೀನು ನಿಮ್ಮದು ಎಂದು ಸಾಗುವಳಿ ಚೀಟಿ ಕೊಡುವುದಕ್ಕೆ ನಿಮಗೆ ಇರತಕ್ಕಂಥ ತೊಡಕು ಏನು. ಆ ಜಮೀನು ನಿಮ್ಮದು ಎಂದು ಕೊಟ್ಟಿದ್ದರೆ ಅವರು ಆ ಜಮೀನಿನಲ್ಲಿ ಬಾವಿ ತೆಗೆದುಕೊಂಡು ತನ್ನ ಕಾಲ ಮೇಲೆ ತಾನು ನಿಲ್ಲುವಂಥ ಪ್ರಯತ್ನ ಮಾಡುತ್ತಿರಲಿಲ್ಲವೇ. ಈ ಕಡೆ ಮಿತ್ರರು ಅಧಿಕಾರದಲ್ಲಿದ್ದಾಗ ೧೯೮೮ರಲ್ಲೇ ಅಕ್ಟೋಬರ್‌ನಲ್ಲಿ ಸಿ ಅಂಡ್ ಡಿ ಲ್ಯಾಂಡ್‌ನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡತಕ್ಕಂಥ ಕರಾಳಶಾಸನವನ್ನು ತಂದರು ಮೂರೂವರೆ ಲಕ್ಷ ಜನರು ಬೀದಿ ಪಾಲು ಆಗುವಂಥ ಶಾಸನವನ್ನು ತಂದರು. ಇದರ ಬಗ್ಗೆ ನಾನು ಪ್ರತಿಭಟನೆ ಮಾಡಿದ್ದೆ, ಧರಣಿ ಕುಳಿತಿದ್ದೆ, ಇವತ್ತು ಶಿವಮೊಗ್ಗ ಜಿಲ್ಲಾಧಿಕಾರಿಗಳಿಂದ ಕನ್ನಡ ಪ್ರಭ ಪತ್ರಿಕೆಯಲ್ಲಿ ಒಂದು ಹೇಳಿಕೆ ಬಂದಿದೆ. ಅದು ಏನೆಂದರೆ

> "ಅರಣ್ಯ ಇಲಾಖೆಗೆ ಸಿ ಮತ್ತು ಡಿ ವರ್ಗದ ಭೂಮಿ ವರ್ಗಾವಣೆ ತನಿಖೆಗೆ ಆದೇಶ. ರಾಜ್ಯ ಸರ್ಕಾರವು ೧೯೮೦ರಲ್ಲಿ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾಯಿಸಿದ ಸಿ ಮತ್ತು ಡಿ. ವರ್ಗದ ಭೂಮಿ, ಗೋಮಾಳ ಮತ್ತು ಸೊಪ್ಪಿನ ಬೆಟ್ಟಗಳ ಮರು ತನಿಖೆ ನಡೆಸಲು ಆದೇಶಿಸಿದೆ ಎಂದು ಜಿಲ್ಲಾಧಿಕಾರಿ ಎಂ.ಆರ್. ವಿಜಯ ಕುಮಾರ್ ಅವರು ಕನ್ನಡ ಪ್ರಭಕ್ಕೆ ತಿಳಿಸಿದ್ದಾರೆಂದು ಬಂದಿದೆ.

ಶ್ರೀ ಕೆ. ಹೆಚ್. ಪಾಟೀಲ್.—ಸೆಂಟ್ರಲ್ ಗೌರ್ನಮೆಂಟ್‌ನಲ್ಲಿ ಚೇಂಜ್ ಮಾಡಿದರೆ, ಈ ಸಮಸ್ಯೆ ತಾನೇ ಬಗೆ ಹರಿಯುತ್ತದೆ. ಹೇಗಿದ್ದರೂ ಕೇಂದ್ರದಲ್ಲಿ ನಿಮ್ಮ ಪಕ್ಷದವರೂ ಸಹಕಾರ ಕೊಟ್ಟಿದ್ದಾರೆ.

ಶ್ರೀ ಬಿ ಎಸ್. ಯಡಿಯೂರಪ್ಪ.—ಹಿರಿಯ ಸದಸ್ಯರಾದ ಮಾನ್ಯ ಪಾಟೀಲರು ಈ ಮಾತು ಹೇಳಿದರೆ ನಾನು ಏನು ಹೇಳಲಿ ರಾಜ್ಯದಲ್ಲಿ ರೆವಿನ್ಯೂ ಇಲಾಖೆಗೆ ಸೇರಿದ ಜಮೀನುಗಳನ್ನು ರೆವಿನ್ಯೂ ಇಲಾಖೆಯ ಅಧಿಕಾರಿಗಳು ಸ್ಥಳ ತನಿಖೆ ಮಾಡದೆ ಯೋಗ್ಯವಾದ ಭೂಮಿಯನ್ನು ಅರಣ್ಯ ಇಲಾಖೆಗೆ ವರ್ಗಮಾಡಿದ್ದರು. ಇದಕ್ಕೆ ತಡೆಯಾಜ್ಞೆ ಕೊಟ್ಟಿದ್ದರು. ಇವತ್ತು ಎಲ್ಲಾ ಜಿಲ್ಲಾಧಿಕಾರಿಗಳು ಈ ಬಗ್ಗೆ ಸ್ಥಳ ತನಿಖೆ ಮಾಡದೇ ವರ್ಗಾವಣೆ ಮಾಡಿರುವಂಥ ಸಿ. ಮತ್ತು ಡಿ ವರ್ಗದ ಜಮೀನನ್ನು ವಾಪಸ್ಸು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು. ಕಛೇರಿಯಲ್ಲಿ ಕುಳಿತು ಮಾಡಿರುವಂಥ ಈ ಕೆಲಸದಿಂದ ಕೃಷಿ ಕಾರ್ಮಿಕರು, ಹರಿಜನ ಗಿರಿಜನರು ಬೀದಿ ಪಾಲಾಗುತ್ತಾರೆ. ಬಸವಲಿಂಗಪ್ಪನವರು ತಾವು ಇವತ್ತು ದೈಹಿಕವಾಗಿ ಅಲ್ಲಿ ಕುಳಿತಿದ್ದೀರಿ ಬಡವರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ಕೂಡಲೇ ಇದಕ್ಕೆ ತಡೆಯಾಜ್ಞೆ ಕೊಡಿ. ಇವತ್ತು ಆ ಜಮೀನಿನಲ್ಲಿ ಗುಂಡಿ ತೆಗೆದು ನೀಲಗಿರಿ ಮರಗಳನ್ನು ನೆಡಸುವುದಕ್ಕೆ ಪ್ರಯತ್ನ ಮಾಡುವುದಿಲ್ಲ ಎಂದು ಹೇಳುತ್ತೀರಾ? ವರ್ಲ್ಡ್ ಬ್ಯಾಂಕಿನಿಂದ ಬರತಕ್ಕ ಹಣವನ್ನು ಕಬಳಿಸುವುದಕ್ಕೆ ಈ ಪ್ರಯತ್ನ ಮಾಡಲಾಗಿದೆ. ಯಡಿಯೂರಪ್ಪನವರು ಈ ಮಾತು ಆಡಬೇಕೆಂದು ತಾವು ಬಯಸಿದ್ದೀರಿ. ಈ ರೀತಿಯ ನೂರಾರು ಅರ್ಜಿಗಳು ಇವೆ. ಕಳೆದ ೨೦-೩೦ ವರ್ಷಗಳಿಂದ ಬಗರ್‌ಹುಕ್ಕುಂ ಸಾಗುವಳಿ ಮಾಡುತ್ತಿದ್ದ ಜಮೀನಿನಲ್ಲಿ ಅರಣ್ಯ ಇಲಾಖೆಯವರು ಗಿಡಗಳನ್ನು ಬೆಳೆಸುವುದಕ್ಕೆ ಪ್ರಯತ್ನ ನಡೆಸಿದ್ದಾರೆ. ಸಾಗರ ತಾಲ್ಲೂಕಿನಲ್ಲಿ ಗುಂಡಿ ತೆಗೆದು ಗಿಡ ನಡೆಸುತ್ತಿದ್ದಾರೆ. ಇದನ್ನು ಕೂಡಲೇ ನಿಲ್ಲಿಸುವುದಕ್ಕೆ ಸರ್ಕಾರ ಆಜ್ಞೆ ಹೊರಡಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಜನತಾ ಮತ್ತು ಜನತಾದಳ ಸರ್ಕಾರ ಅಧಿಕಾರದಲ್ಲಿದ್ದಂತ ಸಂದರ್ಭದಲ್ಲಿ ರಾಜ್ಯದಲ್ಲಿ ರಾಜಕೀಯ ಅಸ್ಥಿರತೆ ಮತ್ತು ಜನ ವಿರೋಧಿ ನೀತಿಗಳನ್ನು ಅನುಸರಿಸಿ ಈ ರಾಜ್ಯದ ಜನತೆ ಕಂಗಲಾಗಿದ್ದಾರೆ ಅದಕ್ಕಿಂತ ಹೆಚ್ಚಿಗೆ ಅಧೋಗತಿ ಸ್ಥಿತಿಗಳನ್ನು ರಾಜ್ಯಪಾಲರ ಅಧಿಕಾರದ ಸಂದರ್ಭದಲ್ಲಿ ನಡೆದುದನ್ನು ಕಂಡಿದ್ದೇವೆ. ವಿಧಾನ ಸೌಧದ ಅನೇಕ ಹಿರಿಯ ಅಧಿಕಾರಿಗಳು ರಾಜ್ಯಪಾಲರ ತೊಗಲಕ್ ದರ್ಬಾರ್ ನೋಡಿ ಮಾತನಾಡುವುದಕ್ಕೆ ಸಾಧ್ಯವಾಗದೆ ಮೌನವಾಗಿ ಕುಳಿತಿದ್ದರು. ನಾನು ವಿವರಗಳಿಗೆ ಹೋಗುವುದಿಲ್ಲ ರಾಜ್ಯಪಾಲರು ತಾನು ಮಾಡಿದ ತಪ್ಪನ್ನು ಮನವರಿಕೆ ಮಾಡಿಕೊಂಡಿದ್ದರೆ, ತನಗೆ ತಾನೇ ರಾಜೀನಾಮೆ ಕೊಟ್ಟು ಹೋಗುತ್ತಾರೆಂದು ನಿರೀಕ್ಷೆ ಮಾಡಿದ್ದೆವು.

ಅನೇಕ ಸಂದರ್ಭಗಳಲ್ಲಿ ಇಲ್ಲಿ ಕುಳಿತು ಸಿ. ಒ. ಡಿ. ತನಿಖೆಗೆ ಒತ್ತಾಯ ಮಾಡಿದ್ದೀರಿ. ರಾಜ್ಯಪಾಲರ ಬಗ್ಗೆ ನಾನು ಹೆಚ್ಚು ವಿವರವಾಗಿ ಹೇಳಲಿಕ್ಕೆ ಹೋಗುವುದಿಲ್ಲ. ತಾವು ಸಿ. ಒ. ಡಿ. ತನಿಖೆಯನ್ನು ಮಾಡಿಸಬೇಕು. ರಾಜ್ಯಪಾಲರ ಕಾಲದಲ್ಲಿ ನಡೆದಿರುವಂಥ ಅನೇಕ ಭ್ರಷ್ಟಾಚಾರದ ಬಗ್ಗೆ, ತುಗಲಕ್ ದರ್ಬಾರ್ ಬಗ್ಗೆ ತನಿಖೆಯಾಗಬೇಕು. ನಾನು ಅದಕ್ಕೆ ಬೇಕಾದಂಥ ವಿವರಗಳನ್ನು ಈಗಲೇ ಕೊಡಲಿಕ್ಕೆ ಸಿದ್ಧನಿದ್ದೇನೆ. ಆದ್ದರಿಂದ ತಾವು ಸಿ. ಒ. ಡಿ.ಗೆ ಆಗಲಿ, ಸಿ. ಬಿ. ಐ.ಗೆ ಆಗಲಿ ತನಿಖೆ ಆದೇಶ ನೀಡಬೇಕೆಂದು ಅಧ್ಯಕ್ಷರ ಮುಖಾಂತರ ಅತ್ಯಂತ ವಿನಯದಿಂದ ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಒಂದು ಸಲಹೆಯನ್ನು ಕೊಡಲಿಕ್ಕೆ ಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಬೆಂಗಳೂರು ಮಹಾನಗರ ಸೇರಿ ಇಪ್ಪತ್ತು ಜಿಲ್ಲೆಗಳಿವೆ. ಒಂದೊಂದು ಜಿಲ್ಲೆಗೂ ಒಬ್ಬೊಬ್ಬ ಜಿಲ್ಲಾಧಿಕಾರಿಯವರು ಇದ್ದಾರೆ. ಒಬ್ಬರು ಪೋಲೀಸ್ ಸೂಪರಿಂಡೆಂಟ್ ಆದರೆ ಜಿಲ್ಲಾ ರಕ್ಷಣಾ ಅಧಿಕಾರಿ ಇರುತ್ತಾರೆ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ನಿಮ್ಮ ಸರ್ಕಾರದಲ್ಲಿರತಕ್ಕ ಉನ್ನತ ಅಧಿಕಾರಿಗಳ ಒಂದು ಪಟ್ಟಿಯನ್ನು ಮಾಡಿ, ಯಾರನ್ನು ನಾವು ಪೋಲೀಸ್ ರಕ್ಷಣಾ ಅಧಿಕಾರಿ, ಜಿಲ್ಲಾಧಿಕಾರಿ ಎಂದು ನೇಮಕ ಮಾಡಿದ್ದೇವೆಯೋ ಅವರ ಮನಸ್ಸಿನಲ್ಲಿ ಅನ್ನಿಸಬೇಕು, ನಾನು ಜಿಲ್ಲಾಧಿಕಾರಿಯಾಗಿ ಹೋಗಿದ್ದೇನೆ, ನಾನು ಪೋಲೀಸ್ ಸೂಪರಿಂಟೆಂಡೆಂಟ್ ಅಧಿಕಾರಿಯಾಗಿ ಹೋಗಿದ್ದೇನೆ ಎಂದು ಅವನ ಮನಸ್ಸಿನಲ್ಲಿ ಅನ್ನಿಸಬೇಕು, ನನಗೆ ಅತ್ಯಂತ ಮಹತ್ವವಾದ ಸ್ಥಾನವನ್ನು ಕೊಟ್ಟಿದ್ದಾರೆಂದು ಅನ್ನಿಸಬೇಕು. ನಾವು ಹೇಳಿದ ಕೆಲಸವನ್ನು ಮಾಡಲಿಲ್ಲ ಎಂದು ಯಾರು ಅವರ ಬಗ್ಗೆ ದೂರು ಹೇಳುತ್ತಾರೆ. ಅವರ ಮಾತಿಗೆ ಬೆಲೆಯನ್ನು ಕೊಡದೆ, ಅವರು ಮಾಡಿರತಕ್ಕ ಆರೋಪದ ಬಗ್ಗೆ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ನಮ್ಮ ಕೆಲಸ ಆಗಲಿಲ್ಲ ಎಂದು ಉದ್ದೇಶಪೂರ್ವಕವಾಗಿ ಆರೋಪ ಮಾಡತಕ್ಕವರ ಮಾತಿಗೆ ಬೆಲೆಯನ್ನು ಕೊಡದೆ, ಯೋಗ್ಯ ಅಧಿಕಾರಿಗಳಿಗೆ ರಕ್ಷಣೆ ಕೊಡತಕ್ಕ ವ್ಯವಸ್ಥೆಯನ್ನು ಮಾಡಿ ಆಯಾ ಜಿಲ್ಲಾಧಿಕಾರಿಗಳಿಗೆ ಆಯಾಯ ಜಿಲ್ಲೆಗಳಲ್ಲಿ ಗಟ್ಟಿಮಾಡತಕ್ಕ ಧೈರ್ಯವನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡಿಕೊಂಡು ಹೇಳುತ್ತೇನೆ. ತಾವು ಈ ಕಡೆ ಕುಳಿತಿದ್ದಾರೆ ರೇವಜಿತು ಹಗರಣದ ಬಗ್ಗೆ, ಎನ್. ಆರ್. ಐ ಹಗರಣದ ಬಗ್ಗೆ ಎಲ್ಲಾ ಚರ್ಚೆಗಳಾದವು. ಈ ಸಂದರ್ಭದಲ್ಲಿ ನಾನು ಏನು ಹೇಳುತ್ತೇನೆ ಎಂದರೆ, ರಾಜ್ಯದ ಜನತೆಯ ಹಿತವನ್ನು ಇಟ್ಟುಕೊಂಡು ಅನೇಕ ಜನಪರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವಾಗ ವಿರೋಧಪಕ್ಷದ ನಾಯಕರನ್ನು ಕಾನ್ಫಿಡೆನ್ಸ್‌ಗೆ ತೆಗೆದುಕೊಂಡು ಜನಪರ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದರೆ ಅದರ ಬಾಟ್ಲಿಂಗ್ ಹಗರಣ ಇರಬಹುದು, ಮತ್ತೊಂದು ಹಗರಣ ಇರಬಹುದು. ಅವೊತ್ತು ವಿರೋಧಪಕ್ಷದ ನಾಯಕರ ಮತ್ತು ಮುಖಂಡರ ಅಭಿಪ್ರಾಯಗಳನ್ನು ತೆಗೆದುಕೊಂಡು ಮಾಡಿದ್ದಾರೆ ಆರೋಪಗಳನ್ನು ಮಾಡಲಿಕ್ಕೆ ಸಾಧ್ಯ

೧-೧೫ ಪಿ.ಯಂ.

ಇರುತ್ತಿದೆಯೇನು. ನಾಳೆಯ ದಿವಸ ನಿಮ್ಮ ಸರ್ಕಾರ ಕೂಡ ಪ್ರಮುಖವಾದಂಥ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವಾಗ ವಿರೋಧ ಪಕ್ಷದ ನಾಯಕರ ಮತ್ತು ಮುಖಂಡರ ಅಭಿಪ್ರಾಯಗಳನ್ನು ತೆಗೆದುಕೊಳ್ಳುವಂಥ ಧೈರ್ಯವನ್ನು ಮಾಡುತ್ತೀರಾ. ತಾವು ಏತಕ್ಕೆ ಆ ರೀತಿಯ ಧೈರ್ಯವನ್ನು ಮಾಡುವುದಿಲ್ಲ. ಮೆಡಿಕಲ್ ಕಾಲೇಜಿಗೆ, ಇಂಜಿನಿಯರಿಂಗ್ ಕಾಲೇಜಿಗೆ ಒಳಗೆ ಸೀಟುಗಳನ್ನು ಕೊಟ್ಟು ಒಳಗಿಂದಲೇ ಬರುವ ವ್ಯವಸ್ಥೆ ನೋಡಿಲ್ಲವೇನು ? ಸ್ವಾತಂತ್ರ್ಯ ಬಂದು ನಲವತ್ತೆರಡು ವರ್ಷಗಳಲ್ಲಿ ಮೆಡಿಕಲ್ ಸೀಟುಗಳು ಜಾಸ್ತಿಯಾದವು ಇಂಜಿನಿಯರಿಂಗ್ ಸೀಟುಗಳು ಜಾಸ್ತಿಯಾದವು ಇವೊತ್ತು ಬಡ ರೈತರು ಡಾಕ್ಟರುಗಳು, ಇಂಜಿನಿಯರ್‌ಗಳು ಆಗಬೇಕೆಂದೇನು. ನಾಲ್ಕೈದು ಲಕ್ಷ ರೂಪಾಯಿ ಶುಲ್ಕ ಕೊಡತಕ್ಕದ್ದು, ಮಾಮೂಲು ಕೊಡತಕ್ಕ ವ್ಯವಸ್ಥೆ ನಡೆದಿಲ್ಲವೇನು. ಇವೆಲ್ಲಾ ಜನಪರ ಕಾರ್ಯಕ್ರಮಗಳೇನು? ಮುಂದೆ ಈ ಸರ್ಕಾರ ಯಾವುದೇ ಟೀಕೆಗೆ ಒಳಗಾಗಬಾರದು. ಎಂಬ ಅಪೇಕ್ಷೆ ಇದ್ದರೆ ಆ ರೀತಿಯ ಪ್ರಮುಖವಾದಂಥ ತೀರ್ಮಾನವನ್ನು ತೆಗೆದುಕೊಳ್ಳುವಂಥ ಸಂದರ್ಭದಲ್ಲಿ ನಾವು ಹೇಳಿದ್ದೆಲ್ಲಾ ಮಾಡಿ ಎಂದು ಹೇಳುವುದಿಲ್ಲ. ಈಗ ತಾವು ಈ ಹೊಸ ವ್ಯವಸ್ಥೆ ಮಾಡಲಿಕ್ಕೆ ಧೈರ್ಯ ಇದೆ ಏನು ? ತಾವು ಹೊಸ ವ್ಯವಸ್ಥೆ ಮಾಡಲಿಕ್ಕೆ ಧೈರ್ಯ ಮಾಡಿ ನಿಮ್ಮ ಸರ್ಕಾರ ಉಳಿಯಲಿ ಅಧಿಕಾರದಲ್ಲಿ ಇಂತಹವರೇ ಇರಬೇಕು ಎನ್ನುವುದು ಮುಖ್ಯ ಅಲ್ಲ. ನಾವು ಬದುಕಿರುವವರೆಗೂ ವಿರೋಧಪಕ್ಷದಲ್ಲಿಯೇ ಕುಳಿತು ಕೆಲಸ ಮಾಡಲಿಕ್ಕೆ ಅಪೇಕ್ಷೆಪಡುತ್ತೇನೆ. ಸ್ವಾತಂತ್ರ್ಯ ಬಂದು ನಲವತ್ತೂರು ವರ್ಷಗಳ ನಂತರವೂ ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಹೊಸ ಬದಲಾವಣೆಯನ್ನು ತರುವಂಥ ಪ್ರಾಮಾಣಿಕ ಪ್ರಯತ್ನ ಆಗದೇ ಇರುವುದರಿಂದ ಅದನ್ನು ಮಾಡಬೇಕೆಂದು ನಾನು ಸಲಹೆ ಕೊಡುತ್ತಿದ್ದೇನೆಯೇ ಹೊರತು ಬೇರೆ ಯಾವುದೋ ಭಿನ್ನಾಭಿಪ್ರಾಯದಿಂದ, ಸ್ವಾರ್ಥಕ್ಕೋಸ್ಕರ ಈ ಮಾತನ್ನು

ಹೇಳುತ್ತಿಲ್ಲ ಎನ್ನುವ ಮಾತನ್ನು ಈ ಸರ್ಕಾರಕ್ಕೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನಾವೆಲ್ಲಾ ಈ ಕಡೆಯಲ್ಲಿ ಕುಳಿತಿದ್ದೇವೆ. ವಿಧಾನ ಸಭೆ ಸದಸ್ಯರಾಗಿ ತನ್ನ ಕ್ಷೇತ್ರದಲ್ಲಿ ಏನು ಕೆಲಸ ಆಗಬೇಕೆಂದ, ಅಪೇಕ್ಷೆ ಇದೆ, ಅದು ರಸ್ತೆ ಕೆಲಸ ಆಗಬಹುದು ಅಥವಾ ಕೆರೆಕಟ್ಟೆ ನಿರ್ಮಾಣದ ಕೆಲಸ ಆಗಬಹುದು: ನಾವು ಹೇಳಿದಂತೆ ಮಾಡಿದ್ದು ಏನಾದರೂ ಇದೆಯೇ ಸ್ವಾಮಿ ? ಕಳೆದ ಐದು ವರ್ಷಗಳಲ್ಲಿ ಅಧಿಕಾರ ದಲ್ಲಿದ್ದವರಿಗೆ ನಾವು ಬರೆದು ಕೊಟ್ಟಂಥ ಕೆಲಸಗಳು ಆಗಿವೆ ಎಂದು ನಾವು ನೆಮ್ಮದಿಯಿಂದ ನಮ್ಮ ಕ್ಷೇತ್ರಗಳಿಗೆ ಹೋಗುವಂಥದ್ದು ಏನಾದರೂ ಆಯಿತೇ ಸ್ವಾಮಿ ಆಗಲಿಲ್ಲ. ನಾನು ನಿಮ್ಮ ಸರ್ಕಾರ ದಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ: ಒಬ್ಬ ಚುನಾಯಿತ ಪ್ರತಿನಿಧಿಯಾಗಿ ತನ್ನ ಕ್ಷೇತ್ರದ ಜನಗಳ ಸಮಸ್ಯೆ ಬಗೆಹರಿಸುವ ದೃಷ್ಟಿಯಿಂದ ಸುಮಾರು ಐವತ್ತು ಲಕ್ಷ ರೂಪಾಯಿಗಳ ಮೂರು ನಾಲ್ಕು ಕೆಲಸಗಳು ಅವು ರಸ್ತೆ ಕೆಲಸಗಳಾಗಬಹುದು, ನೀರಾವರಿ ಯೋಜನೆಗೆ ಸಂಬಂಧಪಟ್ಟ ಕೆಲಸಗಳು ಆಗ ಬಹುದು, ಆ ಶಾಸಕ ಜನಗಳ ಹಿತದೃಷ್ಟಿಯಿಂದ ಏನು ಹೇಳುತ್ತಾನೆ ಆ ಪಕ್ಷ ಈ ಪಕ್ಷ ಎನ್ನುವ ಬೇದ ಭಾವ ತೋರದು ಆ ಕ್ಷೇತ್ರದ ಹಿತದೃಷ್ಟಿಯಿಂದ ಆ ಶಾಸಕನ ಮಾತಿಗೆ ಬೆಲೆ ಕೊಡುವಂಥ ಧೈರ್ಯವನ್ನು ನಿಮ್ಮ ಸರ್ಕಾರ ಮಾಡುತ್ತದೆಯೆ ತಿಳಿಸಬೇಕು. ಈರೀತಿಯ ಒಂದು ಕಾರ್ಯಕ್ರಮವನ್ನು ರೂಪಿಸು ತ್ತೀರಾ ? ಮಂಡಲ ಪಂಚಾಯತ್, ಜಿಲ್ಲಾ ಪರಿಷತ್ತು ಅಂತ ಮಾಡಿ ಅಧಿಕಾರ ವಿಕೇಂದ್ರಿಕರಣ ಮಾಡುತ್ತೇವೆಂದು ಹೇಳುತ್ತೀರಿ. ನಿಮ್ಮದೇ ತಲೆ, ನಿಮ್ಮದೇ ಮೊಂಡು ಕತ್ತಿ ಹೇಗೆ ಬೇಕೋ ಹಾಗೆ ಬೋಳಿಸಿಕೊಳ್ಳಿ ಎಂದು ಹೇಳುತ್ತಾರೆ ಇವರು ಎಂದು ನಾನು ಚುನಾವಣೆಯ ಸಂದರ್ಭದಲ್ಲಿ ಹೇಳಿದ್ದೆ. ನಾವು ಶಾಸಕರು ಹಲವಾರು ಪಂಚಾಯಿತಿಗಳ ಅಧ್ಯಕ್ಷರೂ, ನಾವೂ ಸಭೆ ಸೇರಿದಾಗ ನಮ್ಮ ಪರಿಸ್ಥಿತಿ ಯಾವ ಮಟ್ಟದಲ್ಲಿರುತ್ತದೆ ಎಂಬುದನ್ನು ಹೇಳಬೇಕಾದರೆ ನಾಚಿಕೆಯಾಗುತ್ತದೆ. ನಿಜವಾಗಿ ಹೇಳು ವುದಾದರೆ ನಮಗೆ ಯೋಚನೆ ಮಾಡತಕ್ಕ ಶಕ್ತಿ ಇದೆಯೇ ಎಂದು ಅನುಮಾನ ಬರುತ್ತದೆ. ಶಾಸಕರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡಾಗ ನಮಗೆ ಸರಿ ಎಂದು ಅನಿಸಿದ್ದನ್ನು ಆ ಮಂಡಲ ಪಂಚಾಯಿತಿಯ ಅಧ್ಯಕ್ಷರುಗಳು ಕುಳಿತಂಥ ಸಭೆಯಲ್ಲಿ ನಾವು ಹೇಳಿ ಮಾಡಿಸುವುದಕ್ಕೆ ಆಗುತ್ತದೆಯೇ ಎಂಬುದನ್ನು ಈ ಹಿಂದೆ ಇದ್ದಂಥ ನಮ್ಮ ಜನ ಅಂದರೆ ಅಧಿಕಾರವನ್ನು ವಿಕೇಂದ್ರಿಕರಣ ಮಾಡಿದವರು ಯೋಚನೆ ಯನ್ನೇನಾದರೂ ಮಾಡಿದರೆ ? ಶಾಸಕರು ಎಂದರೆ ಬೆಲೆ ಇಲ್ಲದಂಥ ವ್ಯಕ್ತಿ ಎನ್ನತಕ್ಕ ರೀತಿಯಲ್ಲಿ ಮಾಡಿದ್ದಾರೆ. ಒಂದು ಜನತಾ ಮನೆಯನ್ನಾಗಲಿ, ಒಂದು ಸೈಟನ್ನಾಗಲಿ, ಅಥವಾ ಒಂದು ಬೀದಿ ದೀಪ ಹಾಕಿಸಬೇಕಾದರೂ ಶಾಸಕರಾದ ನಾವು ಮಂಡಲ ಪಂಚಾಯಿತಿಯ ಅಧ್ಯಕ್ಷರ ಹತ್ತಿರ ಹೋಗ ಬೇಕಾದ ಪರಿಸ್ಥಿತಿಗೆ ತಂದಿಟ್ಟರು. ಅಧಿಕಾರ ವಿಕೇಂದ್ರಿಕರಣವಾಗಬಾರದೆಂದು ನಾನು ಹೇಳುವುದಿಲ್ಲ. ಅಲ್ಲಿನ ಸದಸ್ಯರಿಗೆ ಅಧಿಕಾರವನ್ನು ಕೊಡಬೇಡಿ ಎಂದು ನಾನು ಹೇಳುವುದಿಲ್ಲ. ಆದರೆ ಶಾಸಕರಾದ ನಾವು ಮಂಡಲ ಪಂಚಾಯಿತಿಯ ಸಭೆಯಲ್ಲಿ ಕುಳಿತಾಗ ಕಾನೂನು ಬದ್ಧವಾಗಿ ಯಾವುದೇ ಅಧಿಕಾರ ಇಲ್ಲದಿದ್ದರೂ ಕೂಡ ನಾಮಕವಸ್ತೆ ಪಟೇಲನನ್ನಾಗಿ ಮಾಡತಕ್ಕ ಪದ್ಧತಿ ಏನಿದೆ ಅದನ್ನು ನೀವು ಕಿತ್ತುಹಾಕಿ ಅಲ್ಲಿ ನಮಗೆ ಅಧ್ಯಕ್ಷಸ್ಥಾನ ಬೇಡ ಎನ್ನತಕ್ಕ ಮಾತನ್ನು ಅತ್ಯಂತ ವಿನಯದಿಂದ ಸರ್ಕಾರ ದಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಸನ್ಮಾನ್ಯ ಅಧ್ಯಕ್ಷರೆ, ಈ ಹಿಂದೆ ನಮ್ಮ ರಾಜ್ಯದ ರೈತರ ಹಿತದೃಷ್ಟಿಯಿಂದ ನೀರಾವರಿ ದರವನ್ನು ಏರಿಸಿದಾಗ ನಾನು ಆಕಡೆ ಕುಳಿತಿದ್ದಾಗ ಅದನ್ನು ಪ್ರತಿಭಟನೆ ಮಾಡಿದ್ದೆ. ನಮ್ಮ ರಾಜ್ಯದ ರೈತ ಏನು ಭತ್ತ ರಾಗಿ, ಜೋಳವನ್ನು ಬೆಳೆಯುತ್ತಾನೆ ಅದಕ್ಕೆ ನೀರಾವರಿ ಅನುಕೂಲವನ್ನು ನೀವು ಮಾಡಿ ಕೊಡುತ್ತೀರಿ. ಈ ನೀರಾವರಿ ಬೆಳೆಗೆ ಅಂದರೆ ಭತ್ತಕ್ಕೆ ೩೫ ರೂಪಾಯಿ. ಇದ್ದುದನ್ನು ೭೫ ರೂಪಾ ಯಿಗೆ ಏರಿಸಿದಿರಿ. ಲಿಫ್ಟ್ ಇರಿಗೇಷನ್ ಆದರೆ ೧೫೦ ರೂಪಾಯಿ ಎಂದು ಮಾಡಿದಿರಿ ಕಬ್ಬಿಗೆ ಒಂದು ಎಕರೆಗೆ ೧೫೦ರೂ. ಇದ್ದುದನ್ನು ೪೦೦ರೂ.ಗೆ ಏರಿಸಿದಿರಿ. ಲಿಫ್ಟ್ ಇರಿಗೇಷನ್ ಆದರೆ ೮೦೦ ರೂ. ಎಂದು ಮಾಡಿದಿರಿ. ಆಗ ನಾವು ಹೇಳುವುದು, ಈ ನೀರಾವರಿ ದರವನ್ನು ಏರಿಸುವುದು ಸರಿಯಲ್ಲ, ಇದನ್ನು ಕೈಬಿಡಬೇಕೆಂದು ಹೇಳಿದಾಗ ಅಲ್ಲಿ ಕುಳಿತಿದ್ದ ಹಿಂದಿನ ಸರ್ಕಾರದ ಪ್ರತಿನಿಧಿಗಳು ಈ ಕಾನೂನನ್ನು ನಾವು ಜಾರಿಗೆ ತಂದಿಲ್ಲ, ಅದನ್ನು ಚರ್ಚೆ ಮಾಡುವುದಕ್ಕೆ ನಾವು ಅವಕಾಶವನ್ನು ಕೊಡುತ್ತೇವೆ ಎಂದು ಹೇಳಿದರು. ಆದರೆ ೧-೧-೮೫ ರಲ್ಲಿ ಈ ಕಾನೂನು ಜಾರಿಗೆ ಬಂದಿದೆ. ನಾಳೆ ಡಿಸೆಂಬರ್ ನಿಂದ ರೈತ ನನ್ನು ಸುಲಿಗೆ ಮಾಡತಕ್ಕ ಕೆಲಸ ಪ್ರಾರಂಭವಾಗುತ್ತದೆ. ಒಂದು ಟನ್ ಕಬ್ಬಿನಿಂದ ೧ ಕ್ವಿಂಟಾಲ್ ಸಕ್ಕರೆ ಆಗುತ್ತದೆ. ೬೦೦ ರೂಪಾಯಿಯಂತೆ ಒಂದು ಕ್ವಿಂಟಾಲ್ ಸಕ್ಕರೆಯನ್ನು ಮಾರಾಟ ಮಾಡುತ್ತಿದ್ದುದು ಇವತ್ತು ೭೦೦೦ ಅಥವಾ ೧೧೦೦ ರೂಪಾಯಿ ಆಯಿತು. ಅಂದರೆ ಈ ೫೦೦ ರೂಪಾಯಿ ಯಾರಿಗೆ ಸೇರಿತು ಎಂಬುದನ್ನು ಹೇಳಬೇಕು. ತಾವು ರೈತರನ್ನು ಶೋಷಣೆ ಮಾಡತಕ್ಕ ಪ್ರಯತ್ನವನ್ನು ಮಾಡಬಾರದು. ನಿಮ್ಮ ಸರ್ಕಾರವೆ ಅಧಿಕಾರದಲ್ಲಿರಲಿ, ಅಥವಾ ಬೇರೆ ಸರ್ಕಾರವೇ ಅಧಿಕಾರದಲ್ಲಿರಲಿ ರೈತ ರಾಗಿ, ಜೋಳ, ಭತ್ತಗಳನ್ನು ಬೆಳೆಯುವುದು ಕೇವಲ ತನ್ನ ಹೊಟ್ಟೆಗೋಸ್ಕರವೇನೂ ಅಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಇದರ ಬಗ್ಗೆ ಇನ್ನೂ ಅಂತಿಮ ತೀರ್ಮಾನವನ್ನು ತೆಗೆದುಕೊಂಡಿಲ್ಲ. ಇದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಮುನ್ನ ಎಲ್ಲಾ ಶಾಸಕರ ಜೊತೆ ಸಮಾಲೋಚನೆ ಮಾಡಿ ಅವರ ಅಭಿಪ್ರಾಯಗಳನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಹಾಗಾದರೆ ಈ ಆದೇಶವನ್ನು ಇನ್ನೂ ಎಫೆಕ್ಟ್‌ಗೆ ಕೊಟ್ಟಿಲ್ಲವೇ ಸ್ವಾಮಿ ? ಈ ಆರ್ಡರ್ ನಂಬರ್ ಪಿ. ಡಬ್ಲ್ಯು. ಡಿ, ೮೯ ಎಂ. ಆರ್. ಎಸ್. ೮೫, ೨. ೩೧ನೇ ಅಕ್ಟೋಬರ್ ೮೮. ಇಲ್ಲಿ ಈ ಒಂದು ನೀರಾವರಿ ದವರನ್ನು ಏರಿಸಿ ತಾವು ಈ ಸರ್ಕಾರೀ ಆಜ್ಞೆಯಲ್ಲಿ ಹೇಳಿದ್ದೀರಿ. The revised water rates will come into effect with effect from 1st January 1989 ಆದರೆ ತಾವು ಹೇಳಿದಂತೆಯೇ ಹಿಂದಿನ ಸರ್ಕಾರ ಇದ್ದಾಗ ಈ ಭರವಸೆಯನ್ನು ನಮಗೆ ಕೊಟ್ಟಿದ್ದಾರೆ. ಇದನ್ನು ಎಫೆಕ್ಟ್‌ಗೆ ಕೊಟ್ಟಿಲ್ಲ. ಇದರ ಬಗ್ಗೆ ಎಲ್ಲರ ಜೊತೆ ಚರ್ಚೆ ಮಾಡಿ ಅವರ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ನಾನು ತಮ್ಮಲ್ಲಿ ಪ್ರಾರ್ಥಿಸುತ್ತೇನೆ, ತಾವು ಈ ಆರ್ಡರನ್ನು ಎಫೆಕ್ಟ್‌ಗೆ ಕೊಟ್ಟಿಲ್ಲದಿದ್ದರ ತಡೆಯಾಜ್ಞೆಯನ್ನಾದರೂ ಕೊಡಿ.

ನಾನು ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುವುದು ದಯವಿಟ್ಟು ತಾವು ಈ ಆಜ್ಞೆಯನ್ನು ಎಫೆಕ್ಟ್‌ಗೆ ಕೊಡದಿದ್ದರೆ ತಡೆ ಆಜ್ಞೆಯನ್ನು ಕೊಟ್ಟು ಹಿಂದಿನಿಂದ ನೀರಾವರಿ ದರವನ್ನು ವಸೂಲು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ತಡೆ ಆಜ್ಞೆ ಕೊಡುವುದು ಪ್ರಶ್ನೆಯಲ್ಲ. ಅದು ಡ್ರಾಫ್ಟ್ ಗೌವರ್ನ್‌ಮೆಂಟ್ ಆರ್ಡರ್ ಮಾಡಿರುವುದು. ಅದು ಅಬ್ಜಕ್ಷನ್ ಕಾಲ್ ಫರ್ ಮಾಡುವ ಸಲುವಾಗಿ ಈಗಾಗಲೇ ಅಬ್ಜಕ್ಷನ್ಸ್ ಬಂದಿವೆ. ನಾವು ಅದನ್ನು ಪುರಸ್ಕರಿಸಿಲ್ಲವೆನ್ನುವ ಮಾತನ್ನು ಸ್ಪಷ್ಟಪಡಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನೀರಾವರಿ ಮಂತ್ರಿಗಳಾಗಿ ಯಾರು ಈ ಕುರ್ಚಿಯಲ್ಲಿ ಹಿಂದೆ ಕುಳಿತು ರೈತರ ಹಿತವನ್ನು ಮರೆತು ನೀರಾವರಿ ದರವನ್ನು ಜಾಸ್ತಿ ಮಾಡುವಂಥ ಧೈರ್ಯ ಮಾಡಿದರೋ ಅದೇ ಜಾಗದಲ್ಲಿ ದೈಹಿಕವಾಗಿ ಕುಳಿತುಕೊಳ್ಳತಕ್ಕಂಥ ಅವಕಾಶ ಭಗವಂತನು ತಮಗೆ ಕೊಟ್ಟಿದ್ದಾನೆ. ಆದ್ದರಿಂದ ರೈತರ ಪರವಾಗಿ ತಮ್ಮಲ್ಲಿ ಒಂದೇ ಒಂದು ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ ಡ್ರಾಫ್ಟ್ ನೀರಾವರಿ ದರವನ್ನು ಜಾಸ್ತಿ ಮಾಡುವುದಕ್ಕೆ ಡ್ರಾಫ್ಟ್ ರೂಲ್ಸ್ ಏನು ಮಾಡಿದ್ದೀರಿ ಅದನ್ನು ಹರಿದುಹಾಕಿ ಬಿಡಿ, ಸುಟ್ಟುಹಾಕಿಬಿಡಿ ಏತಕ್ಕೆಂದರೆ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಆಗುವುದೇ ಇಲ್ಲ. ತಾವು ನೀರನ್ನು ಕೊಡುವುದು ರೈತರಿಗೆ ಯಾರಿಗೂ ಉದ್ಧಾರ ಮಾಡುವುದಕ್ಕೋಸ್ಕರವಲ್ಲ. ರೈತನ ಹೊಲ ಅದು ಒಂದು ಕಾರ್ಖಾನೆ ಇದ್ದಂತೆ ಅಲ್ಲಿ ಬೆಳೆಯುವಂಥ ಬತ್ತ, ಜೋಳ ದೇಶದ ಜನರಿಗೆ ಅನ್ನ ಕೊಡುವುದಕ್ಕೋಸ್ಕರವಾಗಿ ಬೆಳೆಯುವುದು, ಅದನ್ನು ದಯವಿಟ್ಟು ಅರ್ಥಮಾಡಿಕೊಳ್ಳಿ. ದಯವಿಟ್ಟು ರೈತನ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಹೇಳಿ. ತಡೆ ಆಜ್ಞೆಯನ್ನು ಕೊಡತಕ್ಕಂಥ ಪ್ರಶ್ನೆಯಲ್ಲ. ಹಿಂದಿನಿಂದ ನೀರಾವರಿ ದರ ಏನು ಇದೆಯೋ ಅದನ್ನು ಮುಂದುವರಿಸಬೇಕೆಂದು ಅತ್ಯಂತ ವಿನಯದಿಂದ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಹೆಚ್ಚಿನ ಸಮಯವಿಲ್ಲದ ಕಾರಣ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಚುನಾವಣೆ ೨೪-೧೧-೮೯ರಂದು ಆಯಿತು ೨೬-೧೧-೮೯ರಂದು ಫಲಿತಾಂಶ ಬರತಕ್ಕಂಥ ಸಂದರ್ಭದಲ್ಲಿ ಈ ರಾಜ್ಯದಲ್ಲಿ ಅನೇಕ ಕಡೆ ಗೂಂಡಾಗಳಿಂದ ಹಲ್ಲೆಗಳು ಪ್ರಾರಂಭವಾದವು. ಶಿಕಾರಿಪುರ ತಾಲ್ಲೂಕಿನಲ್ಲಿ ಬಂಡಾಯ ಕಾಂಗ್ರೆಸ್‌ನ ಒಬ್ಬ ಅಭ್ಯರ್ಥಿ ನನ್ನ ವಿರುದ್ಧ ಸ್ಪರ್ಧೆಮಾಡಿದ್ದ. ೨೬ನೇ ತಾರೀಖು ಬೆಳಗಿನಜಾವ ರಿಸಲ್ಟ್ ಬರುವ ಹೊತ್ತಿಗೆ ಬೇಗೂರು ಶಿಕಾರಿಪುರ ತಾಲ್ಲೂಕಿನ ಒಂದು ಗ್ರಾಮಕ್ಕೆ ಹೋಗಿ ಆ ಬಂಡಾಯ ಕಾಂಗ್ರೆಸ್‌ನ ಅಭ್ಯರ್ಥಿ ಇನ್ನಿತರ ಸಹಾಯದಿಂದ ಬಿ.ಜೆ.ಪಿ.ಯ ೭-೮ ಜನ ಕಾರ್ಯಕರ್ತರಿಗೆ ತಲೆಹೊಡೆದು ಕೈಕಾಲು ಮುರಿದಿರುತ್ತಾರೆ. ಬೆಳಗಿನ ಜಾವ ನಾನು ರಿಸಲ್ಟ್ ತಿಳಿದುಕೊಂಡು ಮನೆಗೆ ಹೋಗುವುದರೊಳಗೆ ಗಾಡಿ ಬಂದು ನಿಂತಿತ್ತು. ಗಾಡಿಯಲ್ಲಿ ರೈತರು ಮಲಗಿದ್ದರು ಕಾಲು ಮುರಿದುಕೊಂಡಿರುವಂಥವರನ್ನು ನೋಡಿ ಸ್ಟೇಷನ್‌ಗೆ ಕರೆದುಕೊಂಡು ಹೋದೆ, ಅಲ್ಲಿಂದ ಆಸ್ಪತ್ರೆಗೆ ಅಡ್ಮಿಟ್ ಮಾಡುವಂಥ ಪ್ರಯತ್ನ ಮಾಡಿದೆ. ಆ ಸಮಯದಲ್ಲಿ ಅದೇ ಬೇಗೂರು ಮ ಸಿ ಎಲ್ಲಮ್ಮನ ಮೊದಲನೇ ಮಗ ತಲೆ ಹೊಡೆಸಿಕೊಂಡು ಆಸ್ಪತ್ರೆಯಲ್ಲಿ ಮಲಗಿದ್ದ. ಇನ್ನೊಬ್ಬರಿಗೆ ತುಂಬಾ ಹೊಡೆತ ಬಿದ್ದಿತ್ತು. ೨೬ನೇ ತಾರೀಖು ೨೭ನೇ ತಾರೀಖು ಅಲ್ಲಿದ್ದ ಸಬ್‌ಇನ್‌ಸ್ಪೆಕ್ಟರ್ ಮಹಜರ್ ಮಾಡಿಕೊಂಡು ಬಂದರು. ಎಲ್ಲಮ್ಮ ಹನುಮಂತ ಎನ್ನುವಂಥವರು ಅಲ್ಲಿ ವರ ಕೊಟ್ಟು ಅವನ ಇನ್ನೊಬ್ಬ ಮಗನಿಗೆ ಏಟು ಬಿದ್ದಿದ್ದರೂ ಆಸ್ಪತ್ರೆಗೆ ಅಡ್ಮಿಟ್ ಆಗಿರಲಿಲ್ಲ. ೩-೧೨-೮೯ರಂದು ಬೆಳಗಿನಜಾವ ಒಹೆತದಿಂದ ಏಟುಬಿದ್ದಂಥ ಅಣ್ಣಪ್ಪ ಎಂಬುವವನು ಸತ್ತೇ ಹೋದ. ಪೋಲೀಸ್

ಅಧಿಕಾರಿಗಳಿಗೆ ನಾನು ಅವನಿಗೆ ಯಾವರೀತಿ ಏಟು ಬಿದ್ದು ಸತ್ತುಹೋಗಿದ್ದಾನೆ ಅದರ ಬಗ್ಗೆ ತನಿಖೆಯಾಗಬೇಕು, ಮರಣೋತ್ತರ ಪರೀಕ್ಷೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿದರೆ ಅವನು ಸತ್ತ ತಕ್ಷಣ ಅವನನ್ನು ಕೊಲೆ ಮಾಡಿದಂಥ ವ್ಯಕ್ತಿಗಳ ಬಗ್ಗೆ ಕ್ರಮ ತೆಗೆದುಕೊಳ್ಳಲಿಲ್ಲ. ಸಂಶಯಾಸ್ಪದ ಸಾವೆಂದು ರೆಕಮೆಂಡ್ ಮಾಡಿ ಎಫ್.ಎ.ಆರ್. ಕಳುಹಿಸಲಿಲ್ಲ. ಕೊಲೆಯ ವಿಷಯ ಗೊತ್ತಾಗಿ ಹೇಳಿದ ಮೇಲೆ ನಾವು ಬಲವಂತ ಮಾಡಿದ ಮೇಲೆ ಉನ್ನತ ಅಧಿಕಾರಿಗಳ ಜೊತೆಯಲ್ಲಿ ಶಾಮೀಲಾಗಿ ಅಥವಾ ಮುಚ್ಚುಹಾಕುವಂಥ ಪ್ರಯತ್ನ ಮಾಡಿ ಆ ಶವಪರೀಕ್ಷೆ ಮತ್ತೊಮ್ಮೆ ಆಗುವಂತೆ ಅಸ್ಸಿಸ್ಟೆಂಟ್ ಕಮೀಷನರರು ಗಮನ ಕೊಟ್ಟರು. ಈ ರೀತಿ ಬುಕ್ ಮಾಡುವಂಥ ಪ್ರಯತ್ನ ನಡೆಯುತ್ತಿದೆ, ನಾನು ಏತಕ್ಕೆ ಉದಾಹರಣೆಯನ್ನು ಕೊಡುತ್ತಿದ್ದೇನೆಂದರೆ ಯಾವರೀತಿ ಗೂಂಡಾಗಿರಿ ನಡೆಯುತ್ತಿದೆ. ಪೋಲೀಸ್‌ನವರು ಯಾವರೀತಿ ಶಾಮೀಲಾಗಿದ್ದಾರೆಂದು ನಿಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ತಿಳಿಸಬಯಸುತ್ತೇನೆ. ಸ್ವಾಮಿ ಇದರ ಸತ್ಯಾಸತ್ಯತೆ ತೀರ್ಮಾನವಾಗಬೇಕು ತಾವು ಧೈರ್ಯ ಮಾಡಬೇಕು. ಆ ಬಗ್ಗೆ ಸಿ.ಓ.ಡಿ. ತನಿಖೆಗೆ ಆಜ್ಞೆ ಮಾಡಬೇಕು. ಯಾರು ಸತ್ತಿದ್ದಾರೋ, ಕೊಲೆಯಾಗಿದೆಯೋ ಅವರಿಗೆ ೨೫ ಸಾವಿರ ರೂಪಾಯಿಗಳು ಪರಿಹಾರವನ್ನು ಕೊಡುವಂಥ ಪರಿಪಾಠ ಇದೆ. ಅದರಂತೆ ತಕ್ಷಣ ಪರಿಹಾರದ ಘೋಷಣೆಯಾಗಬೇಕು. ಉಳಿದಂಥ ಗಾಯಾಳುಗಳಿಗೆ ಏನು ಪರಿಹಾರವನ್ನು ಕೊಡುವುದು ಇದೆಯೋ ಅದನ್ನು ತಾವು ಕೊಡಬೇಕೆಂದು ಹೇಳಿ ವಿನಂತಿ ಮಾಡಿಕೊಳ್ಳುತ್ತೇನೆ. ಪೋಲೀಸ್ ಅಧಿಕಾರಿಗಳು, ಉನ್ನತ ಅಧಿಕಾರಿಗಳು ಇಲ್ಲಿ ಇರಬಹುದೆಂದು ನಾನು ತಿಳಿದುಕೊಂಡಿರುತ್ತೇನೆ. ಪೋಲೀಸ್ ಅಧಿಕಾರಿಗಳು ಯಾವ ಮಟ್ಟಕ್ಕೆ ಬಂದಿದ್ದಾರೆ ಎಂದರೆ ಸ್ವಾಮಿ ಶಿಕಾರಿಪುರ ತಾಲ್ಲೂಕಿನಲ್ಲಿ ೧೬–೧೨–೮೫ರಂದು ಮಳ್ಳೇನಹಳ್ಳಿ ಎಂಬ ಗ್ರಾಮದಲ್ಲಿ ನಾನು ಒಬ್ಬ ಶಾಸಕನಾದ್ದರಿಂದ ನನ್ನನ್ನು ಮತ್ತು ಈಶ್ವರಪ್ಪ ಎಂಬುವವರಿಗೆ ಪಕ್ಕದ ತಾಲ್ಲೂಕು ಬನ್ನಿಕೋಡಿನಲ್ಲಿ ಪೋಲೀಸ್ ಅನುಮತಿಯನ್ನು ತೆಗೆದುಕೊಂಡು ಸನ್ಮಾನ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರು. ಆ ದಿವಸ ಒಬ್ಬ ಸಬ್‌ಇನ್‌ಸ್ಪೆಕ್ಟರ್ ಶಿವಕುಮಾರ್ ಸಿ.ಎಸ್.ಐ. ಮತ್ತು ನಗರದ ಮಹದೇವಪ್ಪ ಎನ್ನತಕ್ಕಂಥ ಬಂಡಾಯ ಅಭ್ಯರ್ಥಿಯಾಗಿ ನಿಂತಿದ್ದ ಇವರಿಬ್ಬರೂ ಈ ಕಾರ್ಯಕ್ರಮದ ಉದ್ಘಾಟನೆಯನ್ನು ಶಿವಕುಮಾರ್ ಸಿ.ಎಸ್.ಐ. ಅವರು ನೇರವೇರಿಸಿ ಕೊಡುತ್ತಾರೆಂದು, ನಗರದ ಮಹದೇವಪ್ಪ ಬಹುಮಾನ ವಿತರಣೆ ಮಾಡುತ್ತಾರೆಂದು ಹೇಳಿ ೧೬ನೇ ತಾರೀಖು ಸನ್ಮಾನ ಕಾರ್ಯಕ್ರಮವಿತ್ತು. ಮಳ್ಳೇನಹಳ್ಳಿಯಲ್ಲಿ ಅದೇದಿನ ಸಬ್‌ಇನ್‌ಸ್ಪೆಕ್ಟರ್ ಕರಪತ್ರವನ್ನು ಮುದ್ರಿಸಿ ಅವನು ಆ ಕಾರ್ಯಕ್ರಮಕ್ಕೆ ಹೋಗುತ್ತಾನೆ. ರಾಜ್ಯದಲ್ಲಿ ಚುನಾವಣೆ ನಡೆದು ಫಲಿತಾಂಶ ಬಂದಂತಹ ಸಂದರ್ಭದಲ್ಲಿ ಸನ್ಮಾನಕ್ಕೋಸ್ಕರ ಪತ್ರವನ್ನು ಕಳುಹಿಸುತ್ತಾರೆ. ಊರಿನಲ್ಲಿ ಗಲಾಟೆ ಮಾಡಬೇಕೆಂದು ವ್ಯವಸ್ಥಿತವಾಗಿ ಕೆಲಸ ಮಾಡುವುದಾದರೆ ನಾನು ಆ ಕಾರ್ಯಕ್ರಮದಲ್ಲಿ ಭಾಗವಹಿಸುವುದಿಲ್ಲ, ಊರಿನಲ್ಲಿ ಶಾಂತಿ ನೆಲಸುವುದು ಮುಖ್ಯ, ನಿಮ್ಮ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲಿ ಎಂದು ನಾನು ಮಳ್ಳೇನಹಳಿಯಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮಕ್ಕೆ ಹೋಗಲಿಲ್ಲ. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ್ದರೂ ಆ ಸಬ್ ಇನ್ಸ್‌ಪೆಕ್ಟರ್ ೫೦ ೬೦ ಜನರನ್ನು ಕರೆದುಕೊಂಡು ಬಂದು ಕಾರ್ಯಕ್ರಮವನ್ನು ಮಾಡುವುದರಲ್ಲಿ ಯಶಸ್ವಿಯಾದ. ನಿಮ್ಮ ಯಡಿಯೂರಪ್ಪ ಕಾರ್ಯಕ್ರಮಕ್ಕೆ ಹೋಗುವುದಕ್ಕೆ ಅವಕಾಶ ಸಿಗಲಿಲ್ಲ. ಇದಕ್ಕಿಂತ ನಾಚಿಕೆಗೇಡಿನ ಸಂಗತಿ ಬೇಕೆ? ಯಾವ ರೀತಿ ಪೋಲೀಸ್ ಅಧಿಕಾರಿಯ ದೌರ್ಜನ್ಯ ನಡೆಯುತ್ತಿದೆ ಎಂಬುದನ್ನು ನೋಡಿ. ಚುನಾವಣೆ ಆದಮೇಲೆ ಹಲ್ಲೆ ನಡೆಯಲಿಲ್ಲವೆಂದಿರಿ ಹುಬ್ಬಳ್ಳಿಯಲ್ಲಿ ಚುನಾವಣೆಗೆ ಮುನ್ನ ರಾತ್ರಿ ೮–೪೫ರ ಸಮಯದಲ್ಲಿ ಗೂಂಡಾಗಿರಿ ಸಬ್ ಇನ್ಸ್‌ಪೆಕ್ಟರ್ ವಿನಾಯಕಮೂರ್ತಿರವರ ಮನೆಗೆ ಹೋಗಿ ಅವರ ಅತ್ತಿಗೆಯ ಮಂಗಳ ಸೂತ್ರವನ್ನು ಹರಿದು ಹೊಡೆದಿದ್ದಾರೆ. ನಂತರ ದೂರನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಬೆದರಿಕೆ ಹಾಕಿದ್ದಾರೆ. ಹೀಗೆ ಮನೆಗೆ ಹೋಗಿ ತಾಳಿ ಹರಿದು ಬೂಟು ಕಾಲಿನಲ್ಲಿ ಒದೆಯುವ ಪ್ರಯತ್ನ ಮಾಡುತ್ತಾರೆಂದರೆ ಇಂಥ ಪೋಲೀಸ್ ಅಧಿಕಾರಿಗಳಿಂದ ನಮಗೆ ರಕ್ಷಣೆ ಸಿಗುತ್ತದೆಯೆ? ಇದನ್ನು ಬಂದೋಬಸ್ತು ಮಾಡುತ್ತೀರಾ? ಇನ್ನೊಂದು ನಾಚಿಕೆಗೇಡಿನ ಸಂಗತಿ ನಿನ್ನೆ ನಡೆದಿದೆ. ಯಾವ ಯಾವ ಸಬ್ ಇನ್ಸ್‌ಪೆಕ್ಟರ್‌ಗಳಿಂದ ಇಂಥ ಅವ್ಯವಹಾರ ನಡೆಯುತ್ತಿದೆ ಎಂದು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತೇನೆ. ಈ ರಾಜ್ಯದ ಸಬ್ ಇನ್ಸ್‌ಪೆಕ್ಟರ್ ಹಾಗೂ ಪೋಲೀಸ್ ಅಧಿಕಾರಿಗಳು ಆ ಕ್ಷೇತ್ರದಲ್ಲಿ ಸಾರ್ವಜನಿಕ ಸಮಾರಂಭದಲ್ಲಿ ಭಾಗವಹಿಸುವ ಸರ್ಕಾರಿ ಆಜ್ಞೆ ಯಾವತ್ತು ಹೋಯಿತು? ನಾನು ಅದರ ಬಗ್ಗೆ ಚಿಂತೆ ಮಾಡುವುದಿಲ್ಲ ಇಂಥ ವ್ಯಕ್ತಿಗಳ ಬಗ್ಗೆ ಬಿಗಿ ಕ್ರಮ ತೆಗೆದುಕೊಂಡು ಮನೆಗೆ ಕಳುಹಿಸುವ ಧೈರ್ಯ ಮಾಡದಿದ್ದರೆ ಎಲ್ಲರಿಗೂ ಆ ಪರಿಸ್ಥಿತಿ ಬರಬಹುದು. ಮೊನ್ನೆ ಚಿಕ್ಕಮಗಳೂರಿನ ಮೂಡಿಗೆರೆಯಲ್ಲಿ ನಡೆದ ಘಟನೆ. ಭಾಸ್ಕರ ನಾಯರ್ ಎಂಬ ಕೇರಳದ ಕುಖ್ಯಾತ ರೌಡಿ ೧೦೦ ರೂಪಾಯಿನ ನಕಲಿ ಕೋಟಾ ನೋಟನ್ನು ೧೦ ರೂಪಾಯಿಗೆ ಹಂಚುತ್ತಿದ್ದನೆಂದು ಅವನನ್ನು ಅರೆಸ್ಟ್ ಮಾಡಿದರು. ಅವನನ್ನು ೨೦–೧೨–೮೫ರಂದು ಜೈಲಿನಿಂದ ಆಸ್ಪತ್ರೆಗೆ ಕರೆದುಕೊಂಡು ಬರುತ್ತಿದ್ದರು ಟ್ರೀಟ್‌ಮೆಂಟಿಗೆ ಎಂದು ನೆಪ ಅಷ್ಟೆ. ಕಾರಿನಲ್ಲಿದ್ದ ೬ ಜನ ಗೂಂಡಾಗಳು ಅವನನ್ನು ಹೊತ್ತುಕೊಂಡು ಹೋದರು. ಪೋಲೀಸರ ಸಹಕಾರದಿಂದ

ಜೈಲಿನಿಂದ ಆಸ್ಪತ್ರೆಗೆಂದು ಬಂದ ಭಾಸ್ಕರ ನಾಯರ್ ಇವತ್ತು ಜೈಲಿನಲ್ಲಿ ಇಲ್ಲ. ಇದು ಗೃಹಮಂತ್ರಿಗಳಿಗೆ ಗೊತ್ತೆ ? ವಸತಿ ರಂಗ ಎಂಬ ಪತ್ರಿಕೆ ನಡೆಸುವ ಚೂಡಾನಾಥ ಐಯರ್ ಅನೇಕ ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಅವರು ಯಾವುದೋ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಿದರು ಎಂದು ಗೂಂಡಾಪಟ್ಟಿಯಲ್ಲಿ ಅವರನ್ನು ಸೇರಿಸುವ ಧೈರ್ಯವನ್ನು ಪೋಲೀಸ್ ಅಧಿಕಾರಿಗಳು ಮಾಡಿದ್ದಾರೆ. ಈ ರೀತಿ ದೌರ್ಜನ್ಯ ನಡೆಸುವ ಪೋಲೀಸ್ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ವಿನಯ ಪೂರ್ವಕವಾಗಿ ಪ್ರಾರ್ಥಿಸುತ್ತೇನೆ. ಇನ್ನು ವಿದ್ಯಾರ್ಥಿಗಳ ಪರಿಸ್ಥಿತಿ ಯಾವ ರೀತಿ ಇದೆ ಎಂಬುದಕ್ಕೆ ಹೇಳುತ್ತೇನೆ. ಕರ್ನಾಟಕದ ವಿವಿಧ ಪರೀಕ್ಷೆಗಳನ್ನು ಬೆಂಗಳೂರು ಕೇಂದ್ರದಲ್ಲಿ ನಡೆಸುವ ಬಗ್ಗೆ ಸಾವಿರಾರು ಮಂದಿ ವಿದ್ಯಾರ್ಥಿಗಳು ಸಹಿ ಮಾಡಿ ಅರ್ಜಿಯನ್ನು ಕೊಟ್ಟಿದ್ದಾರೆ. ಕಳೆದ ೨೫ ವರ್ಷಗಳಿಂದ ಕರ್ನಾಟಕ ವಿಶ್ವವಿದ್ಯಾನಿಲಯದ ಪದವಿ ಪರೀಕ್ಷೆಯನ್ನು ಬೆಂಗಳೂರು ಕೇಂದ್ರದಲ್ಲಿ ನಡೆಸಿಕೊಂಡು ಬಂದಿರುವುದು ಇದೆ. ಬಾಹ್ಯ ವಿದ್ಯಾರ್ಥಿಗಳ ಪರೀಕ್ಷಾ ಕೇಂದ್ರವನ್ನು ಕಳೆದ ೯ ವರ್ಷಗಳಿಂದ ಬೆಂಗಳೂರಿನಲ್ಲಿ ನಡೆಸಿಕೊಂಡು ಬಂದು ಅನೇಕರನ್ನು ವಿದ್ಯಾವಂತರನ್ನಾಗಿ ಮಾಡಲು ಸಹಾಯ ಮಾಡಿರುವುದು ಸರಿ. ಆದರೆ ಕಳೆದ ಸಾರಿ ೪೫೦೦ ಹೆಚ್ಚು ಮಂದಿ ವಿದ್ಯಾರ್ಥಿಗಳು ಪರೀಕ್ಷೆಯನ್ನು ತೆಗೆದುಕೊಂಡಿದ್ದರು. ೧೯೮೮-೮೯ನೇ ಸಾಲಿನಲ್ಲಿ ಬೆಂಗಳೂರಿನಲ್ಲಿ ಪರೀಕ್ಷೆಯನ್ನು ನಡೆಸದೆ ಧಾರವಾಡದಲ್ಲಿ ನಡೆಸಿದ್ದರಿಂದ ಸುಮಾರು ೫೦೦೦ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಸ್ನಾತಕೋತ್ತರ ಪದವೀ ಪರೀಕ್ಷೆಗಳಿಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳಿಗೆ ಇಲ್ಲಿ ಸರಿಯಾದ ವ್ಯವಸ್ಥೆ ಇಲ್ಲವೆಂದು ೫ ಸಾವಿರ ವಿದ್ಯಾರ್ಥಿಗಳು ಧಾರವಾಡದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳುವ ಸಂದರ್ಭ ಇದೆ. ಅಲ್ಲಿ ವಿದ್ಯಾರ್ಥಿಗೆ ಏನು ಅನುಕೂಲ ಇದೆ, ಊಟಕ್ಕೆ ಏನು ವ್ಯವಸ್ಥೆ ಇದೆ?

ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆ ಮತ್ತು ವಾಸ ಮಾಡುವುದಕ್ಕೆ ಅನುಕೂಲ ಮಾಡಿ ಕೊಡಬೇಕು. ಏಪ್ರಿಲ್‌ನಲ್ಲಿ ಪರೀಕ್ಷೆಗಳು ನಡೆಸುತ್ತದೆ. ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ ದಯಮಾಡಿ ಐದು ಸಾವಿರ ವಿದ್ಯಾರ್ಥಿಗಳಿಗೆ ತೊಂದರೆ ಆಗುವುದನ್ನು ತಪ್ಪಿಸಿ ಬೆಂಗಳೂರಿನಿಂದ ಧಾರವಾಡಕ್ಕೆ ಹೋಗದೆ ಇಲ್ಲೇ ವಿದ್ಯಾಭ್ಯಾಸ ಮುಂದುವರೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಕರ್ನಾಟಕ ರಾಜ್ಯ ವ್ಯವಸಾಯ ಪತ್ತಿನ ಸಹಕಾರ ಸಂಘದಲ್ಲಿ ಕೆಲಸ ಮಾಡುತ್ತಿರುವಂಥ ಕೆಲಸಗಾರರು ೧೫-೯೮೯ರಿಂದ ನಿರ್ದಿಷ್ಟ ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಸಹಕಾರ ಸಂಘಗಳಲ್ಲಿ ಅವರಿಗೆ ನ್ಯಾಯವಾಗಿ ಸಿಗಬೇಕಾದ ಅನುಕೂಲ ಸಿಗದಿದ್ದರೆ ಪ್ರಾಮಾಣಿಕವಾಗಿ ಕೆಲಸ ಮಾಡುವುದನ್ನು ಯಾವ ರೀತಿ ನಿರೀಕ್ಷೆ ಮಾಡುವುದಕ್ಕಾಗುತ್ತದೆ ? ರಾಜ್ಯ ಸರ್ಕಾರದ ಸೇವಾ ನಿಯಮಗಳನ್ನು ಅನುಸರಿಸಬೇಕು, ವೇತನ ಶ್ರೇಣಿಯನ್ನು ನೀಡಬೇಕು, ಬೋನಸ್ ನೀಡಬೇಕು ಮತ್ತು ರಾಜ್ಯ ಸರ್ಕಾರ ನೀಡುತ್ತಿರುವ ಮಧ್ಯಂತರ ಪರಿಹಾರ ನೀಡಬೇಕು, ದಿನಗೂಲಿ ನೌಕರರನ್ನು ಖಾಯಂಗೊಳಿಸಬೇಕು ಎಂದು ಮುಷ್ಕರ ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು ೩೦೦ ರೂಪಾಯಿಯಿಂದ ಪ್ರೈಮರಿ ಶಾಲೆಯಲ್ಲಿ ಉಪಾಧ್ಯಾಯರಾಗಿ ಕೆಲಸ ಮಾಡಿಕೊಂಡು ಜೀವನ ಮಾಡುವುದಕ್ಕಾಗುವುದಿಲ್ಲ ಎಂಬ ಕಳಕಳಿಯನ್ನು ವ್ಯಕ್ತಪಡಿಸಿದರು. ಕಳೆದ ೧೦೦ ದಿವಸಗಳಿಂದ ಈ ನೌಕರರು ಧರಣಿ ಮಾಡುತ್ತಿದ್ದಾರೆ. ನೀವು ಸದನದ ಮೂಲಕ ಏನಾದರೂ ಕರೆ ಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಒಳ್ಳೆಯ ಸಮಯದಲ್ಲಿ ಒಳ್ಳೆಯ ವಿಷಯ ಎತ್ತಿದ್ದಾರೆ. ಈಗ ಸರ್ಕಾರಿ ನೌಕರರಿಗೆ ಒಂದು ವರ್ಷಕ್ಕೆ ಕೊಡುತ್ತಿರತಕ್ಕ ಸಂಬಳ ೧೩೦೦ ಕೋಟಿ ರೂಪಾಯಿಗಳು. ಇನ್ನು ಎಷ್ಟು ಕೋಟಿ ರೂಪಾಯಿಗಳನ್ನು ಚಳುವಳಿ ಮಾಡತಕ್ಕ ನೌಕರರಿಗೆ ಕೊಡಬೇಕು ? ರೈತರಿಗೆ ಅನುಕೂಲ ಮಾಡಿಕೊಡಿ ಎಂದು ಹೇಳುತ್ತೀರಿ, ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡು ಎಂದು ಹೇಳುತ್ತೀರಿ. ಇಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡುವಾಗ ನೌಕರರಿಗೆ ಇನ್ನೂ ಎಷ್ಟು ಸಂಬಳ ಕೊಡಬೇಕು ಎಂದು ಯೋಚನೆ ಮಾಡಿ ೧೩೦೦ ಕೋಟಿ ರೂಪಾಯಿ ಕೊಡುತ್ತಿದ್ದೇವೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—೧೦ ದಿವಸದಲ್ಲೇ ನಿಮಗೆ ತಿಳಿಯಿತು ನೋಡಿ ನಮಗೆ ಹೇಳುತಾ ಇದ್ದಿರಿ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಕೌಜಲಗಿ ಅವರನ್ನು ಬಹಳ ದಿವಸದಿಂದ ನೋಡುತ್ತಿದ್ದೇನೆ. ಇಷ್ಟು ದಿವಸ ಮಾತನಾಡಿದ್ದಾರೆ. ಆದರೆ ಅವರು ಏನು ಮಾತನಾಡುತ್ತಾರೆ ಎಂಬುದೇ ನನಗೆ ಅರ್ಥವಾಗುವುದಿಲ್ಲ

ಶ್ರೀ ಶಿವಾನಂದ ಎಚ್. ಕೌಜಲಗಿ.—ನಮ್ಮ ಬೆಳಗಾಂ ಭಾಷೆಯೇ ಹಾಗೆ.

ಅಧ್ಯಕ್ಷರು.—ಇನ್ನು ಐದು ನಿಮಿಷದಲ್ಲಿ ಮುಗಿಸಿ ಯಡಿಯೂರಪ್ಪನವರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸರ್ಕಾರಿ ನೌಕರರ ಸಂಬಳಕೊಡುವುದಕ್ಕೋ ರಾಜ್ಯದ ತೆರಿಗೆ ಹಣ ಪೂರ್ತಿ ಖಾಲಿಯಾಗಬೇಕು ಎಂದು ಹೇಳುವವನಲ್ಲ ನಾನು. ಆದರೆ ಅವರು ಬದುಕುವುದಕ್ಕೆ ಬೇಕಾದ ಕನಿಷ್ಠ ಸವಲತ್ತನ್ನಾದರೂ ಕೊಡದಿದ್ದರೆ ಹೇಗೆ ? ನಾವು ಹೀಗೆ ಕೊಡದಿದ್ದರೆ ಸಕ್ಕರೆ, ಎಣ್ಣೆ ಎಲ್ಲವನ್ನೂ ಹಿಂಬಾಗಿಲಿನಿಂದ ಬೇರೆಯವರಿಗೆ ಕೊಡುತ್ತಾರೆ. ಹಣ ಮಾಡಿಕೊಳ್ಳುತ್ತಾರೆ. ಬಡವರಿಗೆ ಸಿಗಬೇಕಾದ್ದು ಸಿಗುವುದಿಲ್ಲ. ಕೇವಲ ೩೦೦-೪೦೦ ರೂಪಾಯಿ ಕೊಟ್ಟು ಜೀವನ ಮಾಡು ಎಂದರೆ ಬಹಳ ಕಷ್ಟವಾಗುತ್ತದೆ. ಅವರಿಂದ ಪ್ರಾಮಾಣಿಕವಾದ ಕೆಲಸವನ್ನು ಅಪೇಕ್ಷೆ ಪಡುವುದಕ್ಕಾಗುವುದಿಲ್ಲ. ಕಾನೂನಿನ ಚೌಕಟ್ಟಿನಲ್ಲಿ ಏನು ಕೊಡಬೇಕೋ ಅದನ್ನು ಕೊಡಿ. ೧೦೦ ದಿವಸಗಳಿಂದ ಧರಣಿ ಮಾಡುತ್ತಿರುವವರಿಗೆ ಕರೆದು ಹೇಳಬೇಕಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಧರಣಿ ಮಾಡು ಎಂದು ನಾವು ಹೇಳಿದ್ದೇವೆಯೋ ? ಅವರು ಧರಣಿ ಮಾಡಿದಾಕ್ಷಣ ಅವರು ಹೇಳಿದ ಹಾಗೆ ಕೇಳುವುದಕ್ಕಾಗುತ್ತದೆಯೇ ? ರಾಜ್ಯದ ಆರ್ಥಿಕ ವ್ಯವಸ್ಥೆಯ ಅರಿವು ನಿಮಗಿದೆ. ಅದನ್ನು ಅರ್ಥ ಮಾಡಿಕೊಂಡು ಮಾತನಾಡಿದರೆ ನಾನು ಕೃತಜ್ಞನಾಗಿರುತ್ತೇನೆ. ಯಾರು ಯಾರು ನೌಕರರಿದ್ದಾರೆ ಅವರಿಗೆಲ್ಲಾ ಹಣ ಕೊಟ್ಟು ಖಜಾನೆ ಖಾಲಿ ಮಾಡಿ ದೇಶದಲ್ಲಿ ಯಾವ ಕಾಮಗಾರಿಗಳನ್ನೂ ಮಾಡಬಾರದು ಎಂಬ ಅಪೇಕ್ಷೆ ನಿಮಗಿದ್ದರೆ ಭಾಷಣ ಮುಂದುವರೆಸಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ಹಿರಿಯ ಸಚಿವರಾಗಿ ಹೀಗೆ ಏತಕ್ಕೆ ಹೇಳುತ್ತೀರೋ ಗೊತ್ತಿಲ್ಲ. ನೀವು ಹೇಳುವುದು ಸರಿಯಲ್ಲ. ರಾಜ್ಯ ಸರ್ಕಾರಿ ನೌಕರರು ನ್ಯಾಯವಾದ ಬೇಡಿಕೆಯನ್ನು ಈಡೇರಿಸಿಕೊಳ್ಳುವುದಕ್ಕೆ ಧರಣಿ ಸತ್ಯಾಗ್ರಹ, ಚಳುವಳಿ ಮಾಡುವ ಮಟ್ಟಕ್ಕೆ ಇಳಿಯದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಸರ್ಕಾರದ ಮೇಲಿದೆ. ಒಂದು ನಿಮಿಷ ಕೇಳಿ ಸ್ವಾಮಿ. ಅವರ ಬೇಡಿಕೆಗಳು ನ್ಯಾಯಯುತವಾಗಿದೆಯೆಂದು ಮನವಿ ಕೊಟ್ಟಾಗ ಸಂಬಂಧಪಟ್ಟ ಅಧಿಕಾರಿಗಳು ಮಂತ್ರಿಗಳು ಚರ್ಚೆ ಮಾಡದೇ ಇದ್ದರೆ, ಅನೇಕ ವರ್ಷಗಳು ಉರುಳಿದರೂ ನ್ಯಾಯಯುತ ಬೇಡಿಕೆಗಳ ಬಗ್ಗೆ ಇವೊತ್ತು ನಿರುದ್ಯೋಗಿ ಯುವಕನೂ ಧರಣಿ ಮಾಡುತ್ತಾನೆ, ರೈತನೂ ಧರಣಿ ಮಾಡುತ್ತಾನೆ, ಶ್ರೀಸಾಮಾನ್ಯನೂ ಧರಣಿ ಮಾಡುತ್ತಾನೆ, ಸರ್ಕಾರೀ ನೌಕರನೂ ಧರಣಿ ಮಾಡುತ್ತಾನೆ. ಈ ಸ್ಥಿತಿಯಲ್ಲಿ ಇವತ್ತು ಬದಲಾವಣೆ ಮಾಡುವುದಕ್ಕೆ ನಿಮ್ಮ ಕಾರ್ಯಕ್ರಮ ಏನು ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಅವರು ಬಹಳ ಸ್ವಾರಸ್ಯವಾಗಿ ಮಾತನಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಇವತ್ತು ಸರ್ಕಾರಿ ನೌಕರರ ಸಂಖ್ಯೆ ನಾಲ್ಕೂವರೆ ಲಕ್ಷ. ಹಿಂದಿನ ಸರ್ಕಾರದವರು ನಿವೃತ್ತಿ ವಯಸ್ಸನ್ನು ೫೫ ರಿಂದ ೫೮ಕ್ಕೆ ಏರಿಸಿದ್ದರಿಂದ ಪ್ರತಿ ವರ್ಷ ನಿವೃತ್ತಿ ಹಾಗೂ ಮರಣದಿಂದ ಖಾಲಿ ಆಗುತ್ತಿದ್ದ ಸುಮಾರು ೧೩ ಸಾವಿರ ಹುದ್ದೆಗಳು ಖಾಲಿ ಬೀಳುತ್ತಿದ್ದವು ಅವು ಬಂದ್ ಆದವು. ಇದರಿಂದಾಗಿ ಯಾರು ಸರ್ಕಾರಿ ಕೆಲಸ ಮಾಡುತ್ತಿದ್ದಾರೆ ಅವರಿಗೆ ಬೇಕಾದಷ್ಟು ಬೆನಿಫಿಟ್ ಸಿಕ್ಕಿತು. ಇವತ್ತು ಪ್ರೈಮರಿ, ಮಿಡಲ್ ಹಾಗೂ ಹೈಸ್ಕೂಲ್‌ಗಳಲ್ಲಿ ಸುಮಾರು ೫೬ ಲಕ್ಷ ಯುವಕರು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಇವರಿಗೆ ಎಷ್ಟು ಪ್ರಮಾಣದಲ್ಲಿ ಉಪಾಧ್ಯಾಯರು ಬೇಕೆಂದು ನೀವು ಹೇಳುತ್ತಿದ್ದೀರಾ? ಇದನ್ನು ಎಲ್ಲರೂ ಒಪ್ಪಲೇ ಬೇಕು. ೫೬ ಲಕ್ಷ ವಿದ್ಯಾರ್ಥಿಗಳಿಗೆ ಎಷ್ಟು ಶಾಲೆಗಳನ್ನು ಕಟ್ಟಿಸಬೇಕು ? ೫ ವರ್ಷದಲ್ಲಿ ಮಕ್ಕಳ ಸಂಖ್ಯೆ ದ್ವಿಗುಣವಾಗುತ್ತದೆ. ಮಕ್ಕಳ ಸಂಖ್ಯೆಯನ್ನು ತಡೆಗಟ್ಟುವದಕ್ಕೆ ಏನೂ ಪ್ರಯತ್ನ ಮಾಡಿಲ್ಲವೇ ? ಸರ್ಕಾರಿ ನೌಕರರ ಸಂಖ್ಯೆ ನಾನು ಹಿಂದೆ ಮಂತ್ರಿ ಆಗಿದ್ದಾಗ ೨ ಲಕ್ಷ ಇದ್ದದ್ದು ಈಗ ೪ ಲಕ್ಷಕ್ಕಿಂತ ಹೆಚ್ಚು ಆಗಿದೆ. ನಾವು ಎಷ್ಟೆಷ್ಟು ಹೆಚ್ಚು ಉತ್ಪತ್ತಿ ಮಾಡುತ್ತಿದ್ದೇವೆಯೋ ಆ ಹೆಚ್ಚಾದ ಉತ್ಪತ್ತಿಯನ್ನು ಇವರೇ ತಿಂದುಹಾಕಿದ್ದಾರೆ. ಇವತ್ತು ಮಕ್ಕಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ದ್ವಿಗುಣವಾಗುತ್ತಿದೆ. ಈ ವರ್ಷ ೧ ಸ್ಕೂಲ್ ತೆಗೆಯಬೇಕೆಂದರೆ ಮುಂದಿನ ವರ್ಷ ೪ ಶಾಲೆಗಳನ್ನು ತೆರೆಯಬೇಕಾಗುತ್ತದೆ. ಎಷ್ಟು ಮಕ್ಕಳು ಹುಟ್ಟುತ್ತಿವೆ ಎಂಬುದನ್ನು ಗಮನದಲ್ಲಿ ಇಟ್ಟುಕೊಂಡು ಮಾತನಾಡಬೇಕು. ತಾವು ಶ್ರೀಸಾಮಾನ್ಯನ ಬಗ್ಗೆ ಹೇಳುತ್ತೀರಿ. ಶ್ರೀಸಾಮಾನ್ಯನಿಗೆ ನೀವು ಏನು ಮಾಡಿದ್ದೀರಿ ? ದೇಶಕ್ಕೆ ಸ್ವರಾಜ್ಯ ಬಂದಮೇಲೆ ಏನೇನು ಮಾಡಿದ್ದೀರಿ ? ಹಳ್ಳಿಗಳಲ್ಲಿ ಅತ ಹೇಗಿದ್ದನೋ ಹಾಗೆಯೇ ಇದ್ದಾನೆ. ಕೆಲವರಿಗೆ ಪರಿಸ್ಥಿತಿ ಉತ್ತಮವಾಗಿದೆ.........

ಶ್ರೀ ವಾಟಾಳ್ ನಾಗರಾಜ್.—ಮಂತ್ರಿಮಂಡಲದ ಸದಸ್ಯರ ಸರಾಸರಿ ಮಕ್ಕಳ ಸಂಖ್ಯೆ ಎಷ್ಟು ಎಂಬುದನ್ನು ಹೇಳಿ. ಇವತ್ತು ಸಾಧ್ಯವಿಲ್ಲದಿದ್ದರೆ ನಾಳೆ. ಒಬ್ಬೊಬ್ಬ ಮಂತ್ರಿಗಳಿಗೆ ಎಷ್ಟೆಷ್ಟು ಮಕ್ಕಳು ಎಂದು ಹೇಳಿ ?

ಶ್ರೀ ಬಿ. ಬಸವಲಿಂಗಪ್ಪ.—ಶ್ರೀಸಾಮಾನ್ಯನಿಗೆ ವರ್ಷಕ್ಕೆ ಎಷ್ಟು ಆದಾಯ ಇದೆ ? ನಿಮ್ಮ ಸರ್ಕಾರಿ ನೌಕರನ ಆದಾಯ ಎಷ್ಟು ? ಸರ್ಕಾರಿ ನೌಕರರಿಗೆ ಒಂದು ತಿಂಗಳಿಗೆ ೪ ಸಾವಿರ ರೂಪಾಯಿ ಬರುತ್ತದೆ. ೧ ಸಾವಿರ ರೂಪಾಯಿಗಿಂತ ಕಡಿಮೆ ಯಾರಿಗೂ ಇಲ್ಲ. ನಮ್ಮ ರಾಜ್ಯದಲ್ಲಿ ೪ ಕೋಟಿ ಜನರು ಇದ್ದು ಇದರಲ್ಲಿ ಸರ್ಕಾರಿ ನೌಕರರ ಸಂಖ್ಯೆ ನಾಲ್ಕೂವರೆ ಲಕ್ಷ. ಈ ಸರ್ಕಾರಿ ನೌಕರರಿಗೆ ನಾವು

ಇವತ್ತು ೧,೩೦೦ ಕೋಟಿ ರೂಪಾಯಿ ಸಂಬಳ ಕೊಡುತ್ತಿದ್ದೇವೆ. ಶ್ರೀಸಾಮಾನ್ಯನ ಪರಿಸ್ಥಿತಿ ಏನು ಇದೆ ಅವನ ಪರಿಸ್ಥಿತಿಯನ್ನು ನಾವು ಉತ್ತಮ ಮಾಡಬೇಕಾದರೆ ಆತನ ಕಡೆಗೆ ನಾವು ಎಷ್ಟು ದೃಷ್ಟಿ ಹರಿಸಬೇಕು, ಎಷ್ಟು ಖರ್ಚು ಮಾಡಬೇಕು ಹಾಗೂ ಆ ಬಗ್ಗೆ ನಾವು ಹಣವನ್ನು ಹೇಗೆ ರೂಡಿಸಬೇಕು ಎನ್ನುವುದರ ಬಗ್ಗೆ ತಮ್ಮ ಗಮನ ಸೆಳೆದು ದಯಮಾಡಿ ನಮಗೆ ಪರಿಹಾರ ಮಾರ್ಗ ಹೇಳಿದರೆ ಸಂತೋಷ.

ಶ್ರೀ ಬಿ. ಎಸ್. ಯಡಿಯೂರಪ್ಪ.—ದೇಶದ ಜನರ ಹಿತದ ಬಗ್ಗೆ ತಮಗೆ ಚಿಂತನೆ ಇದ್ದಿದ್ದರೆ ಹಳ್ಳಿಗಳಲ್ಲಿ ವಾಸ ಮಾಡುವ ಜನರಿಗೆ ಮೊದಲ ಎರಡು ಮಕ್ಕಳನ್ನು ಪಡೆದಂತಹವರಿಗೆ ಇಂತಿಂತಹ ಸೌಕರ್ಯಗಳು ಸರ್ಕಾರದಿಂದ ಸಿಗುತ್ತವೆ, ಉಳಿದವರಿಗೆ ನಿಮ್ಮ ಹಣೆಬರಹ ಎಂದು ಹೇಳುವ ತಾಕತ್ತು ಇದ್ದಿದ್ದರೆ ಇವತ್ತು ಜನಸಂಖ್ಯೆ ಇಷ್ಟು ಬೆಳೆಯುತ್ತಿರಲಿಲ್ಲ. ಆಗ ಹಳ್ಳಿಯ ರೈತ ನೆಮ್ಮದಿಯಿಂದ ಜೀವನವನ್ನು ಮಾಡುತ್ತಿದ್ದ.

೧-೪೫ ಪಿ. ಎಂ.

ಸರ್ಕಾರಿ ಉದ್ಯೋಗಕ್ಕೆ ಯಾವ್ಯಾವ ಕಛೇರಿಗೆ ಎಷ್ಟೆಷ್ಟು ಅಗತ್ಯವಾಗಿರತಕ್ಕ ಸಿಬ್ಬಂದಿಯನ್ನು ನೇಮಕ ಮಾಡಬೇಕಾಗಿತ್ತು. ಪ್ರತಿಯೊಬ್ಬ ವ್ಯಕ್ತಿಯ ವರ್ಕ್‌ಲೋಡ್‌ನ ಎಕ್ಸ್‌ಟ್ರಾಕ್ಟ್ ಮಾಡಿದ್ದರೆ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ. ಮುಖ್ಯಮಂತ್ರಿಗಳು ಅಬ್ಬರದ ಪ್ರಚಾರ ಮಾಡಿದರು. ಜಿಲ್ಲಾ ಪರಿಷತ್‌ಗಳು ಶಾಲೆಗಳ ಬಾಗಿಲುಗಳನ್ನು ಹಾಕಿವೆ ಎಂದು ಹೇಳುತ್ತಿದ್ದರು. ಜಿಲ್ಲಾಪರಿಷತ್‌ನವರು ನೇಮಕ ಮಾಡಿದಂತಹ ಶಿಕ್ಷಕರನ್ನು ಏತಕ್ಕೆ ತೆಗೆದಿರಿ ? ನೇಮಕ ಮಾಡಿಕೊಂಡ ಮೇಲೆ ಸರ್ಕಾರಿ ನೌಕರರಿಗೆ ನೀವು ಕನಿಷ್ಟ ಸವಲತ್ತುಗಳನ್ನಾದರೂ ಕೊಡಬೇಕು. ನೀವು ಸರಿಯಾಗಿ ಅವರಿಂದ ಕೆಲಸವನ್ನು ಮಾಡಿಸಬೇಕಾದರೆ ಅವರಿಗೆ ಕನಿಷ್ಟ ಸವಲತ್ತುಗಳನ್ನು ಕೊಡಿಯೆಂದು ಕೇಳುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಹೊರಗಡೆ ೮ ಲಕ್ಷ ಜನ ಬಿ.ಎ., ಎಂ.ಎ., ಪಾಸ್ ಮಾಡಿದವರು ಸಾಯುತ್ತಿದ್ದಾರೆ. ಅವರ ಕಡೆ ಗಮನ ಕೊಡುವುದು ಬೇಡವೆ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಬೆಳಗಾಂ ಕೋ-ಆಪರೇಟಿವ್ ಸೊಸೈಟಿಯೊಂದರಲ್ಲಿ ದೊಡ್ಡ ಭ್ರಷ್ಟಾಚಾರ ನಡೆದಿದೆ. ಅಲ್ಲಿ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿ ಅಲ್ಲಿ ನಡೆಯತಕ್ಕ ಭ್ರಷ್ಟಾಚಾರವನ್ನು ತಡೆಯಿರಿ. ಶ್ರೀ ಬಾಬುಗೌಡ ಮತ್ತು ಅವರ ಮಿತ್ರರು ಇನ್ನು ಕೆಲವರನ್ನು ಏಪ್ರಿಲ್‌ನಲ್ಲಿ ರಸ್ತೆ ರೋಖೋ ಚಳುವಳಿ ಮಾಡಿದಾಗ ಅವತ್ತಿನ ಸರ್ಕಾರ ಅವರುಗಳ ಮೇಲೆ ಕೇಸುಗಳನ್ನು ಹಾಕಿದೆ, ಇವತ್ತು ಬಾಬುಗೌಡರವರು ೩೧೭ನೇ ಸೆಕ್ಷನ್ ಪ್ರಕಾರ ಪೋಲಿಸರನ್ನು ಕೊಲೆ ಮಾಡುವುದಕ್ಕೆ ಹೋಗಿದ್ದರು ಎನ್ನುವ ಕೇಸು ಅವರ ಮೇಲಿದೆ. ಈ ರಾಜ್ಯದ ರೈತರು ನಿಮ್ಮನ್ನು ಅಧಿಕಾರಕ್ಕೆ ತಂದಿದ್ದಾರೆ. ಅವರ ಬಗ್ಗೆ ಶಾಸಕರು ಮತ್ತು ಅವರ ಮಿತ್ರರುಗಳ ಮೇಲೆ ಕೇಸುಗಳು ಏನಿವೆ ಅವುಗಳೆಲ್ಲವನ್ನು ವಾಪಸ್ಸು ಪಡೆಯಬೇಕು, ಅದನ್ನು ಮಾಡಲಿಲ್ಲ ಅಂದರೆ ಬಹುಶಃ ನಿಮ್ಮ ನಿಮ್ಮ ಕ್ಷೇತ್ರಗಳಿಗೆ ನೀವು ಹೋದರೆ ನೀವು ವಾಪಸ್ಸು ಬರುವುದು ಕಷ್ಟ ಆಗಬಹುದು. ನಿಮಗೆ ರೈತರ ಬಗ್ಗೆ ಚಿಂತನೆ ಇದ್ದರೆ ಅವರ ಮೇಲೆ ಇರತಕ್ಕ ಕೇಸುಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಇನ್ನು ರಾಜ್ಯದಲ್ಲಿರತಕ್ಕ ಆಸ್ಪತ್ರೆಗಳನ್ನು ಹೇಳುವವರು ಕೇಳುವವರು ಯಾರೂ ಇಲ್ಲ. ಆ ಆಸ್ಪತ್ರೆಗಳಲ್ಲಿ ಡಾಕ್ಟರುಗಳು ಇಲ್ಲ. ದೇವರುಗಳು ಇಲ್ಲದ ಗುಡಿಯಂತಿವೆ. ಹಿಂದಿನ ಸರ್ಕಾರ ವಿಧವೆಯವರಿಗೆ ವಿಧವಾವೇತನ ಎಂದು ತಿಂಗಳಿಗೆ ೫೦ ರೂಪಾಯಿಗಳನ್ನು ಕೊಡುತ್ತಿತ್ತು. ಈಗ ಅದು ಬರುತ್ತಿಲ್ಲ. ಅದಕ್ಕೆ ಕಾರಣವೇನು ? ಇವತ್ತು ಅವರು ಕಛೇರಿಗಳಿಗೆ ಅಲೆದಾಡುವಂತಹ ದುಸ್ಥಿತಿಯನ್ನು ತಂದಿದ್ದಾರೆ. ನೀವು ಅವರಿಗೆ ಭಿಕ್ಷೆ ಕೊಡುತ್ತೀರೇನು ? ಸರ್ಕಾರಿ ನೌಕರರಿಗೆ ಯಾವರೀತಿ ೧ನೇ ತಾರೀಖು ಸಂಬಳ ಕೊಡುತ್ತೀರಿ ಅದೇರೀತಿ ತಿಂಗಳ ಮೊದಲ ವಾರದಲ್ಲಿ ಸರಿಯಾಗಿ ಅವರಿಗೆ ದುಡ್ಡು ಕೊಡಿ.

ಶ್ರೀ ಬಿ. ಎಂ. ಇದಿನಬ್ಬ.—ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಎರಡು ವಾರ ಆಗಿದೆ. ಅಷ್ಟರಲ್ಲಿ ಏನು ಅನಾಹುತ ಮಾಡಿದ್ದೇವೆ. ಮುಂದೆ ಅನುಕೂಲ ಮಾಡಲು ತಿಳಿಸಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಸದಸ್ಯರು ಹೇಳುವುದು ಸರಿ. ನಾನು ಹೇಳುತ್ತಿರುವುದು ಅನುಕೂಲ ಕೊಡುವ ವ್ಯವಸ್ಥೆಯ ಬಗ್ಗೆ ಪ್ರಯತ್ನ ಮಾಡಿಯೆಂದು ಹೇಳುತ್ತೇನೆ. ಆಸ್ಪತ್ರೆಗಳಲ್ಲಿ ಔಷಧಿಗಳು ಇಲ್ಲ. ಪಬ್ಲಿಕ್ ಹೆಲ್ತ್ ಯುನಿಟ್ಸ್, ಪಬ್ಲಿಕ್ ಹೆಲ್ತ್ ಸೆಂಟರ್ಸ್ ಎಷ್ಟು ಇವೆ ಅವುಗಳಲ್ಲಿ ಇದೇ ಪರಿಸ್ಥಿತಿ ಇದೆ, ಶಿಕಾರಿಪುರ ತಾಲ್ಲೂಕಿನ ಎರಡು ಮೂರು ಘಟಕಗಳಲ್ಲಿ

ಡಾಕ್ಟರುಗಳು ಇಲ್ಲ. ಆಸ್ಪತ್ರೆಗಳಲ್ಲಿ ಡಾಕ್ಟರ್ ಇದ್ದರೆ ಔಷಧಿ ಇಲ್ಲ. ನಾನು ಹೆಚ್ಚಿನ ವಿವರಗಳಿಗೆ ಹೋಗುವುದಿಲ್ಲ. ರಾಜ್ಯಪಾಲರ ಭಾಷಣದಲ್ಲಿ ರಾಜ್ಯದ ಹಿತವನ್ನು ಕಾಪಾಡತಕ್ಕ ಯಾವುದೇ ಕಾರ್ಯಕ್ರಮಗಳಿಲ್ಲ. ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ ದಯಮಾಡಿ ಜನಪರ ಕಾರ್ಯಕ್ರಮಗಳನ್ನು ರೂಪಿಸಿ. ದೊಡ್ಡ ಸಂಖ್ಯೆಯಲ್ಲಿ ಗೆದ್ದಿರತಕ್ಕ ನೀವು ಕಚ್ಚಾಡಬೇಡಿ. ಜನರ ಹಿತದೃಷ್ಟಿಯಿಂದ ಕೆಲಸಮಾಡಿ. ಕೋಲು ಹಿಡಿದುಕೊಳ್ಳುವವರು ಮಂತ್ರಿಮಂಡಲದಲ್ಲಿದ್ದಾರೆ, ಅವರಿಗೆ ಅನುಭವ ಇರಬಹುದು ಆದರೆ ಯುವಕರು ಇದ್ದಾರೆ. ಯುವಕರಿಗೆ ಮತದಾನದ ಹಕ್ಕು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಯುವಕರಿಗೆ ಮತದಾನದ ಹಕ್ಕನ್ನು ೫ ವರ್ಷಗಳ ಹಿಂದೆ ಮಾಜಿ ಮುಖ್ಯ ಮಂತ್ರಿಗಳಾದ ಹೆಗಡೆಯವರು ಕೊಟ್ಟಿದ್ದಾರೆ. ಮತದಾನದ ಹಕ್ಕನ್ನು ಕೊಟ್ಟಿದ್ದೇವೆ ಜವಹರ ರೋಜ್‌ಗಾರ್ ಯೋಜನೆಯನ್ನು ಜಾರಿಗೆ ತರುತ್ತೇವೆಂದು ಈಗ ಹೇಳುತ್ತಿದ್ದಾರೆ. ಮಾಜಿ ಪ್ರಧಾನಿಗಳಾದ ರಾಜೀವಗಾಂಧಿಯವರು ಅಧಿಕಾರಕ್ಕೆ ಬಂದಮೇಲೆ ಜವಹರ ರೋಜ್‌ಗಾರ್ ಯೋಜನೆ, ಯುವಕರಿಗೆ ಉದ್ಯೋಗ ಒದಗಿಸುವುದನ್ನು ಇಂತಹ ಕೆಲಸಗಳನ್ನು ಮಾಡಲಿಲ್ಲ. ಈಗ ಚುನಾವಣೆಗಳು ಇನ್ನು ಮೂರು ತಿಂಗಳು ಇರುವಾಗ ಇಂತಹ ಯೋಜನೆಗಳನ್ನು ಪ್ರಕಟ ಮಾಡುತ್ತಾರೆ. ನನಗೆ ಅವರ ಬಗ್ಗೆ ಗೌರವವಿದೆ, ಇಂಥಿಂಥ ಕೆಲಸಗಳನ್ನು ಮಾಡಿದ್ದೇವೆ ನಮಗೆ ಮತ ನೀಡಿಯೆಂದು ಜನರನ್ನು ಕೇಳಬಹುದಾಗಿತ್ತು. ವಿಜಯನಗರ ಉಕ್ಕಿನ ಕಾರ್ಖಾನೆಯ ಬಗ್ಗೆ ನೀವು ಈಗ ಪ್ರಸ್ತಾಪ ಮಾಡಿದ್ದೀರಿ. ಇಂತಹ ಪೊಳ್ಳು ಆಶ್ವಾಸನೆಗಳನ್ನು ಕೊಡಬೇಡಿ. ದಯಮಾಡಿ ರಾಜ್ಯದ ಜನತೆಯ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಭರವಸೆಗಳನ್ನು ಕೊಡಿ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಸದಸ್ಯರು ಯಾವಾಗಲೂ ವಿತಂಡ ವಾದವನ್ನು ಮಾಡುತ್ತಾರೆ.

ಅದಕ್ಕೆ ಅವರು ಅಲ್ಲಿ ಉತ್ತರ ಕೊಡುತ್ತಾರೆ. ಏಕೆಂದರೆ ನಿಮ್ಮ ಪ್ರತಿನಿಧಿಗಳು ಅಲ್ಲಿ ಇದ್ದಾರೆ. ಶ್ರೀ ರಾಜೀವಗಾಂಧಿ ಅವರ ಬಗ್ಗೆ ಇಲ್ಲಿ ಹೇಳಬಾರದು. ಅವರ ಬಗೆ ಇಲ್ಲಿ ಲಘುವಾಗಿ ಮಾತನಾಡುವುದು ಸರಿಯಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಅತ್ಯಂತ ವಿನಯದಿಂದ ಶ್ರೀ ಶಿವನಂಜಪ್ಪ ಅವರನ್ನು ಕೇಳುತ್ತಿದ್ದೇನೆ. ಅವರು ಇಲ್ಲಿ ಕುಳಿತಿದ್ದಾಗ ಯಾವುದಾದರೂ ಒಂದು ಸಂದರ್ಭದಲ್ಲಿ ಅಲ್ಲಿ ಕುಳಿತಿದ್ದಂಥ ಜನತಾದಳದ ಸರ್ಕಾರ ಜನವಿರೋಧಿಯಾದ, ರೈತವಿರೋಧಿಯಾದ ನೀತಿಯನ್ನು ಅನುಸರಿಸಿದಾಗ ಪ್ರತಿಭಟನೆ ಮಾಡದೆ ಅವರ ಪರವಾಗಿ ಮಾತನಾಡಿದಂಥ ಒಂದು ಉದಾಹರಣೆಯನ್ನು ತೋರಿಸಿದರೆ ನಾನು ನನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ.

ಶ್ರೀ ಜಿ. ಶಿವನಂಜಪ್ಪ.—೧೯೮೩ ರಿಂದ ೮೫ರತನಕ ಜೊತೆಯಲ್ಲೇ ಇದ್ದು ಅವರ ಪಾಲಿಸಿಗಳನ್ನು ಒಪ್ಪಿಕೊಂಡಿದ್ದಿರಲ್ಲ ಅದು ಮರೆತುಹೋಯಿತೇನು ? ಈಗ ವಿತಂಡ ವಾದ ಮಾಡುತ್ತಿದ್ದೀರಿ. ಆ ಕಡೆ ಅವರನ್ನು ಬಯ್ಯುತ್ತೀರಿ. ಈ ಕಡೆ ರಾಜೀವಗಾಂಧಿಯವರನ್ನೂ ಬಯ್ಯುತ್ತೀರಿ. ನೀವು ಚುನಾವಣಾ ಸಂಬಂಧವಾಗಿ ಹೊಂದಾಣಿಕೆ ಮಾಡಿಕೊಂಡಿರಲಿಲ್ಲವೆ ? ಈಗ ಪೇಪರ್‌ನಲ್ಲಿ ದೊಡ್ಡದಾಗಿ ಬರಬೇಕು ಎಂದು ಮಾತನಾಡುತ್ತೀರಿ ಈಗ ಪಾರ್ಲಿಮೆಂಟ್‌ನಲ್ಲಿ ನಿಮ್ಮ ಪ್ರತಿನಿಧಿಗಳು ಅಲ್ಲಿ ಇದ್ದಾರೆ. ಈಗ ಇವರು ಶ್ರೀ ರಾಜೀವ್‌ಗಾಂಧಿಯವರು ಪೊಳ್ಳು ಆಶ್ವಾಸನೆಗಳನ್ನು ಕೊಟ್ಟರು ಎಂದು ಹೇಳಿದ್ದಾರೆ. ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಶ್ರೀ ರಾಜೀವಗಾಂಧಿಯವರು ಇಲ್ಲಿ ಇಲ್ಲಾ ಆದ್ದರಿಂದ ಮಾನ್ಯ ಸದಸ್ಯರು ಶ್ರೀ ರಾಜೀವಗಾಂಧಿ ಬಗೆ ಏನು ಮಾತನಾಡಿದ್ದಾರೆ ಪೊಳ್ಳು ಆಶ್ವಾಸನೆ ಅಂತ ಏನು ಹೇಳಿದ್ದಾರೆ. ಅದನ್ನು ಕಡತದಿಂದ ತೆಗೆದು ಹಾಕಬೇಕೆಂದು ಹೇಳುತ್ತೇನೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಅದು ಅನ್‌ಪಾರ್ಲಿಮೆಂಟರಿ ಪದ ಅಲ್ಲ.

ಶ್ರೀ ಜಿ.ಎಸ್ ಶಿವನಂಜಪ್ಪ.—ಅವರು 'ಪೊಳ್ಳು ವಂಚನೆ' ಎಂದು ಹೇಳಿದ್ದಾರೆ. ಆ ಪದಗಳನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು. ಅದನ್ನು ಎಕ್ಸಪಂಚ್ ಮಾಡಬೇಕು.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ...

ವೈಸ್ ಚೇರ್ಮನ್.—ನೀವು ಬೇಗ ಮುಗಿಸಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ಏನು ಸಮಯವನ್ನು ಕೊಟ್ಟಿದ್ದೀರಿ, ಅದನ್ನು ವ್ಯಯ ಮಾಡುವುದಕ್ಕೆ ನಾನು ಹೋಗುವುದಿಲ್ಲ. ನಾನು ಹೇಳಿದ್ದು ಏನು ಎಂದರೆ, ಕೇಂದ್ರ ಸರ್ಕಾರದಲ್ಲಿರ ತಕ್ಕಂಥ ಸಂದರ್ಭದಲ್ಲಿ ಅವಕಾಶ ಸಿಕ್ಕಿದಾಗ ಮೊದಲು ನಾಲ್ಕೂವರೆ ವರ್ಷದಲ್ಲಿ ಜವಾಹರ್ ರೋಜಗಾರ್ ಯೋಜನೆಯನ್ನು ತಂದು ಜನತೆಯು ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಿ ಮತ್ತೊಮ್ಮೆ ಅಧಿಕಾರದಲ್ಲಿ ಬರುತ್ತೇನೆ ಓಟುಕೊಡಿ ಎಂದು ಈ ದೇಶದ ಮಾಜಿ ಪ್ರಧಾನಿ ತನ್ನ ಅಧಿಕಾರ ಮುಗಿದಂಥ ಸಂದರ್ಭದಲ್ಲಿ ಹೊಸ ಹೊಸ ಕಾರ್ಯಕ್ರಮಗಳನ್ನು ತಂದು ಪೊಳ್ಳು ಘೋಷಣೆ ಮಾಡಿ ಅಧಿಕಾರಕ್ಕೆ ಬರುವಂಥ ಪ್ರಯತ್ನ ಮಾಡಿದದ್ದು ಸರಿಯಲ್ಲ. ಅದಕ್ಕೆ ಜನ ತಕ್ಕ ಪಾಠ ಕಲಿಸಿದ್ದಾರೆ, ಇದರಲ್ಲಿ ಮಾನ್ಯ ಸದಸ್ಯರಿಗೆ ನೋವು ಉಂಟುಮಾಡತಕ್ಕ ಅನ್ ಪಾರ್ಲಿಮೆಂಟರಿ ಶಬ್ದ ಏನಿದೆ ದಯವಿಟ್ಟು ಹೇಳಿ ಸ್ವಾಮಿ.

ಶ್ರೀ ಜಿ. ಎಸ್. ಶಿವನಂಜಪ್ಪ.—ಅಧ್ಯಕ್ಷರೇ. ೧೯೮೩ ರಿಂದ ೧೯೮೮ರ ತನಕ ಶ್ರೀ ಯಡಿಯೂರಪ್ಪ ಅವರ ಪಾರ್ಟಿ ಜನತಾಪಕ್ಷದೊಳಗೆ ಇತ್ತು. ಆವಾಗ ಮಂಡಲ ಪಂಚಾಯತ್, ಜಿಲ್ಲಾ ಪರಿಷತ್ ಆ್ಯಕ್ಟ್ ಬಂದಾಗ ಅದರಲ್ಲಿ ಏಕೆ ಇದನ್ನು ಅಳವಡಿಸಲಿಲ್ಲ ? ಆಮೇಲೆ ಚುನಾವಣೆ ಆದಮೇಲೆ ಒಂದು ಕಾಸು ಕೂಡ ಮಂಡಲ ಪಂಚಾಯಿತಿಗೆ ಕೊಟ್ಟಿಲ್ಲ. ಆಗ ಏಕೆ ಇದನ್ನು ಕೇಳಲಿಲ್ಲ ? ಇದನ್ನು ನೋಡಿ, ಜಿಲ್ಲಾ ಪರಿಷತ್ತು ಬಂತು, ಮಂಡಲ ಪಂಚಾಯತಿ ಬಂತು. ಇವರ ಮಾನ ಮರ್ಯಾದೆ ಹೋಗಬಾರದು ಎನ್ನುವ ದೃಷ್ಟಿಯಿಂದ ಕೃಪೆಯಿಟ್ಟು ಕೊಟ್ಟಿದ್ದಾರೆ. ಅದಕ್ಕೆ ನೀವು ಋಣಿಯಾಗಿರಬೇಕು. ಇವತ್ತು ನೀವು ನಿಮ್ಮ ಕ್ಷೇತ್ರದಲ್ಲಿ ತಿರುಗಾಡುತ್ತಿರುವುದು ಈ ಕಾರಣದಿಂದಲೇ ಇದನ್ನು ನೀವು ಅರ್ಥಮಾಡಿಕೊಳ್ಳಬೇಕು.

ಒಬ್ಬ ಮಾನ್ಯ ಸದಸ್ಯರು.—ನೀವು ಚುನಾವಣಾ ಪ್ರಣಾಳಿಕೆಯಲ್ಲಿ ಆಶ್ವಾಸನೆಗೆ ಕೊಟ್ಟು ೧೯ ಜನರನ್ನು ನಿಲ್ಲಿಸಿದ್ದಿರಲ್ಲ: ಏನಾಯಿತು ?

ಶ್ರೀ ಬಿ. ಎಸ್. ಯಡಿಯೂರಪ್ಪ.—೧೯೮೩ ರಿಂದ ೧೯೮೮ರತನಕ ಜನತಾ ಸರ್ಕಾರ ಇತ್ತು ಆ ಸಮಯದಲ್ಲಿ ಬೇಷರತ್ತಾಗಿ ನಾವು ಬೆಂಬಲವನ್ನು ಕೊಟ್ಟೆವು. ಬಹುಶಃ ಈ ರಾಜ್ಯದ ಇತಿಹಾಸದಲ್ಲಿ ಒಂದು ರಾಜ್ಯ ಸರ್ಕಾರ ಜನಪರ ಕಾರ್ಯಕ್ರಮಗಳನ್ನು ರೂಪಿಸಿ ಜನ ನೆಮ್ಮದಿಯಿಂದ ನಿಟ್ಟುಸಿರು ಬಿಟ್ಟಿದ್ದು ಈ ಅವಧಿಯಲ್ಲಿ ಇದನ್ನು ರಾಜ್ಯದ ಮತದಾರ ಜ್ಞಾಪಕದಲ್ಲಿಟ್ಟುಕೊಂಡಿದ್ದಾರೆ. ನನ್ನ ಮಾತನ್ನು ಕೇಳುವ ಇಚ್ಛೆ ನಿಮಗೆ ಇಲ್ಲದಿದ್ದರೆ ನಾನು ಏನು ಮಾಡಲಿ ?

ಮಾನ್ಯ ಸದಸ್ಯರು ಒಂದು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ೧೯ ಜನ ನಮ್ಮವರು ಸ್ಪರ್ಧಿಸಿದ್ದರು. ಕೇಂದ್ರದಲ್ಲಿ, ರಾಜ್ಯದಲ್ಲಿ ಕೃಷಿಗೆ ಸಂಬಂಧಪಟ್ಟ ಎಲ್ಲಾ ತರಹದ ಸಾಲಗಳನ್ನು ಮನ್ನಾ ಮಾಡುತ್ತೇವೆ ಎಂದು ಘೋಷಣೆ ಮಾಡಿದ್ದೇವೆ ಈ ದೇಶದಲ್ಲಿ ಮೊದಲಬಾರಿಗೆ ಭಾರತೀಯ ಜನತಾ ಪಾರ್ಟಿ ರೈತರ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ರೈತರು ಉಳಿದರೆ ಮಾತ್ರ ಹಳ್ಳಿ ಉಳಿಯುತ್ತದೆ, ಹಳ್ಳಿ ಉಳಿದರೆ ದೇಶ ಉಳಿಯುತ್ತದೆ ಎನ್ನುವ ಹಿನ್ನೆಲೆಯಲ್ಲಿ ಅವರ ಎಲ್ಲಾ ಸಾಲವನ್ನು ಮನ್ನಾ ಮಾಡುತ್ತೇವೆ ಎಂದು ಘೋಷಣೆ ಮಾಡಿತ್ತು.

ಇವತ್ತಿನ ಕೇಂದ್ರ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ೨-೩ ದಿವಸದಲ್ಲಿ ಈ ದೇಶದಲ್ಲಿ ಇರುವಂಥ ರೈತರ ೧೦ ಸಾವಿರ ರೂಪಾಯಿಯೊಳಗಿನ ಎಲ್ಲಾ ತರಹದ ಕೃಷಿ ಸಾಲವನ್ನು, ಅದೇ ರೀತಿ ನೇಕಾರರ ಸಾಲವನ್ನು ಮನ್ನಾ ಮಾಡುತ್ತೇವೆಂದು ಘೋಷಣೆ ಮಾಡಲಿಲ್ಲವೇ. ಸ್ವಾತಂತ್ರ್ಯ ಬಂದು ೪೨ ವರ್ಷಗಳಲ್ಲಿ ನಿಮ್ಮ ಕಾಲದಲ್ಲಿ ಇಂತಹ ಧೈರ್ಯ ಪ್ರಯತ್ನ ಮಾಡಲಿಲ್ಲ ಇವತ್ತು ನಾನು ರಾಜ್ಯಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ರೈತರ ಸಾಲದ ಬಗ್ಗೆ ದೀರ್ಘವಾಗಿ ಚರ್ಚೆ ಮಾಡುತ್ತೇವೆ ಆದರೂ ಈ ರಾಜ್ಯದ ಜನರಲ್ಲಿ ವಿಶ್ವಾಸ ಮೂಡಿಸುವುದರಲ್ಲಿ ಬಿ.ಜೆ.ಪಿ.ನವರು ಯಶಸ್ವಿಯಾಗಿಲ್ಲ, ಬರುವ ೫ ವರ್ಷಗಳಲ್ಲಿ ಜನರಲ್ಲಿ ವಿಶ್ವಾಸ ಮೂಡಿಸಿ, ಬಿ.ಜೆ.ಪಿ.ಯವರು ಸರ್ಕಾರ ನಡೆಸುತ್ತಾರೆ, ಜನಪರ ಕಾರ್ಯಕ್ರಮ ರೂಪಿಸುತ್ತಾರೆ, ರೈತನ ಹಿತವನ್ನು ಕಾಪಾಡುತ್ತಾರೆ ಜನ ನೆಮ್ಮದಿಯಿಂದ ಜೀವನ ಮಾಡುವಂಥ ಕಾಲ ಬರುತ್ತದೆ. ನಮ್ಮ ರಾಜ್ಯದ ರೈತ ಬಹಳ ಬೇಗ ಮೋಸ ಹೋಗುತ್ತಾನೆ. ಚುನಾವಣೆ ಸಮಯದಲ್ಲಿ ಕೊಡುವಂಥ ಪೊಳ್ಳು ಆಶ್ವಾಸನೆಗಳಿಗೆ ಮೋಸ ಹೋಗುವುದಿಲ್ಲ. ರೈತ ಕೃಷಿ ಕಾರ್ಮಿಕರು, ಹರಿಜನ ಗಿರಿಜನ ಬಂಧುಗಳು, ಸ್ವಾತಂತ್ರ್ಯ ಬಂದು ೪೨ ವರ್ಷಗಳಲ್ಲಿ ನಿಮ್ಮ ಬೂಟಾಟಿಕೆ ಮಾತುಗಳಿಗೆ ಮೋಸ ಹೋದರೇ ? ಆದ್ದರಿಂದ ನಾವು ಜಾಗೃತಿ ಮೂಡಿಸುತ್ತೇವೆ ಮುಂದೆ ನಾವು ಒಳ್ಳೆಯ ಆಡಳಿತ ನಡೆಸುತ್ತೇವೆ, ಎಂಬ ಆಶ್ವಾಸನೆಯನ್ನು ಈ ರಾಜ್ಯದ ಜನತೆಗೆ ಕೊಡುತ್ತಾ, ರಾಜ್ಯಪಾಲರ ಭಾಷಣಕ್ಕೆ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ರಾಜೀವ್‌ಗಾಂಧಿಯವರ ಜವಹರ್ ರೋಜ್‌ಗಾರ್ ಯೋಜನೆಯ ಹಣ ಬಂದಿದ್ದರಿಂದಲೇ, ಮಂಡಲದವರು ತಲೆ ಎತ್ತಿ ನಡೆಯಬೇಕಾಯಿತು. ಆ ಹಣ ಬರದೇ ಇದ್ದರೆ ಅವರು ಮನೆಯೊಳಗೆ ಕುಳಿತುಕೊಳ್ಳಬೇಕಾಗಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ.—ಜವಾಹರ್ ರೋಜ್‌ಗಾರ್ ಯೋಜನೆ ರಾಜಕಾರಣ ಮಾಡುವುದಕ್ಕೆ ಬಂತೇ ವಿನಹ ಜನಹಿತ ಮಾಡುವುದಕ್ಕೆ ಬರಲಿಲ್ಲ ಚುನಾವಣಾ ಸಮಯದಲ್ಲಿ ಮಾಮೂಲು ವಸೂಲ್ಮಾಡುವುದಕ್ಕೆ, ಇದರ ದುರ್ಲಾಭ ಪಡೆಯುವುದಕ್ಕೋಸ್ಕರ ಈ ಯೋಜನೆ ಬಂದಿದ್ದು, ಈ ಹಣ ಅಪವ್ಯಯವಾಗಿದೆ. ನೀವು ಬೇಕಾದರೆ ತನಿಖೆ ಮಾಡಿಸಿ ಸಾಬೀತು ಮಾಡುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ (ಸಂಡೂರು).—ಮಾನ್ಯ ಅಧ್ಯಕ್ಷರೇ, ಈವತ್ತು ವಿರೋಧ ಪಕ್ಷಗಳಿಂದ ಎರಡು ಮುಖ್ಯವಾದ ಭಾಷಣಗಳನ್ನು ನಾನು ಬಹಳ ಲಕ್ಷ್ಯ ಕೊಟ್ಟು ಕೇಳಿದೆ. ಮಾನ್ಯ ದೇಶಪಾಂಡೆಯವರು ರಾಜ್ಯಪಾಲರ ಭಾಷಣ ಒಂದು ಮನವಿಯ ಪಟ್ಟಿ ಇದ್ದಂತೆ ಎಂದು ಟೀಕಿಸಿ ಭಾಷಣವನ್ನು ಪ್ರಾರಂಭ ಮಾಡಿದರು. ಮಾನ್ಯ ಯಡಿಯೂರಪ್ಪನವರೂ ಇದು ಒಂದು ಮೆಮೊರ್ಯಾಂಡಂ ಇದ್ದ ಹಾಗೆ ಎಂದು ಹೇಳಿದರು. ಇದಕ್ಕೆ ಉತ್ತರವಾಗಿ ನಾನು ಹೇಳುವುದು ಇಷ್ಟೇ. ಕೇಂದ್ರಸರ್ಕಾರಕ್ಕೆ ವಿಶೇಷವಾಗಿ, ಕರ್ನಾಟಕದ ಬಗ್ಗೆ ಏನು ಜವಾಬ್ದಾರಿ ಇದೆ. ಇದರ ಬಗ್ಗೆ ಸ್ಪಷ್ಟವಾಗಿ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದರೆ ಇದು ನಮ್ಮ ಹಕ್ಕಿದೆ, ಇದು ಯಾವ ಅಚ್ಚುಪತ್ರ ಅಲ್ಲ ಎಂಬ ಮಾತನ್ನು ಹೇಳುತ್ತೇನೆ. ಅವರ ಭಾಷಣವನ್ನು ಕೇಳಿದರೆ. ಎಷ್ಟೋ ಉದಾಹರಣೆಗಳನ್ನು ಕೊಟ್ಟರು ಈ ಕ್ರೆಡಿಟ್ ನಬಾರ್ಡ್‌ನವರು ಏನು ಮಾಡುತ್ತಾರೆ, ಆರ್.ಬಿ.ಐ. ನವರು ಏನು ಮಾಡುತ್ತಾರೆ, ಕೇಂದ್ರದ ಮುಂದೆ ಏನು ನಡೆಯುತ್ತಿದೆ ಅದರಲ್ಲಿರತಕ್ಕಂಥ ಒಂದು ಗೊಂದಲಮಯ ವಾತಾವರಣದ ಬಗ್ಗೆ ಪ್ರಸ್ತಾಪ ಮಾಡಿದರು. ನಾನಾದರೂ ಹೇಳುತ್ತೇನೆ, ನಮ್ಮ ದೇಶದ ಪ್ರಧಾನ ಮಂತ್ರಿಯವರು ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಹಣಕಾಸಿನ ಮಂತ್ರಿಗಳು ಇನ್ನೊಂದು ರೀತಿಯ ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ೧೪ ಸಾವಿರ ಕೋಟಿ ಇದರಲ್ಲಿ ಖರ್ಚಾಗುತ್ತದೆ. ಈ ರೀತಿ ನಮ್ಮ ದೇಶದ ನಾಯಕರು, ರಾಷ್ಟ್ರೀಯ ಸಂಘ ಸಂಸ್ಥೆಗಳು ಬೇರೆ ಬೇರೆ ಹೇಳಿಕೆಯನ್ನು ಕೊಟ್ಟರೆ ಗೊಂದಲಮಯ ವಾತಾವರಣ ಹುಟ್ಟುತ್ತದೆ. ಆದಕ್ಕೋಸ್ಕರ ರಾಷ್ಟ್ರದಲ್ಲಿ ರಾಷ್ಟ್ರೀಯ ಕ್ರೆಡಿಟ್ ಪಾಲಿಸಿ ತರಬೇಕೆಂದು ನಾವು ಏನಾದರೂ ರಾಜ್ಯಪಾಲರ ಭಾಷಣದಲ್ಲಿ ಬರೆದಿದ್ದರೆ, ಇದು ಮನವಿ ಪತ್ರ ಎಂದು ತಿಳಿದು ಕೊಳ್ಳುವುದಕ್ಕೆ ಆಸ್ಪದವಾಗುವುದಿಲ್ಲ. ನನ್ನನ್ನು ಕೇಳಿದರೆ ಈ ಮಾತನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಏತಕ್ಕೆಂದರೆ ಸಾಲವನ್ನು ವಜಾ ಮಾಡುವಂತಹ, ಮನ್ನಾ ಮಾಡುವಂತಹ ವಿಷಯ ಒಂದು ರಾಜ್ಯಕ್ಕೆ ಸಂಬಂಧಪಟ್ಟದ್ದಲ್ಲ. ಇವತ್ತು ಫೆಡರಲ್ ಸ್ಟ್ರಕ್ಚರ್ ಇದ್ದರೂ ಕೂಡಾ ಹಣಕಾಸಿನ ದೃಷ್ಟಿಯಿಂದ ಒಂದು ಒಮ್ಮತದ ವಿಚಾರ ಈದೇಶದಲ್ಲಿ ಇದೆ. ಆದಕಾರಣ ರಾಷ್ಟ್ರಮಟ್ಟದಲ್ಲಿ ಈ ತೀರ್ಮಾನವನ್ನು ಸ್ಪಷ್ಟವಾದ ರೀತಿ ತೆಗೆದುಕೊಂಡರೆ ಮಾತ್ರ ರಾಜ್ಯ ಮಟ್ಟದಲ್ಲೂ ಸೂಕ್ತವಾದ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಬಸವಲಿಂಗಪ್ಪನವರು ಒಂದು ಮಾತನ್ನು ಹೇಳಿದರು. ಈ ದೇಶದ ಪ್ರಗತಿಯನ್ನು ಕಾಪಾಡಿಕೊಂಡು ಹೋಗಬೇಕಾದರೆ ಅದರಲ್ಲಿ ಸಂಬಳಗಳು ಎಷ್ಟಿರಬೇಕು ಎಂದು ನಾವು ಯೋಚನೆ ಮಾಡಬೇಕು, ಇಲ್ಲದೇ ಹೋದರೆ ಈ ದೇಶದಲ್ಲಿ ಯದ್ವಾತದ್ವಾ ನಡೆಯುವುದಕ್ಕೆ ಸಾಧ್ಯ ಇದ ಎಂದು ಹೇಳಿದರು. ನಮ್ಮ ದೇಶದಲ್ಲಿ ಒಂದು ನ್ಯಾಷನಲ್ ವೇಜ್ ಪಾಲಿಸಿ ಇರಬೇಕೆಂದು ನಾನಾದರೂದ ಹೇಳುತ್ತೇನೆ. ಈ ಮಾತನ್ನು ನಾವೇನಾದರೂ ಹೇಳಿದರೆ.

ರಾಜ್ಯಪಾಲರ ಭಾಷಣದಲ್ಲಾಗಲೀ, ನಮ್ಮ ಸರಕಾರದ ವತಿಯಿಂದ ಉತ್ತರ ಕೊಡುವಾಗ ಆಗಲೀ ಹೇಳಿದರೆ ಅದು ತಪ್ಪಾಗುವುದಿಲ್ಲ ಇಂತಹ ಎಷ್ಟೋ ಮಾತುಗಳನ್ನು ಇನ್ನೂ ಗಟ್ಟಿಯಾಗಿ ನಾವು ಹೇಳಬೇಕೆಂದು ನನ್ನ ಅಭಿಪ್ರಾಯ ಇದೆ. ಯಡಿಯೂರಪ್ಪನವರು ವಿಜಯನಗರ ಉಕ್ಕಿನ ಕಾರ್ಖಾನೆಯ ಬಗ್ಗೆ ಪ್ರಸ್ತಾಪ ಮಾಡಿದರು ರಾಜ್ಯಪಾಲರ ಭಾಷಣದಲ್ಲಿ ಕೊನೆಯ ಭಾಗದಲ್ಲಿ ಬಹಳ ಸಂಕ್ಷಿಪ್ತವಾಗಿ ಇದರ ಪ್ರಸ್ತಾಪವನ್ನು ಅವರು ಮಾಡಿದ್ದಾರೆ. ಈಗ ಇದು ನನ ಕ್ಷೇತ್ರವಾದ ಸಂಡೂರಿನಲ್ಲಿ ಆಗತಕ್ಕಂಥ ಕಾರ್ಖಾನೆ. ಅಲ್ಲಿ ಆಗಬೇಕಾಗುತ್ತದೆ ಆದಕಾರಣ ಸಂಡೂರಿನ ದೃಷ್ಟಿಯಿಂದ ಅಷ್ಟೇ ಅಲ್ಲ, ಬಳ್ಳಾರಿಯಿಂದ ದೃಷ್ಟಿಯಿಂದ ಅಷ್ಟೇ ಅಲ್ಲ, ಇಡೀ ಕರ್ನಾಟಕದ ದೃಷ್ಟಿಯಿಂದ ಹಾಗೂ ದೇಶದ ದೃಷ್ಟಿಯಿಂದ ಇದು ಅತೀ ಮುಖ್ಯವಾದ ಒಂದು ಯೋಜನೆ ಇದರ ಬಗೆ ಒಂದೆರಡು ಮಾತನ್ನು ಹೇಳಬೇಕಾಗುತ್ತದೆ. ಏತಕ್ಕೆಂದರೆ ಇದಕ್ಕೆ ಇಪ್ಪತ್ತು ವರ್ಷದ ಇತಿಹಾಸ ಇದೆ. ಇಪ್ಪತ್ತು ವರ್ಷದ ನಂತರ ಮುಂಬರುವ ಹತ್ತು ವರ್ಷಗಳಲ್ಲಿ ಈ ಕಾರ್ಖಾನೆಯನ್ನು ಸಂಪೂರ್ಣವಾಗಿ ಕಾರ್ಯಗತ ಮಾಡಬೇಕೆಂದು ನಾವು ಸಂಕಲ್ಪ ಮಾಡುವುದಾದರೆ ಕಳೆದ ಇಪ್ಪತ್ತು ವರ್ಷದಲ್ಲಿ ಏನಾಯಿತು ಎಂಬುವನ್ನು ಸ್ವಲ್ಪಮಟ್ಟಿಗೆ ನಾವು ತಿಳಿದುಕೊಳ್ಳಬೇಕಾಗುತ್ತದೆ. ನಾನು ಈ ಸದನಕ್ಕೆ ಕೆಲವು ವಿಷಯಗಳನ್ನು ನೆನಪು ಮಾಡಿಕೊಡಬೇಕಾಗುತ್ತದೆ. ಇದು ನನ್ನ ಕರ್ತವ್ಯ. ೨೦ ವರ್ಷದಲ್ಲಿ ಈ ಕಾರ್ಖಾನೆಯ ಬಗ್ಗೆ ಏನೇನಾಯಿತು ಎಂಬುದನ್ನು ನಾನು ಸ್ವಲ್ಪಮಟ್ಟಿಗೆ ತಿಳಿದುಕೊಂಡಿದ್ದೇನೆ. ೧೯೬೮ರಲ್ಲಿ ನಾನು ಈ ಸದನದ ಎಸ್ಟಿಮೇಟ್ ಕಮಿಟಿಯ ಚೇರ್ಮನ್ ಆಗಿದ್ದಾಗ, ಭದ್ರಾವತಿ ಕಾರ್ಖಾನೆಯ ಬಗ್ಗೆ ಒಂದು ವರದಿಯನ್ನು ತಯಾರು ಮಾಡಿದಾಗ, ಅದರಲ್ಲಿ ಸಂಡೂರು ಹೊಸಪೇಟೆ ಪ್ರದೇಶದಲ್ಲಿ ಆಗಬಹುದಾದ ಒಂದು ಉಕ್ಕಿನ

ಕಾರ್ಖಾನೆಯ ಬಗ್ಗೆ ಒಂದು ಮಾನೋಗ್ರಾಫ್‌ನ್ನು ತಯಾರು ಮಾಡಿ ಸೇರಿಸಿದ್ದೆವು. ಅದನ್ನು ನಮ್ಮ ಪ್ರಧಾನಿ ಇಂದಿರಾಗಾಂಧಿಯವರಿಗೆ ಕೊಟ್ಟಾಗ ಅವರು ಸಂತೋಷಪಟ್ಟರು. ಕರ್ನಾಟಕದಲ್ಲಿ ಒಂದು ಬೃಹತ್ ಪ್ರಮಾಣದ ಉಕ್ಕಿನ ಕಾರ್ಖಾನೆ ಆಗಬೇಕೆಂಬ ಬಗ್ಗೆ ಅವರಿಗೆ ಬಹಳ ಆಸಕ್ತಿ ಇತ್ತು. ಆ ಕಾಲಕ್ಕೆ ಡಿ. ಪಿ. ಧರ್ ಇದ್ದರು. ಅವರೂ ಬಹಳಷ್ಟು ಯೋಚನೆ ಮಾಡಿದರು ೧೯೭೧ರಲ್ಲಿ ಈ ಕಾರ್ಖಾನೆಯ ಕೆಲಸ ಅಥವಾ ಶಂಕುಸ್ಥಾಪನೆ ಆಯಿತು. ಇದನ್ನು ಈ ಕೆಲಸದ ಪ್ರಾರಂಭ ಎಂದು ಕರೆಯಬಹುದು, ರಾಜ್ಯಪಾಲರ ಭಾಷಣದಲ್ಲಿ ಈ ಕಾರ್ಖಾನೆಗೆ ಅನುಮೋದನೆ ಸಿಗಬೇಕು ಎಂಬ ಮಾತನ್ನು ಸೇರಿಸಿದ್ದಾರೆ. ನನ್ನನ್ನು ಕೇಳಿದರೆ ಅನುಮೋದನೆಯ ಪ್ರಶ್ನೆ ಬರುವುದಿಲ್ಲ. ಕಾರಣ ಇದು ಈಗಾಗಲೇ ಪ್ರಾರಂಭವಾಗಿದೆ ಆದರೆ ಇದನ್ನು ಯಶಸ್ವಿಯಾಗಿ ಪೂರೈಸಲಿಕ್ಕೆ ಇನ್ನೂ ಸಾಧ್ಯವಾಗಿಲ್ಲ. ಇಂದಿರಾಗಾಂಧಿಯವರು ೧೯೭೧ರಲ್ಲಿ ಈ ಕೆಲಸ ಪ್ರಾರಂಭಮಾಡಿದಾಗ, ಇದು ಖಂಡಿತವಾಗಿ ರಾಜಕೀಯ ಕ್ಕೋಸ್ಕರ ಮಾಡಿದ್ದಲ್ಲ. ಆ ಕಾಲಕ್ಕೆ ಏನು ಯೋಚನೆ ಇತ್ತು ಎಂದರೆ, ಎಲ್ಲಾ ಉಕ್ಕಿನ ಕಾರ್ಖಾನೆಗಳು ಉತ್ತರ ಹಿಂದೂಸ್ಥಾನದಲ್ಲಿ ಈ ದೇಶದ ಪೂರ್ವ ಭಾಗದಲ್ಲಿ ಇವೆ ಅಲ್ಲಿಯೇ ಮಾಡಿದರೆ ಸಮತೋಲನ ವ್ಯವಸ್ಥೆಗೆ ಕಷ್ಟವಾಗುತ್ತದೆ. ದಕ್ಷಿಣ ಹಿಂದೂಸ್ಥಾನದಲ್ಲಿ ಉಕ್ಕಿನ ಕಾರ್ಖಾನೆ ಆಗಬೇಕೆಂಬುದು ಮೂಲ ಭೂತವಾದ ಮಾತು. ಅದರ ಜೊತೆಗೆ ಕೇಂದ್ರ ಸರಕಾರದವರಾಗಲೀ, ಎಕ್ಸ್‌ಪರ್ಟ್ಸ್ ಆಗಲೀ, ನ್ಯಾಷನಲ್ ಕೌನ್ಸಿಲ್‌ನವರಾಗಲೀ ಅವರು ಏನು ಹೇಳಿದರು ಎಂದರೆ ನಮ್ಮ ದೇಶದಲ್ಲಿ ಪ್ರತಿ ವರ್ಷ ಒಂದು ಮಿಲಿಯನ್ ಟನ್ ಉಕ್ಕು ಜಾಸ್ತಿ ಮಾಡುತ್ತಾ ಹೋಗಬೇಕಾಗುತ್ತದೆ ಎರಡು ವರ್ಷಕ್ಕೆ ಎರಡು ಮಿಲಿಯನ್ ಟನ್ ಬೇಕಾಗುತ್ತದೆ. ಆದ್ದರಿಂದ ನಮ್ಮ ದೇಶದಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪನೆ ಮಾಡ ಬೇಕಾಗುತ್ತದೆ ಎಂದು ಹೇಳಿದರು.

ಅಂದಿನ ಸ್ಟೀಲ್ ಮಿನಿಸ್ಟರ್ ಪಾರ್ಲಿಮೆಂಟ್‌ನಲ್ಲಿ ಸ್ಪಷ್ಟವಾಗಿ ಹೇಳಿಕೆ ಕೊಟ್ಟಿದ್ದಾರೆ. ಅದೇ ಪ್ರಕಾರ ನಮ್ಮ ದೇಶದಲ್ಲಿ ೧೯೭೧-೭೨ರಲ್ಲಿ ೭ ದಶಲಕ್ಷ ಮೆಟ್ರಿಕ್ ಟನ್ ಉಕ್ಕಿನ ಉತ್ಪಾದನೆ ಇತ್ತು, ೧೯೮೦-೮೧ರಲ್ಲಿ ಅದು ೧೫ ದಶ ಲಕ್ಷ ಮೆಟ್ರಿಕ್ ಟನ್ ಆಗಬೇಕಾಗಿದೆ. ರಾಷ್ಟ್ರದಲ್ಲಿ ಉಕ್ಕಿನ ಅವಶ್ಯಕತೆ ಇದೆ ಎಂದು ಒಂದು ಆರ್ಥಿಕ ಲೆಕ್ಕಾಚಾರದ ಮೇಲೆ ಪ್ರಾರಂಭ ಮಾಡಿರತಕ್ಕಂಥಾದ್ದು. ಆ ಕಾಲದಲ್ಲಿ ೨೮ನೇ ಜುಲೈ ೧೯೭೧ರಲ್ಲಿ ಆಗಿನ ಸ್ಟೀಲ್ ಮಿನಿಸ್ಟರ್ ಮೋಹನ ಕುಮಾರ್ ಮಂಗಳಂರವರು ನನಗೆ ಒಂದು ಕಾಗದವನ್ನು ಬರೆದಿದ್ದಾರೆ. ಅದು ಈ ರೀತಿ ಇದೆ.

> "The proposed capacity of the Hospet Steel Plant is 2 million tonnes. The possibility of expansion of the capacity will be examined at the appropriate time"

ಎಂಬುದನ್ನು ಒಪ್ಪಿಕೊಂಡು ತೀರ್ಮಾನದ ರೀತಿಯಲ್ಲಿ ಕಾಗದ ಬರೆದಿದ್ದು, ಎಷ್ಟೋ ಕೆಲಸ ಇದರ ಬಗ್ಗೆ ನಡೆದಿದೆ, ನಾನು ಹಣಕಾಸಿನ ಮಂತ್ರಿಯಾಗಿದ್ದಾಗ ಅಂದರೆ ೧೯೭೩ರಲ್ಲಿ ೪,೫೦೦ ಹೆಕ್ಟೇರ್ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಸಾಧ್ಯವಾಯಿತು. ಕೇಂದ್ರ ಸರ್ಕಾರ ನಮಗೆ ೬೫ ಲಕ್ಷ ರೂಪಾಯಿಗಳನ್ನು ಕೊಟ್ಟರು. ೧೯೭೪ರಲ್ಲಿ ನನ್ನ ಬಜೆಟ್ ಭಾಷಣವನ್ನು ನೋಡಿದರೆ, ಗೊತ್ತಾಗುತ್ತದೆ. ಆ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಈ ಯೋಜನೆಗೆ ೧೨೫ ಕೋಟಿ ರೂಪಾಯಿ ಗಳನ್ನು ಮಂಜೂರು ಮಾಡಿದ್ದನ್ನು ಅಲ್ಲಿ ನಾನು ಪ್ರಸ್ತಾಪ ಮಾಡಿದ್ದೇನೆ. ನಂತರ ಈ ಕಾರ್ಖಾನೆ ಏತಕ್ಕೆ ಕಾರ್ಯಗತ ಆಗಲಿಲ್ಲ ಎನ್ನುವುದು ದೊಡ್ಡ ಪ್ರಶ್ನೆಯಾಗಿದೆ. ಇದರ ಬಗ್ಗೆ ನಾನು ಹೇಳ ಬೇಕಾಗುತ್ತದೆ. ೧೯೭೪ರ ನಂತರ ಇಡೀ ಪ್ರಪಂಚದಲ್ಲಿ ಸ್ಟೀಲ್ ರಿಸೆಶನ್ ಇತ್ತು. ಜಪಾನಿನಲ್ಲಿ ಉಕ್ಕನ್ನು ಕಡಿಮೆ ಮಾಡಿಕೊಳ್ಳುವಂತಹ ಪ್ರಸಂಗ ಆ ದೇಶದಲ್ಲಿ ಬಂತು. ಆ ಒಂದು ಅಂಕಿಅಂಶಗಳನ್ನು ನಾನು ಕೊಡಬೇಕಾಗುತ್ತದೆ. ಜಪಾನಿನಲ್ಲಿ ೧೯೭೩ರಲ್ಲಿ ಉಕ್ಕಿನ ಉತ್ಪಾದನೆ ೧೨೦ ದಶ ಲಕ್ಷ ಮೆಟ್ರಿಕ್ ಟನ್ ಇತ್ತು ೧೯೮೭ರಲ್ಲಿ ಅದನ್ನು ೯೦ ದಶ ಲಕ್ಷ ಮೆಟ್ರಿಕ್ ಟನ್‌ಗೆ ಇಳಿಸಬೇಕಾಯಿತು. ಆಗ ನಮ್ಮ ದೇಶದಲ್ಲಿ ಪರಿಸ್ಥಿತಿ ಏನಿತ್ತು ? ಅದನ್ನು ಸಹ ಗಮನಿಸಬೇಕು. ೧೯೭೨-೭೩ರಲ್ಲಿ ೬ ದಶಲಕ್ಷ ಮೆಟ್ರಿಕ್ ಟನ್ ಇದ್ದದ್ದು ೧೯೭೭-೭೮ರಲ್ಲಿ ಅದು ೭ ದಶಲಕ್ಷ ಮೆಟ್ರಿಕ್ ಟನ್ ಆಯಿತು. ೧೯೭೨ರಿಂದ ೭೮ರವರೆಗೆ ಉತ್ಪಾದನೆ ಜಾಸ್ತಿಯಾಗುವಂತಹ ಅವಕಾಶ ಇರಲಿಲ್ಲ. ನಂತರ ೭-೮ ವರ್ಷಗಳಲ್ಲಿ ಅವಶ್ಯಕತೆ ಜಾಸ್ತಿ ಯಾಯಿತು. ಆಗ ಎಕ್ಸ್‌ಪ್ಯಾನ್‌ಷನ್ ಮಾಡಿದರು. ನಮ್ಮ ವಾದ ಇವತ್ತು ಏನೆಂದರೆ ಬರುವ ೧೦ ವರ್ಷಗಳಲ್ಲಿ ಖಂಡಿತವಾಗಿ ಉಕ್ಕಿನ ಉತ್ಪಾದನೆ ಜಾಸ್ತಿಯಾಗಬೇಕಾಗುತ್ತದೆ. ಅದು ಬೇರೆ ಏನ್ನುವಂತಹ ಮಾತು ಇಲ್ಲ. ನಮ್ಮ ದೇಶದಲ್ಲಿ ಇವತ್ತು ಆರ್ಥಿಕ ಪರಿಸ್ಥಿತಿ ಸುಧಾರಿಸುವುದಕ್ಕೆ ಆಗುವುದಿಲ್ಲ. ನಮ್ಮ ಸದನದಲ್ಲಿ ಮತ್ತು ಪಾರ್ಲಿಮೆಂಟ್‌ನಲ್ಲಿ ಈ ದೃಷ್ಟಿಯಿಂದ ಇದು ಇರಬೇಕೆಂ ಎನ್ನುವ ಪ್ರಸಂಗ ಬಂದಿದೆ. ನಮ್ಮ ಕರ್ನಾಟಕ ರಾಜ್ಯದ ವಿಜಯನಗರದ ಉಕ್ಕಿನ ಕಾರ್ಖಾನೆಗೆ ಆದ್ಯತೆ ಏನು ಇದೆ ಅದನ್ನು ಯಾರೂ ಮರೆಯಬಾರದು. ಅದನ್ನು ಬಿಟ್ಟು ಬೇರೆ ಎಲ್ಲಿಯಾದರೂ ಉಕ್ಕಿನ

ಕಾರ್ಖಾನೆಯನ್ನು ಸ್ಥಾಪನೆ ಮಾಡುವುದಕ್ಕೆ ಹೋದರೆ ಕರ್ನಾಟಕ ರಾಜ್ಯಕ್ಕೆ ಮಹಾ ದ್ರೋಹ ಬಗೆದಂತೆ, ಮೋಸ ಮಾಡಿದಂತೆ ಮತ್ತು ಅನ್ಯಾಯ ಮಾಡಿದಂತಾಗುತ್ತದೆ. ಇವತ್ತು ಧೈರ್ಯವಾಗಿ ಹೇಳುವಂತಹ ಪರಿಸ್ಥಿತಿಯಲ್ಲಿ ನಾವು ಇದ್ದೇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದು ಯಾರೂ ನಮ್ಮ ಮೇಲೆ ಅಥವಾ ನಮಗೆ ಮಾಡುವಂಥ ಉಪಕಾರ ಅಲ್ಲ. ಇದು ನಮಗೆ ನ್ಯಾಯವಾಗಿ ಸಿಗತಕ್ಕಂಥ ಹಕ್ಕು. ಇದು ನಮ್ಮ ಜನ್ಮ ಸಿದ್ಧವಾದ ಹಕ್ಕು ಎಂದು ಬರೆದಿದ್ದೇವೆ. ಇದು ಶ್ರೀಮತಿ ನಾಗರತ್ನಮ್ಮನವರಿಗೂ ಗೊತ್ತಿದೆ. ಒಂದು ಸಾವಿರ ದಶ ಲಕ್ಷ ಮೆಟ್ರಿಕ್ ಟನ್ ಉಕ್ಕು ಸಾಮರ್ಥ್ಯ ಯಾವ ಭಾಗದಲ್ಲಿ ಇದೆ ಅಲ್ಲಿ ಉಕ್ಕಿನ ಕಾರ್ಖಾನೆ ಆರ್ಥಿಕವಾಗಿ ಕೇಳುವುದು ನಮ್ಮ ಜನ್ಮ ಸಿದ್ಧವಾದ ಹಕ್ಕು. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ಶ್ರೀಮಾನ್ ರಾಜೀವ್‌ಗಾಂಧಿ ಯವರು ಕರ್ನಾಟಕಕ್ಕೆ ಬಂದಾಗ ಆಶ್ವಾಸನೆ ಕೊಟ್ಟರು. ಮತ್ತೆ, ಪೋತೇದಾರ್ ಅವರು ತೋರಣಗಲ್‌ಗೆ ಬಂದಿದ್ದಾಗ ಇದನ್ನು ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಿದರು. ಆ ಮಾತನ್ನು ಅವರು ಹೇಳಿದಾಗ ಯಾವ ರಾಜಕೀಯವೂ ಇರಲಿಲ್ಲ. ಶ್ರೀಮತಿ ಇಂದಿರಾಗಾಂಧಿಯವರು ಶಂಕುಸ್ಥಾಪನೆ ಮಾಡಿದಾಗ ಯಾವ ರೀತಿ ರಾಜಕೀಯ ಇದ್ದಿಲ್ಲವೋ ಅದೇ ರೀತಿ ಮಾನ್ಯ ರಾಜೀವ್‌ಗಾಂಧಿಯವರಾಗಲೀ, ಮಾನ್ಯ ಪೋತೇದಾರ್ ಅವರಾಗಲೀ ತೋರಣಗಲ್‌ಗೆ ಬಂದು ಏನು ಆಶ್ವಾಸನೆ ಕೊಟ್ಟಿದ್ದರೋ ಅದರಲ್ಲಿ ಎಳ್ಳಷ್ಟು ರಾಜಕೀಯ ಇದ್ದಿರಲಿಲ್ಲ. ೩೦ ದಶ ಲಕ್ಷ ಟನ್ ವ್ಯಾಪ್ತಿ ಇರತಕ್ಕಂಥ ಒಂದು ಸ್ಟೀಲ್ ಪ್ಲಾಂಟ್‌ನ್ನು ಇಲ್ಲಿ ಮಾಡಬಹುದು. ಇವತ್ತು ಒಂದು ಮಿಲಿಯನ್ ಟನ್ ಆದರೂ ಪ್ರಾರಂಭದಲ್ಲಿ ತಯಾರು ಮಾಡಬೇಕು. ಒಂದು ಮಿಲಿಯನ್ ಸ್ಟೀಲ್ ಪ್ಲಾಂಟ್‌ನ್ನು ಮಾಡಲಿಕ್ಕೆ ಕೂಡ ಎರಡು ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ ಅಥವಾ ಅದಕ್ಕೂ ಜಾಸ್ತಿ ಬೇಕಾಗಬಹುದು. ಆ ಕಾರಣ ಖಂಡಿತವಾಗಿ ಇಂಥ ಒಂದು ಕೆಲಸವನ್ನು ಕೇಂದ್ರ ಸರ್ಕಾರದವರು ಮಾಡಲಿಕ್ಕೆ ಒಪ್ಪಿರುವಾಗ ನಾವು ಅದರಲ್ಲಿ ಅದಕ್ಕೆ ಒಂದು ಬೇರೆ ರಾಜಕೀಯ ಅರ್ಥ ಕೊಡಲಿಕ್ಕೆ ಪ್ರಯತ್ನಿಸಬಾರದೆಂದು ನನ್ನ ಮನವಿ.

ಶ್ರೀ ಎಸ್ ಹೆಚ್. ಕೌಜಲಗಿ.—ಶ್ರೀಮತಿ ಇಂದಿರಾ ಗಾಂಧಿಯವರ ಕಾಲದಲ್ಲಿ ಅಡಿಗಲ್ಲು ಹಾಕಿದ್ದರು. ಇನ್ನು ಮೇಲೆ ರಾಮಕೃಷ್ಣ ಹೆಗಡೆಯವರಿಂದ ಅದು ಪ್ರಾರಂಭವಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಇದು ಗೊತ್ತಿಲ್ಲವೆಂದಲ್ಲ. ನಮ್ಮ ಮುಖ್ಯಮಂತ್ರಿಯವರು ಹೇಳಿದ ಹಾಗೆ, ಸುದೈವದಿಂದ ನಮ್ಮ ಪ್ಲಾನಿಂಗ್ ಕಮಿಷನ್ ವೈಸ್ ಛೇರ್ಮನ್‌ರಾಗಿ ರಾಮಕೃಷ್ಣ ಹೆಗಡೆಯವರು ನೇಮಕ ಆಗಿದ್ದಾರೆ. ಅವರು ನಮ್ಮ ರಾಜ್ಯಕ್ಕೇ ಅಲ್ಲ ದೇಶಕ್ಕೂ ಒಳ್ಳೆಯದನ್ನು ಮಾಡಲೆಂದು ನಾನು ಹಾರೈಸುತ್ತೇನೆ. ಅದರ ಜೊತೆಗೆ ಅವರು ಈಗ ಇಲ್ಲೇ ಇದ್ದಿದ್ದರೆ ಅವರ ಜೊತೆಗೆ ನೇರವಾಗಿ ಚರ್ಚೆ ಮಾಡಬಹುದಾಗಿತ್ತು ಎನ್ನುವ ಮಾತನ್ನು ಸೇರಿಸ ಬೇಕಾಗುತ್ತದೆ. ಪ್ರತಿಯೊಂದು ವಿಷಯದಲ್ಲೂ ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ. ನ್ಯಾಯವಾದಂಥ ಕೆಲಸಗಳನ್ನು ಕರ್ನಾಟಕದಲ್ಲಿ ಅವರು ಮಾಡಲಿಕ್ಕೆ ಹಿಂಜರಿಯುವುದಿಲ್ಲವೆಂದು ಹೇಳಿದ್ದಾರೆ. ಇದನ್ನು ಕಾದು ನೋಡಬೇಕಾಗುತ್ತದೆ. ನಾವು ಯಾವ ಆಧಾರದ ಮೇಲೆ ಕೇಳುತ್ತಿದ್ದೇವೆ ಎಂಬುದನ್ನು ತಿಳಿದು ಕೊಳ್ಳುವುದು ಬೇಡವೆ ? ಅದನ್ನು ಹೇಳುವ ಉದ್ದೇಶದಿಂದ ಈ ಮಾತನ್ನು ಹೇಳಿದೆ ನಾನು ಇನ್ನೂ ಎರಡು ಮೂರು ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗಿದೆ. ಅಷ್ಟೇ ಮುಖ್ಯವಾಗಿರತಕ್ಕ ವಿಷಯವೆಂದರೆ ವಿದ್ಯುಚ್ಛಕ್ತಿ ಸಾಕಷ್ಟು ಇಲ್ಲದಿದ್ದರೆ ನಮ್ಮ ದೇಶದ, ನಮ್ಮ ರಾಜ್ಯದ ಪ್ರಗತಿ ಮಾಡಲಿಕ್ಕಾಗುವುದಿಲ್ಲ. ಇದರ ಬಗ್ಗೆ ನಮ್ಮ ರಾಜ್ಯಪಾಲರ ಭಾಷಣದಲ್ಲೂ ಕೂಡ ೧೦ ವರ್ಷದ ದೃಷ್ಟಿ ಏನಿದೆ ಎಂಬುದನ್ನು ಪ್ರಾಸ್ಪೆಕ್ಟಿವ್ ಆಗಿ ನೋಡಬೇಕಾಗುತ್ತದೆ. ಮುಂದಿನ ೧೦ ವರ್ಷಗಳನ್ನು ಗಮನದಲ್ಲಿ ಇಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ. ಪವರ್ ಬಗ್ಗೆ ಹೇಳಬೇಕಾದರೆ ಎರಡು ಸಾವಿರ ಮೆಗಾವಾಟ್ ಏನಿದೆ ಅದು ಮುಂಬರುವ ೧೦ ವರ್ಷಗಳಲ್ಲಿ ೫ ಸಾವಿರ ಮೆಗಾವಾಟ್‌ಗೆ ಏರಿಸ ಬೇಕಾಗುತ್ತದೆ. ನಮ್ಮ ರಾಜ್ಯದ ಗುರಿ ೧೦ ವರ್ಷಗಳಲ್ಲಿ ಕನಿಷ್ಟ ಅಂದರೆ ಇವತ್ತಿನ ಪ್ರಕಾರ ೩ ಸಾವಿರ ಮೆಗಾವಾಟ್ ವಿದ್ಯುಚ್ಛಕ್ತಿ ಜಾಸ್ತಿ ಮಾಡಬೇಕಾದರೆ ೫ ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತವೆ. ೧೦ ವರ್ಷಗಳಲ್ಲಿ ಸರಾಸರಿ ವರ್ಷಕ್ಕೆ ೫ ನೂರು ಕೋಟಿ ರೂಪಾಯಿ ಆಯಿತು. ಇಂಥ ಪರಿಸ್ಥಿತಿ ಇರುವಂಥ ಬೆಂಗಳೂರಿನಲ್ಲಿ ಸೂಪರ್ ಥರ್ಮಲ್ ಪ್ಲಾಂಟ್‌ನ್ನು ನಿರ್ಮಿಸಿ ೨ ಸಾವಿರ ಮೆಗಾವಾಟ್ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುವುದಕ್ಕೆ ಕೇಂದ್ರ ಸರ್ಕಾರದವರು ರಷ್ಯದ ಸಹಾಯ ತೆಗೆದು ಕೊಂಡಿದ್ದಾರೆ. ಇದರ ಬಗ್ಗೆ ನಾವು ರಾಜ್ಯಪಾಲರ ಭಾಷಣದಲ್ಲಿ ಖಂಡಿತವಾಗಿ ಪ್ರಸ್ತಾಪ ಮಾಡಬೇಕಾಗಿತ್ತು ಅನ್ನಿಸುತ್ತದೆ. ಅದನ್ನು ಯಾರೇ ಮಾಡಲಿ, ಅದು ಬಹಳ ಮುಖ್ಯವಾದುದು. ೨ ಸಾವಿರ ಮೆಗಾವಾಟ್ ವಿದ್ಯುಚ್ಛಕ್ತಿ ಉತ್ಪಾದಿಸುವ ಸೂಪರ್ ಥರ್ಮಲ್ ಪ್ಲಾಂಟ್‌ನ್ನು ಮಾಡಲಿಕ್ಕೆ ಕೇಂದ್ರ ಸರ್ಕಾರದವರು ಒಪ್ಪಿದರೂ ಅದನ್ನು ಮಾಡಿಸುವಂಥ ಹೊಣೆಗಾರಿಕೆ, ಜವಾಬ್ದಾರಿ ನಮ್ಮ

ಮೇಲೆ ಇದೆ. ಇದನ್ನು ನಿರ್ದಿಷ್ಟವಾದಂಥ ಕಾಲಾವಧಿಯಲ್ಲಿ ಅದನ್ನು ಮುಗಿಸಬೇಕಾಗುತ್ತದೆ. ಅದಕ್ಕೋಸ್ಕರ ಇಂಥ ಮುಖ್ಯವಾದಂಥ ವಿಷಯಗಳ ಕಡೆ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಬೇಕಾಗಿತ್ತು. ಇಲ್ಲದೇ ಹೋದರೆ ಅದು ಸರಿಯಲ್ಲ.

೨–೧೫ ಪಿ. ಎಂ.

ಈಗ ನಾನು ಇರಿಗೇಶನ್ ಬಗ್ಗೆ ಕೆಲವೊಂದು ವಿಚಾರಗಳನ್ನು ಹೇಳುವುದಾದರೆ, ನಮ್ಮ ರಾಜ್ಯದಲ್ಲಿನ ಲೆಕ್ಕದ ಪ್ರಕಾರ ಸುಮಾರು ೫೫ ಲಕ್ಷ ಹೆಕ್ಟೇರ್ಸ್‌ಗಳಷ್ಟು ಇರಿಗೇಶನ್ ಪೊಟೇನ್‌ಶಿಯಲ್ ಇದೆ. ಅದರಲ್ಲಿ ೨೫ ಲಕ್ಷ ಹೆಕ್ಟೇರ್‌ಗಳಷ್ಟು ಮಾತ್ರ ನಾವು ಉಪಯೋಗ ಮಾಡುತ್ತಾ ಇದ್ದೇವೆ. ಇನ್ನೂ ೩೦ ಲಕ್ಷಗಳಷ್ಟು ಎಕರೆ ಪ್ರದೇಶಗಳನ್ನು ನಾವು ಉಪಯೋಗಿಸಿಕೊಳ್ಳಬೇಕಾಗಿದೆ. ಈ ವಿಷಯ ಬಂದಾಗ ಯು.ಕೆ.ಪಿ. ಪ್ರಾಜೆಕ್ಟ್ ನನ್ನ ಹಳೆಯ ಕ್ಷೇತ್ರವಾದ ರಾಯಚೂರಿಗೆ ಸೇರಿರತಕ್ಕಂಥಾದ್ದು. ಅದು ಉತ್ತರ ಕರ್ನಾಟಕ ವಿಭಾಗದಲ್ಲಿ ಬಹಳ ಮುಖ್ಯವಾದ ಪ್ರಾಜೆಕ್ಟ್. ನಾನು ವೈಯಕ್ತಿಕವಾಗಿ ಹೇಳುವುದಾದರೆ ಅಪ್ಪರ್ ಕೃಷ್ಣ ಮತ್ತು ಕಾವೇರಿ ಹಾಗೂ ಮತ್ತಿತರ ಇರಿಗೇಶನ್ ಪ್ರಾಜೆಕ್ಟ್‌ಗಳು ಏನಿವೆ ಅವುಗಳನ್ನು ಸಕಾಲಕ್ಕೆ ನಾವೇ ಮಾಡುವುದು ಕಷ್ಟವಾಗುತ್ತದೆ. ಆದಕಾರಣ ಕನಿಷ್ಟಪಕ್ಷ ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ನಂಥ ದೊಡ್ಡ ಪ್ರಾಜೆಕ್ಟ್‌ಗಳನ್ನು ರಾಷ್ಟ್ರೀಯ ಪ್ರಾಜೆಕ್ಟ್ ಎಂದು ಪರಿಗಣಿಸಿ ಅದಕ್ಕೆ ಕೇಂದ್ರ ಸರ್ಕಾರದವರಿಂದ ಸ್ಪೆಷಲ್ ಅಸಿಸ್ಟೆನ್ಸ್ ಕೇಳುವುದರಲ್ಲಿ ತಪ್ಪೇನಿಲ್ಲ ಎಂದು ನಾನು ಭಾವಿಸುತ್ತೇನೆ. ನಾನು ಈ ರಾಜ್ಯದಲ್ಲಿ ಹಿಂದೆ ಮಂತ್ರಿಯಾಗಿದ್ದಾಗ ಕಾವೇರಿ ಪ್ರಾಜೆಕ್ಟ್‌ನ್ನು ತರಬೇಕಾದರೆ ನಾವು ಹಾಕಿಕೊಂಡ ಯೋಜನಾ ವ್ಯಾಪ್ತಿಯಲ್ಲಿ ಮಾಡುವುದಕ್ಕೆ ಸಾಧ್ಯವಾಗುತ್ತಾ ಇರಲಿಲ್ಲ. ಅದಕ್ಕೆ ಬೇಕಾದ ಹಣವನ್ನು ಪರದೇಶಗಳಿಂದ, ಕೇಂದ್ರ ಸರಕಾರದಿಂದ, ಕುವೈಟ್‌ನಿಂದ ಮುಂತಾಗಿ ಸಿಗುವಂತೆ ಯತ್ನಪಟ್ಟಿದ್ದರಿಂದ ನಮ್ಮಲ್ಲಿನ ಕಾಳಿಯೋಜನೆ, ಕಾವೇರಿ ಯೋಜನೆ ಮುಂತಾದವುಗಳನ್ನು ಮಾಡಿ ತೋರಿಸಲಿಕ್ಕೆ ಸಾಧ್ಯವಾಯಿತು. ಆದುದರಿಂದ ನಮ್ಮ ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ನ್ನು ಕೂಡ ರಾಷ್ಟ್ರೀಯ ಯೋಜನೆ ಎಂದು ತೆಗೆದುಕೊಂಡು ಅದಕ್ಕೋಸ್ಕರವಾಗಿ ಸ್ಪೆಷಲ್ ಅಸಿಸ್ಟೆನ್ಸ್‌ನ್ನು ಕೇಂದ್ರದವರಿಂದ ಕೇಳುವುದರಲ್ಲಿ ಯಾವ ತಪ್ಪು ಆಗುವುದಿಲ್ಲ ಎಂದು ಹೇಳಬಯಸುತ್ತೇನೆ, ಇಂಥ ರಾಷ್ಟ್ರೀಯ ಪ್ರಾಜೆಕ್ಟ್‌ಗಳನ್ನು ಬೇರೆ ರಾಜ್ಯಗಳಲ್ಲಿಯೂ ಕೇಂದ್ರದವರು ಕೈಗೆತ್ತಿಕೊಳ್ಳುವುದು ಒಳ್ಳೆಯದು ಎಂದು ನಾನು ಸೂಚಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಬಡತನ ನಿವಾರಣೆ ಎಲಿವೇಶನ್ ಕಾರ್ಯಕ್ರಮದ ಬಗ್ಗೆ ಹೇಳಬೇಕಾಗುತ್ತದೆ. ಕೆಲವೊಂದು ವಿಚಾರಗಳ ಬಗ್ಗೆ ನನಗೆ ಬಹಳ ವ್ಯಥೆ ಎನ್ನಿಸುತ್ತದೆ. ಹಳ್ಳಿಗಳಿಗೆ ಹೋದಾಗ ಕೆಲವಾರು ಹಳ್ಳಿಗಳಲ್ಲಿ ತಮಗೆ ಹಲವಾರು ತಿಂಗಳುಗಳಿಂದ ವೃದ್ಧಾಪ್ಯ ವೇತನ ಪಾವತಿಯಾಗಲಿಲ್ಲ ಎಂದು ಅರ್ಜಿ ಕೊಟ್ಟರು. ಬಡವರಿಗೆ ನಿರ್ಗತಿಕರಿಗೆ ಹಲವಾರು ವರ್ಷಗಳಿಂದ ಸಿಗುತ್ತಿದ್ದುದನ್ನು ಕೆಲವು ತಿಂಗಳುಗಳಿಂದ ಸಿಗದಂತೆ ಮಾಡಿರುವುದು ಸರಿಯಲ್ಲ. ಇಂಥ ಒಂದು ಪರಿಸ್ಥಿತಿಯನ್ನು ತಪ್ಪಿಸಬೇಕಾಗುತ್ತದೆ, ಇನ್ನು ನಮ್ಮಲ್ಲಿಯ ಮಕ್ಕಳ, ಬಾಲಕರ ಕಡೆಗೆ ಇನ್ನೂ ಹೆಚ್ಚಿನ ಗಮನವನ್ನು ನಾವು ಕೊಡಬೇಕಾಗುತ್ತದೆ. ೧೯೮೬ನೇ ಇಸವಿಯಲ್ಲಿ ಸರಕಾರ ಬಜೆಟ್‌ನ್ನು ಮಂಡನೆ ಮಾಡುವಾಗ ಮಕ್ಕಳಿಗೋಸ್ಕರವಾಗಿ ವ್ಯಾಪಕವಾದಂಥ ಒಂದು ಕಾರ್ಯಕ್ರಮವನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ಸುಮಾರು ೨೦ ಲಕ್ಷ ಮಕ್ಕಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಲಿಕ್ಕೆ ಅದರ ಪ್ರಕಾರ ಸಾಧ್ಯವಿತ್ತು. ಅದನ್ನು ಮುಂದಕ್ಕೆ ೫೦ ಲಕ್ಷ ಮಕ್ಕಳಿಗೆ ಲಭ್ಯವಾಗುವಂತೆ ಮಾಡಲು ಸಾಧ್ಯವೆಂದು ನಾನು ಅದರಲ್ಲಿ ಹೇಳಿದ್ದೇನೆ. ಆದರೆ ಅಂತಹ ಒಂದು ಕಾರ್ಯಕ್ರಮವನ್ನು ನಾವು ಇವೊತ್ತು ಬಹುತೇಕವಾಗಿ ಕೈಬಿಟ್ಟಿದ್ದೇವೆ. ಅದೇ ಯೋಜನೆಯನ್ನು ನಂತರದ ಕಾಲದಲ್ಲಿ ಬಹಳ ಯಶಸ್ವಿಯಾಗಿ ಮಾಡಿದರು. ಆದರೆ ದುರ್ದೈವವಶಾತ್ ಆ ಕಾರ್ಯಕ್ರಮವು ಎಲ್ಲಿ ಹುಟ್ಟಿತೋ ಅಲ್ಲಿ ಸಾಕಷ್ಟು ಲಕ್ಷ ಕೊಡದೇ ಇದ್ದ ಕಾರಣ ಬಿಟ್ಟು ಹೋಯಿತು ಎಂದು ಹೇಳಬೇಕಾಗಿದೆ. ಹಾಗೆಯೇ ವೃದ್ಧಾಪ್ಯ ವೇತನ ಕಾರ್ಯಕ್ರಮವನ್ನು ದೇಶದಲ್ಲಿ ಮೊದಲು ತಂದದ್ದು ಕರ್ನಾಟಕ ರಾಜ್ಯದಲ್ಲಿ. ಆದಕಾರಣ ಇಂಥ ಕಡೆಯೇ ನಮ್ಮದೇ ಆದ ಕಾರ್ಯಕ್ರಮವನ್ನು ಮುಂದುವರಿಸಲಿಕ್ಕೆ ನಮ್ಮಿಂದ ಆಗಲಿಲ್ಲ ಎಂದರೆ ಅಂಥ ಒಂದು ಪರಿಸ್ಥಿತಿಯು ನಮಗೆ ಬಂದಿರುವುದು ಅದು ಬಹಳ ಶೋಚನೀಯ ಎಂದು ವ್ಯಥೆಪಟ್ಟು ಹೇಳಬೇಕಾಗುತ್ತದೆ.

ಇನ್ನು ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಮತ್ತು ಬೆಲೆಗಳ ಬಗ್ಗೆ ಹೇಳುವುದಾದರೆ, ಇತ್ತೀಚೆಗೆ ಬೆಲೆಗಳು ಜಾಸ್ತಿಯಾಗಿವೆ. ಈ ಬಗ್ಗೆ ಕೇಂದ್ರ ಸರಕಾರಕ್ಕೆ ಹೆಚ್ಚಿನ ಒಂದು ಜವಾಬ್ದಾರಿಯು ಇದೆ. ಇದರಲ್ಲಿ ಕಪ್ಪು ಹಣದ ಪಾತ್ರವೂ ಇದೆ. ಮತ್ತು ಅದಕ್ಕೆ ಸಂಬಂಧಪಟ್ಟ ಹಾಗೆ ಬೆಲೆ ಏರಿಕೆಗೆ ಮೂಲಕಾರಣಗಳನ್ನು ಕಂಡು ಹಿಡಿದು ಅದನ್ನು ತಡೆಯುವ ಜವಾಬ್ದಾರಿಯು ಕೇಂದ್ರ ಸರಕಾರಕ್ಕೆ ಇರುತ್ತದೆ. ಬೆಲೆ ಏರಿಕೆಯನ್ನು ತಡೆಯುವುದು ಕೇಂದ್ರ ಸರಕಾರಕ್ಕೆ ಸಾಧ್ಯವಾಗುತ್ತದೆ, ಆಹಾರ ಧಾನ್ಯಗಳನ್ನು,

ಅಗತ್ಯವಸ್ತುಗಳನ್ನು ದೊಡ್ಡ ಪ್ರಮಾಣದಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಹಂಚಿಕೆ ಮಾಡುವುದು ಸಾಧ್ಯವಿದೆ. ನಾನು ಯಾವ ಮಾತನ್ನು ರಾಜಕಾರಣ ಪ್ರೇರಿತನಾಗಿ ಹೇಳುತ್ತಿಲ್ಲ. ರಾಜಕೀಯವಾಗಿ ಟೀಕೆ ಮಾಡುವಂಥ ಸ್ವಭಾವದವನೂ ನಾನಲ್ಲ, ಮತ್ತು ಹಾಗೆ ಮಾಡಬೇಕೆಂಬ ಮನಸ್ಸೂ ಇಲ್ಲ.

ಆದರೂ ಕೂಡ ಇಂತಹ ಕೆಲಸ ಕೂಡ ರಾಜಕೀಯಕ್ಕೆ ಸೇರಿಸಿದ ಅನುಭವ ನಮಗಿದೆ ಇದರಲ್ಲಿ ನಮ್ಮವರು ನಿಮ್ಮವರು ಎಂದು ಅಲ್ಲ. ಇಂಥವರಿಗೇ ಅಂಗಡಿ ಕೊಡಬಾರದು, ಇಂಥವರಿಗೆ ಕೊಡಬೇಕು ಎನ್ನುವಂಥ ಪಕ್ಷಪಾತ ನಡೆಯಿತು. ಇಂತಹ ದಕ್ಷತೆಯ ಅಭಾವವನ್ನು ನಾವು ಕಂಡಿದ್ದೇವೆ. ಆದ್ದರಿಂದ ವಿಕೇಂದ್ರೀಕರಣ ಎನ್ನುವಂಥದ್ದರಲ್ಲಿ ದಕ್ಷತೆಯ ವಿಕೇಂದ್ರೀಕರಣವಾಗಬೇಕೇ ಹೊರತು ಭ್ರಷ್ಟಾಚಾರದ ವಿಕೇಂದ್ರೀಕರಣ ಆಗಬಾರದೆಂದು ಹೇಳುತ್ತೇನೆ, ಕೊನೆಯಲ್ಲಿ ಇನ್ನೂ ಒಂದು ಟೀಕೆ. ರಾಜ್ಯಪಾಲರ ಭಾಷಣದಲ್ಲಿ ಏನಿದೆ ಇದರಲ್ಲಿ ಎಂದು. ಇದೇ ಮಾತನ್ನು ನಾನು ಕೇಳುತ್ತೇನೆ, ಕೇಂದ್ರದಲ್ಲಿ ಪ್ರೆಸಿಡೆಂಟ್ ನಿನ್ನೆ ಅಡ್ರೆಸ್ ಮಾಡಿದರು, ಅದರಲ್ಲಿ ಹೊಸದು ಏನಿದೆ ? ಎಕನಾಮಿಕ್ ಅಂಡ್ ಸೋಶಿಯಲ್ ಜಸ್ಟೀಸ್. ಇದು ಹೊಸದೇನಲ್ಲ. ಡೆವಲಪ್‌ಮೆಂಟ್ ಸೋಶಿಯಲ್ ಜಸ್ಟೀಸ್. ಇದೂ ಹಳೆಯ ವಿಚಾರವೇ. ಆ ಮೇಲೆ ಫೆಡರಲಿಸಮ್, ಡಿಸೆಂಟ್ರಲೈಜೇಷನ್, ಹ್ಯೂಮನ್ ರೈಟ್ಸ್ ಇವು ಪ್ರೆಸಿಡೆಂಟ್ ಅಡ್ರೆಸ್‌ನಲ್ಲಿ ಮುಖ್ಯ ಅಂಶಗಳು. ಗವರ್ನರ್ಸ್ ಅಡ್ರೆಸ್‌ನಲ್ಲಿ ಹೊಸದೇನಿದೆ ಅಂತ ಕೇಳುವುದು ಸುಲಭ. ಅದನ್ನು ನಮ್ಮ ವಿರೋಧಪಕ್ಷದ ನಾಯಕರು ಪ್ರಶ್ನೆ ಮಾಡಿ ತೃಪ್ತಿ ಪಡುತ್ತಾರೆ. ಅದಕ್ಕಿಂತ ಮುಖ್ಯವೇನೆಂದರೆ ಈ ಅಡ್ರೆಸ್ ಯಾವ ಧಾಟಿಯಲ್ಲಿ ಇದೆ. ಅವನ್ನು ಎಷ್ಟು ದಕ್ಷತೆಯಿಂದ ಕಾರ್ಯಗತ ಮಾಡುತ್ತಾರೆ, ಬಡ ಜನತೆಗೆ ಎಷ್ಟರ ಮಟ್ಟಿಗೆ ಪ್ರಯೋಜನವಾಗುತ್ತದೆ ಎಂಬುದು. ಈ ಕೆಲಸ ಮಾಡುವಾಗ ನಮ್ಮ ವಿರೋಧ ಪಕ್ಷದ ನಾಯಕರು ಸರ್ಕಾರಕ್ಕೆ ಸಹಕಾರ ಕೊಟ್ಟು ಹೊಸ ವಾತಾವರಣ ಕಲ್ಪನೆ ಮಾಡಲಿಕ್ಕೆ ಸಹಾಯಕವಾಗುತ್ತಾರೆಂದು ಹೇಳಿ ರಾಜ್ಯಪಾಲರ ಈ ಭಾಷಣವನ್ನು ಸ್ವಾಗತ ಮಾಡುತ್ತಾರೆ.

†SRI QUAMURAL ISLAM (Gulbarga).— Mr. Speaker, Sir, it is pleasure for me to speak on the Motion of Thanks to the Goverener's Address. The speciality of this House is that for the first time in the history, the Congress (I) got a thumping majority. The Congress (I) has formed the Government in our State and they are now ruling, Sir, this is the shortest Governer's Adress to this House which consists of only 12 pages. After a lapse of 18 years, we have a Chief Minister who hails from the Hyderabad-Karnataka region, During election compaigns, the senior Congress (I) leaders, Sri Veerendra patil and others issued manifesto and they all made speeches about the development of the State particularly the development of the Hydrabad Karnataka region. I am sorry to say, Sir, that I never find a word "Hyderabad-Karnataka or the development of the Hyderabad-Karnataka area" in this Address. I read this Governor's Address thrice, four or five times but I never find the word "Hyderabad-Karnataka areas & programmes for its development" though the Chief Minister is from Hyderabad-Katarnaka region. Continuous injustice after 1956 has been done to our region till to-day. We have become very much emotional. People from Telangana region, people from Marathwad region and Hyderabad-Karnataka, were all part of the erstwhile Nizam State. When the Hyderabad-Karnataka district was included to Karnataka State to make Karnataka an integral State, It was promised that justice will be done to us but nothing has been done. We cannot think of developing a State Keeping one of its regions remained undeveloped and there is a limit of tolerance. How much tolerance you can expect from the people of Hyderabad-Karnataka region?

The people of Telangana statred agitation. Do you know how much blood shed took please on the roads? Do you know what has happened in Telagana. They started a separate State movement. Then the Government has come forward to establish a Telangana Board. When they said that statutory powers cannot be given to it, even the Constitution was amended by the Centre and statutory powers were given to it.

Sir, I who belonged to Hyderabad-Karnataka region and particularly Gulbarga District, representing the Hyderabad-Karnataka area. This time people from Hyderabad-Karnataka region particularly Gulbarga District never elected the Janata Dal Candidates and they never elected the candidates of other parties,' except me. Out of 13 seats, 12 seats went in favour of Congress (I) because there was a people of our region that the turn of the Chief Minister will come to the Hyderabad-Karnataka area. Sir, Now, Mr. Veerendra patil has become our Chief Minister but I am sorry to say that this Governor's Address does not speak a single word except mentioning Irrigation, the name of the Upper Krishna. I want all-round development of our region. Even the Chief Minister's Constituency is not developed. If you go to the Chief Minister's Constituency from Gulbarga, i.e., the District Headquarters, you will be able to know the bad condition of the road. From Gulbarga-to Chincholi the road is very worst. Now, our P.W.D. Minister is here and I would like to invite him to my place immediately after this Session. He should not come directly from Hyderabad to Gulbarga Ivanshahi because from Gonj to Ivanshahi, the road is good but all other roads are very bad. You cannot move. This is the situation prevaling in Gulbarga District. If you come via train and halt at Shahabad & then come to Gulbarga by road, you will be able to know the real condition of the road. You cannot reach the place within the time contemplated by you. You can see the number of worst roads in Gulbarga District. There are number of Cement factories and thousands of lorries are passing daily but the condition of the road is very bad. We are getting income from these industries but no action has been taken to improve the roads. Even in educational field and in other fields also, the condition is very worst.

Sir during 1980's, Sri Dharmsing Committee was Constituted and that Committee recommended for the Board. This type of Board headed by Mr M.K. Prabhakara Rao and some officials was only an eye-wash. If the Govt. gives one or two Crores to that Board, the problem cannot be solved. I am expressing the feeling of the people from the Opposition side that if the Government is not going to give sufficient funds to the Board and take up the development works, this Government has to face one more agitation for separate Hydrabad-Karnataka State. You have to prepare for it. We have got rights within our Constitution and we never tolerate

continuous injustice done by the previous Governments as well as the present Government.

SRI M. Y. GHORPADE.— My only humble submisson to you is that please control your emotions, because many people, without exception, including his family, I am sure, have sacrificed a great deal for the unity of Karnataka and at no cost can we even imagine any portion of Karnataka separating itself on any score. Therefore, kindly don't give that impression. We understand the spirit in which you are speaking. But I am also a part of the Hyderadad Karnataka and we are interested in the development of it. But salution to it is not by separating, but intensively working for the benefit of that area I have handled drought in that area. Whatever programmes this Government make has to be given in suitable proportion to the Hyderabad Karnataka area, not as a favour, but because it deserves it due to poverty and I am sure much has been done and in the next ten years many great changes can be made and let us share that confidence and work together.

SRI QUMARUL ISLAM.— Sir, what I said is not my words. It is the word of our Chief Minister. He addressed a meeting in the Super Market of Gulbarga. He addressed a meeting in Chincholi, I can produce the record. Sir, we are not that much emotional as the Telangana people. We were not that much emotional as the marathawada people were, we werenot that much emotional as the sunderban which was the separate Board created in West Bengal. We belong to Hyderabad area. We have got a great respect for it. Our senior leader also belongs to that area. Now Bellary is already included in that. When I speak of Hyderadad Karnataka, it means including Bellary from which place the hon'ble member has come. Sir, if you look at why we become emotional, emotions we have to control, I like the suggestion of our hon'ble member. But sometimes we cannot control our emotions when we see the list of developmental activities, districtwise list, we see Bidar stands at 20th place, Gulbarga stands at No.19, then Raichur stands at No.18, Bellary stands at No.17. In respect of developmenial activities we come last and the least. So, why we should not become emotional Our emotions are positive emotions and our emotions are not negative emotions. What I wanted to impress upon the Government through you, Sir, is that the Board should start functioning and there should be a clear allotment of funds in addition to the regular allotment and immediately we are expectig 100 crores. We expect 100 crores in addition tothe regular allotment. Then, statutory powers should be given to that Board and non-official members should be nominated immediately. Immediately the Board should start its functions.This is my plea. This trend will continue because people have elected us and you for five years. We are here to justify their feelings and to put forth their feelings and it is for you to see that justice is done to us. If justice is not

done, after five years you will come to this side. If you do justice, you will be there for five years and we will be happy. That is why for five years and we hope you will be there. That is why I am pleading the case of Hyderabad Karnataka in this way.

Then I come towards the minority problems. I have gone through the 12 pages of Governors address. There is one word and one line and that is- "my Government is equally concerned with the welfare of the minorities and the backward classes" So, I put my demand in only one line. When the previous Government was there, minority commission, backward commission were appointed to solve the problems of the minorities and even the Sch. Caste commission was formed. Mr. Raziuddin Goodwala was appointed as the Chairman of the minority commission. In that old age having his own experience Mr. Raziuddin Goodwala travelled through out the Karnataka. He met not only muslims but the other religious minorities including Jains and Buddhs and also others and the linguistic minorities. He tried to know the problems of the minorities and then he submitted his report. He has submitted his recommendations. First interim report which he has submitted is here. In this first interim report he has submitted salient features of the report, i. e. summary of the recommendations. He has recommended about 31 recommendations. But, what has happened? Our earlier Chief Minister Mr. Ramakrishna Hegde said, since this was not appointed under the Commission of Inquiry Act, there is no binding on me to bring this report before the House. Sir, what is the use of doing all these exercise by this old man. What was the use in spending lakhs of rupees from the Government and the people. Why that Government kept the people of minority communities in good humour by saying that a commission has been appointed and you represent your cases and when the commission will recommend we will consider its recommendations. At least some recommendations would have been considerd. So I want to put a question to my friends here through you Sir that there was no difficulty for the previous Government to consider those recommendations. Even a commission appointed under the Commission of Inquiry Act its recommendations are not binding. if the Chief Minister or the Government wanted they would have taken up for discussion and members would have expressed their feelings on the recommendations of the minority commission. But the Government had no courtesy at all even to bring the report before the House. Sir, this is the state of minority communities. 12 per cent are muslims, 18 per cent are Sch. Castes, 30 per cent belong to backward classes and how many are Lingayats and Vokkaligas? They are 18 per cent and 12 per cent.

2-45 P. M.

But what has happened? Whether the proportionate representation is being given? Whether the problems of the backward classes,

scheduled castes and minoritios were given due represcntation. Continuous injustice and playing with the feeling of the minorit? is there, the minority which is the symbol democracy, and secularism I will quo e one of the sentences of our late Prime Minister Jawaharlal Nehru He said : "The minorities and the minority political organisation are the symbol of secularism of my country" What has happened here with the minority ? They have been playing with the feelings and deceived the minorities. So this has been done by the previous Government. Now I wanted that another minority Commission should not be formed. But what has happened after that Commission ? There is a directive In principle, the Congress says, every State should have a Minority Commission and now Sri F H. Mohsin is the Chairman of the Minority Commisson. This Commission is not by any order of the State Government but it is on the directive of the Central Government when the Congress was in the Centre. What is is the recommendation of this F. H. Mohsin Commission? He says we should not spend tim , we should not waste our time in again searching the problems but whatever has been recommended by the earlier Commission viz.. Goodwala Commission-and the second report is also there-in toto it is to be accepted and implemented by this Government. I want to impress through you to the Government.........

Mr. Chirman.—You have taken 30 minutes.

Sri Qumarul Islam.—Another 30 minutes I will take. I request you, Sir, in this House I have got a greater responsibility.

Mr. Chairman.—I agree with you but there are 25 Members who are intending to speak.

Sri Qamarul Islam.— Yes Sir, I know. I am also a senior Member. for the second time I have come to this House. Sir as Mr. Ghorpade Sab said, a scheme of old age pension is there. Now the widow pension is there. Physically handicapped pension is there. The previous Government also thought that the pujaris who have become old should also be given the pension. I welcome that But what has happened in the previous Government do you know? The Pesh Imams and the Mussins had been discriminated. When our former Chief Minister Sri Ramakrishna Hegde thought of Pujaries, why he never thought about them ? When he sanctioned Rs. 2000/-per year. we have appreciated but the muslims have been discriminated. Our pesh imams also pray for Allah and Pujaries also pray for Iswar and Bhagwan. Why should there be discrimination between the Hindus and Muslims ? Why are they not seen as two eyes of the same man? Sir, that injustice done to the pesh imams and mussins should be set right immediately. Because when old age people, physically handicapped people, widows and pujaris are getting pensions, why not the Pesh imams also get it ? This is one of my demands. Now, Mr. Aziz Sait who is now the Minister

for Revenue, which includes Wakf, the senior most Minister, said in his interview that he will not nominate in the Committees, recruitment Committees, other Committees, Boards, whether it is Urdu Academy or Finance or Minority Commission or the Development Corporation, whatever Boards are there, only congressmen particularly in these four boards and recruitment committee In the sixth Assembly, when we were the members, a lot have returned to the 9th Assembly. we know that you will restrict to your promise that in every recruitment committee there will be one from the minority. But don't think that if you give nomination to Congress all muslims will vote, After five years very few will vote. My friends have done the same thing. We are telling them, nominate efficient persons from the community. You will get good name or the Government will get good name But there was pressure from the workers to the MLAs, to the Ministers, I have to satisfy them and after coming to Bangalore from the Districts as if a great achievement that the workers are satisfied, I have nominated one of the members in the District Wakf Committee and in the District Level Recruitment Committee, thinking that I have got the guarantee of the muslim votes from that consituency. Now, nobody is there from the muslims as far as the other parties are concerned. Don't commit that mistake. Don't think "We are 177". You see, 177 can be reduced to 77, If you don't give due representation and nominate the calibred and efficient people of the community. You nominate your party people also if they have the calibre. We have no objection. But among the lot when you are nominating to different Boards' don't think that he is muslim league man or a Janata man or a Janata Dal man. If he is really a social worker and working for the upliftment then you think of and nominated. This will help you and will please the minority community and it will give you a good name and also to your Government.

1989 was observed by the world as a year of shelter. But what happened in my constituency. you know. Sir? The temporary shelters constructed by our people were bulldozed, By whom? By the ex-Minister whom I have defeated. Through whom ? Through the City Improvement Board through the police and through the Corporation. About 7 houses, the cases are going on. What has the Corporation done ? The Corporation said, we are a local body, people have elected us. [W]hatever illegal houses are there we are there to regularise by making read of our own and about four to five thuosand houses have already been regularised by the same resolution of the Corporation.

But as soon as he became the Minister, he thought that he would remain a Minister for ever. He never bothered for the "International Year of Shelter" observed thoughout the world. With the help of the official machinery, he demolished the

houses, He buldozed the temporary houses and huts. You know what the officials have done. They have carried away the doors and other articles which they have not returned so far. Whether it is robbed or what' I don't know, But those are the facts that were noticed in Gulbarga,

ಶ್ರೀ ಆರ್, ವಿ. ದೇಶಪಾಂಡೆ.—ಅಧ್ಯಕ್ಷರೆ, ಮಾನ್ಯ ಸದಸ್ಯರು ನೇರವಾಗಿ ಆ ಭಾಗದ ಮಾಜಿ ಮಂತ್ರಿ ಮೇಲೆ ಆಪಾದನೆ ಮಾಡುತ್ತಿದ್ದಾರೆ. ಮಾಜಿ ಮಂತ್ರಿಗಳು ಹೌಸ್ ಡೆಮಾಲಿಶ್ ಮಾಡಿದ್ದಾರೆ, ಮತ್ತು ಸಿಮೆಂಟ್ ಬಗ್ಗೆ ಎಲ್ಲಾ ಹೇಳುತ್ತಿದ್ದಾರೆ. ಇದು ಸರಿಯಲ್ಲ. ಯಾವ ವ್ಯಕ್ತಿ ಇವೊತ್ತು ಸದನದಲ್ಲಿ ಇಲ್ಲ ಅವರು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಅವರ ಬಗ್ಗೆ ಮಾತನಾಡುವುದು ಸರಿಯಲ್ಲ. ಮಾನ್ಯ ಸದಸ್ಯರು ಮಾತನಾಡುವುದು ಇದ್ದರೆ ನೇರವಾಗಿ ಹೇಳಲಿ.

SRI QAMARUL ISLAM.—I will say, the Local Minister of the previous Government. You know what has happened in Gulbarga ? 5,000 cases are still there, but they are discriminated. How the local Minister of the previous Government can come in the way ? When Sri A. Laksmisagar was the Minister for Urban Development he stated that the Corporations and the local bodies should creat, their own resources. At Gulbarga, our officers and the Corporatorse who were there, unanimously passed a Resolution and prepared a scheme for establishing a Complex on the Main road, and the technical sanction has been given to this scheme But, why this scheme was rejected by the Government. The establishment of this complex was for nothing, just to raise the resources of the Corporation. That is why, the people have taught a lesson to the previous Government, in the last Elections. I urge upon the Government that all the 5,000 cases and other cases which are pending on the table of the Commissioner, who is the Excutive Authority in the Corporation should be cleared off.

I would like to speak about the World Bank Assistance to Gulbarga, Hubli-Dharwar and Bangalore City Corporations, Of course it is a Policy matter. The world Bank had agreed in priniciple to give Rs. 80 crores Financial Assistance to Gulbarga, Hubli-Dharwar and Bangalore City Corporations. But I came to know that a condition was stipulated that 42% should be given by the State Government and the remaining 58% would be given by the World Bank. I would like to know whether the Government is really interested in availing the loan. We talk lot about farmers But we must look into the problems of urban population also. There are very good schemes drawn in Gulbarga for which funds are required. I came to know that it was agreed in principle by the World Bank 58% would be released as loan provided the Government gives 42% in the form of Grant to the Corporations, But, I want to know whether it is a fact that the Government has written a letter to the World Bank stating as to why not the entire amount be converted as loan ? I want the Government to clarify the position in this regards If the World Bank has insisted

that 42% should be released as Grants to these Corporations by the State Government, then I request the Government to release this 42% Grants for the development of the Bangalore, Hubli-Dharwar and Gulbarga Corporations, to avail the loan facility, which is principally agreed to by the World Bank.

Sir, then I come to communal harmoney. Our State is known for communal harmony. What is happening in Northern parts of India is a different matter. But in our State also, some atrocities are going on. What happened in Hubli on 10th ? there was Curfew imposed on account of "Ram-Shila" procession. We have no objection for the procession. But it should not hurt the feelings. This Government should be very much careful. Our State which is known for communal harmony should not spoil its image. It is the primary responsibility of this Government to maintain law and order in this State. We want peace in our State. If there is no peace in our State, if the communities are fighting with each other and if the atrocities are going on, our minds will be disturbed and we cannot think of the development. Therefore, I want that peace, law and order should be maintained in our State,

With these few words, I am concluding my speech. I think the Hon'ble Speaker for giving me more time,

† ಡಾ: ಜೀವರಾಜ ಆಳ್ವ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರೆ. ಮಾನ್ಯ ರಾಜ್ಯಪಾಲರ ಭಾಷಣ ರಸವೂ ಇಲ್ಲದ, ಕಸವೂ ಇಲ್ಲದ ನೀರಸ ಭಾಷಣವಾಗಿದೆ. ನಿನ್ನೆಯ ದಿವಸ ಈ ಸಭೆಯನ್ನು ವೀಕ್ಷಣೆ ಮಾಡಿದ ಕೆಲವು ಪತ್ರಿಕೆಗಳು ಈ ಸಭೆಯಲ್ಲಿ ಮಾತನಾಡಿದಂಥ ಅತ್ಯಂತ ಹಿರಿಯ ಸದಸ್ಯರ ಭಾಷಣಗಳೂ ಕೂಡ ತುಂಬಾ ನೀರಸವಾಗಿದ್ದುವು ಎಂದು ಹೇಳಿವೆ. ಆದರೆ ಇದು ಕೇವಲ ಇವತ್ತಿನದು ಮಾತ್ರವಲ್ಲ. ನಮ್ಮ ಸರ್ಕಾರದಲ್ಲೂ ಕೂಡ ಇದು ನಡೆಯುತ್ತಿತ್ತು. ರಾಜ್ಯಪಾಲರ ಭಾಷಣ ಎಂದರೆ ಹೊಸ ಸರ್ಕಾರ ಅಧಿಕಾರಕ್ಕೆ ಬಂದಾಗ ಆ ಸರ್ಕಾರದ ರೂಪುರೇಷೆಗಳನ್ನು ಮತ್ತು ಹೊಸ ಕಾರ್ಯಕ್ರಮಗಳನ್ನು ಏನು ಹಮ್ಮಿಕೊಂಡಿದೆ ಎಂಬುದನ್ನು ತೋರಿಸುವಂಥ ಭಾಷಣವಾಗಿರುತ್ತದೆ. ಆದರೆ ಇಲ್ಲಿ ಏನಾಗುತ್ತಿದೆ ಎಂದರೆ ಮಂತ್ರಿಗಳಿಗೆ ಸಮಯ ಇಲ್ಲ, ಮುಖ್ಯಮಂತ್ರಿಗಳಿಗೆ ಸಮಯ ಇಲ್ಲ, ಅಧಿಕಾರಿಗಳು ಏನೋ ಒಂದು ಭಾಷಣವನ್ನು ತಯಾರಿಸುತ್ತಾರೆ, ಅದಕ್ಕೆ ಮುಖ್ಯಮಂತ್ರಿಗಳು ಸ್ವಲ್ಪ ಮಟ್ಟಿನ ತೇಪೆಯನ್ನು ಹಚ್ಚುವ ಕೆಲಸ ಮಾಡುತ್ತಾರೆ. ನಂತರ ಅದನ್ನು ಮಂತ್ರಿಮಂಡಲದ ಮುಂದಿಟ್ಟು ಒಪ್ಪಿಗೆಯನ್ನು ತೆಗೆದುಕೊಂಡು ಅದನ್ನು ರಾಜ್ಯಪಾಲರಿಗೆ ಕಳುಹಿಸಿಕೊಡುತ್ತಾರೆ. ತಾವು ಹಿಂದಿನ ವರ್ಷದಲ್ಲಿ ರಾಜ್ಯಪಾಲರು ಮಾಡಿರತಕ್ಕ ಭಾಷಣವನ್ನು ನೋಡಿದರೆ ಗೊತ್ತಾಗುತ್ತದೆ. ಹೊಸದಾಗಿ ಕಾಂಗ್ರೆಸ್ಸೇತರ ಸರ್ಕಾರ ಅಧಿಕಾರಕ್ಕೆ ಬಂದಾಗ ಅಂದರೆ ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರ ಅಧಿಕಾರಕ್ಕೆ ಬಂದಾಗ ಹೊಸ ಚಿಂತನೆಯನ್ನು ಹೊಸ ಕಾರ್ಯಕ್ರಮಗಳನ್ನು ಈ ರಾಜ್ಯದ ಬಗ್ಗೆ ನಾವು ನೋಡಿದೆವು.

ಹೊಸ ಚಿಂತನೆ ಹೊಸ ಕಾರ್ಯಕ್ರಮಗಳನ್ನು ನೀವು ಮಾಡಲಿಕ್ಕೆ ಹೋಗಲಿಲ್ಲವಲ್ಲ. ಕರ್ನಾಟಕ ಇತಿಹಾಸದಲ್ಲಿ ಲಭ್ಯವಾಗದಂಥ ವಿಜಯ ತಮ್ಮ ಪಾಲಿಗೆ ಬಂದಿದೆ. because of our own inherent weaknesses in the system that we are not in a position to press forward or push forward the most progressive programmes that we visualise or we dream of ಆದರೆ ನೀವು ಏನು ಕೊಟ್ಟಿದ್ದೀರಿ ರಾಜ್ಯಪಾಲರ ಭಾಷಣದಲ್ಲಿ ಇದು ಪರ್ಮನೆಂಟ್ ಪ್ಯಾರಾಗ್ರಾಫ್. ಒಂದು ಐಆರ ಡಿಪಿ ಬರುತ್ತದೆ, ಒಂದು ಪವರ್ ಪ್ರಾಜೆಕ್ಟ್ ಇರುತ್ತದೆ, ಒಂದು ಕನ್ನಡ ಸಂಸ್ಕೃತಿಯನ್ನು ಉದ್ಧಾರ ಮಾಡಲಿಕ್ಕೋಸ್ಕರ ಅಂತ ಹೇಳಿ ಬಿ ಪ್ಯಾರಾಗ್ರಾಫ್‌ನ್ನು ಪ್ರತಿಭಾಷಣದಲ್ಲಿ ಬರೆಯುವುದನ್ನು ಬಿಟ್ಟು ಹೊರತಾಗಿ ಉಳಿದದ್ದು ಅತ್ಯಂತ ನೀರಸವಾದದ್ದಾಗಿದೆ. It is not inspiring at all ನಾವು ೨೦ ಲಕ್ಷ ಜನ ಪ್ರತಿನಿಧಿಸಿದವರು ವಿರೋಧಪಕ್ಷದಲ್ಲಿ ಕುಳಿತುಕೊಂಡಿದ್ದೇವೆ. ವಿರೋಧಪಕ್ಷದಲ್ಲಿ ನೀವು ಏನು ಕಾರ್ಯಕ್ರಮಗಳನ್ನು

ಹಾಕಿದ್ದೀರಿ. Let us critically analyse the programmes you have presented before us. ಎಂದು ಹೇಳಿದರೆ ಒಂದು ಅವ್ಯವಸ್ಥೆಯು ನಿರ್ಮಾಣ ನಮಗೆ ಉಂಟಾಗಿದೆ. We have not been provided with food for thought. ಅದನ್ನು ಮಾಡುತ್ತಾ ಇಲ್ಲ. ಆದರೆ ನನ್ನ ಅತ್ಯಂತ ಕಳಕಳಿಯ ಮನವಿ ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಿಗೆ, ಅದೇನೆಂದರೆ ಇನ್ನೊಂದು ಕಾರ್ಯಕ್ರಮ ಬರುತ್ತದೆ. ತಮಗೆ ಬಜೆಟ್ ಪ್ರೆಸೆಂಟೇಶನ್ ಮಾಡುವಾಗ ಇನ್ನೊಂದು ಕಾರ್ಯಕ್ರಮ ಬರುತ್ತದೆ. ಈ ಕಾರ್ಯಕ್ರಮದಲ್ಲಿ ಯಾವ ವ್ಯವಸ್ಥೆ ಉಂಟಾಗಿದೆ ಎಂದರೆ ನಾನು ಸುಮಾರು ೫ ವರ್ಷಗಳ ಕಾಲ ಸರ್ಕಾರದಲ್ಲಿ ಮಂತ್ರಿಯಾಗಿ ಕೆಲಸ ಮಾಡಿದ್ದರಿಂದ ಹೇಳುತ್ತಿದ್ದೇನೆ. Absolntely there is no participation of any Minister in the budget formation. Budget is a very secret document In terms of levying of taxes or exemption to certain particular items that could be a secret, but in terms of developmental projects in terms of expenditure that has to be incurred for various Departments that need not be a secret. That can be discussed at length which is not done. It is probably a jugglary of figures where a few figures are altered to show either a deficit or a surplus budget and there are no new programmes envisaged, no new programmes visualised. ಒಂದು ತರಹ ಸ್ಟೀಲ್ ಇನ್‌ಸ್ಟೆಪಿಡ್ ಎನ್ನುವ ಆ ರೀತಿ ಬಜೆಟನ್ನು ತಾವು ಮಂಡನೆ ಮಾಡಬೇಡಿರಿ. ಏತಕ್ಕೆಂದರೆ ೧೯೮೩ರಲ್ಲಿ ಒಂದು ರೀತಿಯ ಕ್ರಾಂತಿಕಾರಕ ರಾಜ್ಯಪಾಲರ ಭಾಷಣವನ್ನು ಕೊಟ್ಟಿದ್ದೆವು. ಆದರೆ ತಾವು ಕೊಟ್ಟಿರುವ ಭಾಷಣವನ್ನು ನೋಡಿದಗೆ ೨೦ ವರ್ಷದ ಹಳೇಕಾಲದ ರಾಜ್ಯಪಾಲರ ಭಾಷಣದಂತಿದೆ. ಆದ್ದರಿಂದ ಮುಂದಿನ ವರ್ಷವಾದರೂ ಅದನ್ನು ಚೇಂಜ್ ಮಾಡಿ. ಏತಕ್ಕೆಂದರೆ There must be a core group sitting on the Governor's Address. ಆ ರೀತಿ ಚರ್ಚೆ ಮಾಡಬೇಕಾಗುತ್ತದೆ. ಯಾವ ಯಾವ ಕಾರ್ಯಕ್ರಮಗಳಿಗೆ ಹಾಕಬೇಕೆಂದು ಮಾಡಬೇಕು. ಇದರಲ್ಲಿ ಯಾವುದೂ ಮಾಡುವುದಿಲ್ಲ, ಯಾವ ವ್ಯವಸ್ಥೆಯು ನಿರ್ಮಾಣವೂ ಇಲ್ಲ.

(SMT NAGAMMA KESHAVAMURTAY IN THE CHAIR)

ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತಾ ಇದ್ದೇನೆ. ಈವತ್ತು ಏನಾದರೂ ಕ್ರಾಂತಿಕಾರಕ ಬದಲಾವಣೆಯನ್ನು ತರಬೇಕಾದರೆ ಮಾನಸಿಕವಾಗಿ ಆ ಶಕ್ತಿ ತಮ್ಮಲ್ಲಿದೆ. ಕರ್ನಾಟಕದ ಜನತೆ ತಮ್ಮಲ್ಲಿ ಅಪೇಕ್ಷೆ ಮಾಡುತ್ತಿದ್ದಾರೆ. ಅತ್ಯಂತ ಐತಿಹಾಸಿಕ ನಿರ್ಣಯವನ್ನು ತಮಗೆ ಕೊಟ್ಟಿದ್ದಾರೆ. ಸುಮಾರು ೧೭೭ ಜನರ ಅತ್ಯಂತ ಬಲಿಷ್ಟ ಶಕ್ತಿ ಇರುವಂಥ ಸರ್ಕಾರವನ್ನು ಕೊಟ್ಟಿದ್ದಾರೆ. ಆ ಶಕ್ತಿಯನ್ನು ಬಳಸಿಕೊಳ್ಳಿ. ಹೊಸ ಜನಪರ ಕಾರ್ಯಕ್ರಮಗಳನ್ನು ನಡೆಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿ. ಕ್ರಾಂತಿಕಾರಕ ಬದಲಾವಣೆಯನ್ನು ತನ್ನಿ. Let there be most progressive programmes that are to be enacted and let this august Honse be the most successful Assembly. ಬರುವಂಥ ಒಂದು ವ್ಯವಸ್ಥೆ ನಿರ್ಮಾಣ ಮಾಡುವಂಥ ಅಗತ್ಯವಿದೆ. ನೀವು ಏತಕ್ಕೆ ಮಾಡಲಿಲ್ಲವೆಂದು ಹೇಳಬಹುದು. ೧೯೮೩ರಲ್ಲಿ ಅತ್ಯಂತ ಕ್ಲಿಷ್ಟ ಪರಿಸ್ಥಿತಿಯಲ್ಲೂ ಕೂಡ ತಾವು ಎಷ್ಟೋ ತೊಂದರೆಯನ್ನು ಕೊಟ್ಟರೂ ಕೂಡ ನಾವು ಮಾಡಿದ್ದೇವೆ. ಹಲವಾರು ಕಾರ್ಯಕ್ರಮಗಳನ್ನು ಮಾಡಿ ತೋರಿಸಿದ್ದೇವೆ ಅದನ್ನು ತಮ್ಮಿಂದ ನಾವು ಬಯಕೆ ಮಾಡುತ್ತಿದ್ದೇವೆ. ತಮ್ಮ ಹತ್ತಿರ ಒಂದು ಅತ್ಯಂತ ವಿಪರ್ಯಾಸ ವ್ಯವಸ್ಥೆಯನ್ನು ನಾವು ನೀಡುತ್ತಿದ್ದೇವೆ. It is a terrible paradox. ಅಧ್ಯಕ್ಷರೇ ಈ ಡೆಮಾಕ್ರೆಟಿಕ್ ಪ್ರೋಸೆಸ್ ಎನ್ನುವುದು ಏನಿದೆ Here, 51 is hundr d and 49 is zero. ಈವತ್ತು ಬರೀ ಒಂದು ಶೇಕಡಾವಾರು ತೆಗೆದುಕೊಂಡರೆ ನಿಮಗೆ ಏನು ಮತದ ಅಂತರ ಬರುತ್ತಿತ್ತೋ ಗೊತ್ತಿಲ್ಲ. ಆದರೆ ಸುಮಾರು ೩೦-೩೫-೩೮ ಪರ್ಸೆಂಟ್ ವಿರೋಧಪಕ್ಷಗಳು ೬೦ ಪರ್ಸೆಂಟ್ ತೆಗೆದುಕೊಂಡು ನಾವು ಬರೇ ೪೦ ಜನ ಈ ಕಡೆ ಇದ್ದೇವೆ. ಈ ಎಲೆಕ್ಟೋರಲ್ ರಿಫಾರ್ಮ್ಸ್ ಬಗ್ಗೆ ಕೂಡ ತಾವು ಆಲೋಚನೆ ಮಾಡಬೇಕಾಗುತ್ತದೆ. ಈ ದಿಸೆಯಲ್ಲಿ ನನ್ನ ಪ್ರಾರ್ಥನೆ ಏತಕ್ಕೆಂದರೆ ಕ್ರಾಂತಿಕಾರಕ ಬದಲಾವಣೆಯನ್ನು ಮಾಡಬೇಕೆಂದು ಸೂಚನೆ ಮಾಡಿದಾಗ ಈ ಬಜೆಟ್ ಅಧಿವೇಶನದಲ್ಲಿಯೇ ತೀರ್ಮಾನವಾಗಬೇಕು. ಹಲವಾರು ಬದಲಾವಣೆಗಳನ್ನು ತರಬೇಕು. ಈಗ ಕಾನೂನು ಮಂತ್ರಿಗಳು ಇಲ್ಲ. ಇದ್ದಿದ್ದರೆ ಚೆನ್ನಾಗಿರುತ್ತಿತ್ತು. We have been addict to donkey'seans for decades. All obsolute rules and regulations;

even composition of legislature, ಕಾಂಪೊಸಿಷನ್ ಆಫ್ ಲೆಜಿಸ್ಲೇಚರ್ ಎಂದು ಏತಕ್ಕೆ ಹೇಳುತ್ತಿದ್ದೇನೆಂದರೆ, ಕೌನ್ಸಿಲ್‌ನಲ್ಲಿ ಟೀಚರ್ಸ್ ಮತ್ತು ಗ್ರಾಜುಯೇಟ್ಸ್ ಕಾನ್‌ಸ್ಟಿಟ್ಯೂಯನ್ಸಿಗಳಲ್ಲಿ ೬-೭ ಜನರಿಗೆ ಮಾತ್ರ ಪ್ರಾತಿನಿಧ್ಯ ಕೊಡುತ್ತಾರೆ, ಉಳಿದ ವರ್ಗಗಳಿಗೆ ಅಲ್ಲಿ ಯಾವ ಪ್ರಾತಿನಿಧ್ಯವನ್ನು ಕೊಡುವುದಿಲ್ಲ. ಈ ಒಂದು ವ್ಯವಸ್ಥೆಯನ್ನು ಬದಲಾಯಿಸಬೇಕಾಗುತ್ತದೆ. If the upper House is to be really relevant, if it has to represent all the classess which are unrepresented, if it has to be a real vocal forum, it has to be represented by all classes. Advocates will have to be represented, Engineering section will have to be represented. It is not only the question of teachers. Probably, I would suggest, the entire Government servants as such may have to be represented by a single legislator The Police Department, which has got 3 lakh personnel who are accountable to the legislature will have to be represented. These are the thoughts which have to be pondered over. There must be a churning of thoughts, thinking and the vision should be greater. ಕಳೆದ ೨೦ ವರ್ಷಗಳಿಂದ ೨೦ ಪಾಯಿಂಟ್ ಪ್ರೋಗ್ರಾಂ ಬಗ್ಗೆ ಹೇಳುತ್ತಿದ್ದೀರಿ. ಅದಕ್ಕೆ ೩೨ ಸೇರಿಸಿಯೂ ಸಹ ೫೨ ಆಗಲಿಲ್ಲ. ಅದು ಹಾಗೆಯೇ ಇದೆ. You are struck with that thing. Let this stop. Let there be vision. Let there be creativity Let there bethat enthusiasm to see that something positive comes out and that is possible only by the great majority you have. I don't call it a brute majority but it is a powerful majority bestowed on you by the people of Karnataka. One suggestion. I want to make I don't call a Plan Holiday as such. My esteemed colleague Sri Puttaswamygowda ಇದರ ಬಗ್ಗೆ ಸ್ವಲ್ಪ ಆಲೋಚನೆ ಮಾಡಬೇಕಾಗುತ್ತದೆ. ಅವರು ಈಗ ಎರಡು ಇಲಾಖೆಗಳನ್ನು ಹೊಂದಿದ್ದಾರೆ. ಅವರ ಜಾಗದಲ್ಲಿ ಕುಳಿತವರಿಗೆ ೩೦೦ ಕೋಟಿ ಎಂದು ಹೆಸರು ಇಟ್ಟಿದ್ದೆವು. ಅವರಿಗೆ ೩೦೦ ಕೋಟಿ ಬಿಟ್ಟರೆ ಬೇರೆ ಏನೂ ಕಾಣುತ್ತಿರಲಿಲ್ಲ ಕರ್ನಾಟಕದ ನೀರಿಗೆ, ಜಲಕ್ಕೆ ತೊಂದರೆಯಾಗಿದೆ ಎಂಬುದನ್ನು ಬಿಟ್ಟು ಬೇರೇನು ಅವರು ಮಾತನಾಡುತ್ತಿರಲಿಲ್ಲ. ಇವತ್ತು ನನ್ನ ಒಂದು ಸಲಹೆ ಏನೆಂದರೆ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಎಂದು ಇದೆಯಲ್ಲ ಅದನ್ನು ರಾಜಗೋಪಾಲಚಾರಿಯವರು ಪಬ್ಲಿಕ್ ಎನಿಮಿ ನಂ ೧ ಎಂದು ಕರೆದಿದ್ದರು. ಇವತ್ತಿನ ದಿವಸ ಪ್ಲಾನ್ ಹಾಲಿಡೇ ಕೊಡಬೇಕಾಗಿದೆ. ಇನ್ನು ರಸ್ತೆಗಳ ಬಗ್ಗೆ ಹೇಳುವುದಾದರೆ ಸರಿಯಾದ ರಸ್ತೆಗಳಿಗೆ ಡೀವಿಯೇಷನ್ ತೆಗೆದುಕೊಳ್ಳುತ್ತಾರೆ. ಏಕೆಂದರೆ ಬ್ರಿಜ್ ರಿಪೇರ್ ಎಂದು. ಯಾವುದು ಚೆನ್ನಾಗಿದೆಯೋ ಅದು ಅಸ್ಫಾಲ್ಟಿಂಗ್ ಆಗುತ್ತದೆ. ೧೦ ಡಿಗ್ರಿ ಡೀವಿಯೇಷನ್ ಇದ್ದರೆ ಅವನ್ನು ಸರಿಪಡಿಸಲಿಕ್ಕೆ ಮತ್ತೆ ರಸ್ತೆ ರಿಪೇರಿ ಮಾಡುವುದು. ಇನ್ನೊಂದು ಮುಖ್ಯವಾದ ವಿಚಾರ replacement of furniture which incures crore of rupees to the Public Works Department. ಇನ್ನೊಂದು ಕಡೆ ಎ ಆರ್. ವರ್ಕ್ಸ್ ಎಂದು ಇದೆ. ಅದು ಕೋಟ್ಯಾಂತರ ರೂಪಾಯಿ ಖರ್ಚಾಗತಕ್ಕದ್ದು. ಲೋಕೋಪಯೋಗಿ ಇಲಾಖೆಗೆ ನಿಜವಾಗಿ ರೈತರ ಬಗ್ಗೆ ಕಳಕಳಿ ಇದ್ದರೆ ಕರ್ನಾಟಕದ ನೀರನ್ನು ಬಳಸಲು ಇರಿಗೇಷನ್ ಡಿಪಾರ್ಟ್‌ಮೆಂಟ್ ಸರಿಯಾದ ಇಲಾಖೆ. ಲೋಕೋಪಯೋಗಿ ಇಲಾಖೆಯಲ್ಲಿ ೫೬ ಜನ ಇಂಜಿನಿಯರ್‌ಗಳು ಇದ್ದಾರಲ್ಲ ಅವರಿಗೆ ಪ್ಲಾನ್ ಹಾಲಿಡೇ ಕೊಡಿ. Let there be a plan holiday because priorities are lost. ಏಕೆಂದರೆ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಹಣ ಬೇಕೆಂದರೆ ಹಣ ಇಲ್ಲ. ಹಣದ ಸಮಸ್ಯೆ ಅತ್ಯಂತ ಭೂತಾಕಾರವಾಗಿದೆ. It has grown like a Franke instein,s monster. ಲೋಕೋಪಯೋಗಿ ಇಲಾಖೆಯಲ್ಲಿ ಆಗತಕ್ಕ ಅನ್ಯಾಯಗಳು ಬಹಳ. ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ತೆಗೆದುಕೊಂಡ ಕೆಲಸಗಳು ಯಾವುವೂ ಆಗುವುದಿಲ್ಲ. ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಬಂದ ತಕ್ಷಣ ಪೊಲಿಟಿಕಲ್ ಕಟ್‌ಆಫ್ ಆಗುತ್ತದೆ. ಆ ಕೆಲಸ ಆಗಬೇಕಾದರೆ ೩೦ ವರ್ಷವಾಗುತ್ತದೆ. ಆದ್ದರಿಂದ ಅತ್ಯಂತ ವಿನಯಪೂರ್ವಕವಾಗಿ ಅಧ್ಯಕ್ಷರಲ್ಲಿ ಮತ್ತು ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ ಇದನ್ನು ತಾವು ಆಲೋಚಿಸಬೇಕಾಗುತ್ತದೆ. ಒಳ್ಳೊಳ್ಳೆಯ ಅನುಭವಸ್ಥರು ಸರ್ಕಾರದಲ್ಲಿದ್ದಾರೆ. ಮೊಯಿಲಿಯವರು

ಅರ್ಥಮಂತ್ರಿಗಳಾಗಿದ್ದವರು ಇದ್ದಾರೆ. The whole approach has been totally apathetic. We are the masters, we are the Government. We are being dictated, we are being tutored and the sins that have been committed, and whatever blunders that have been committed by the bureaucratic set up, the buck is passed on to us.

ಆದ್ದರಿಂದ ಬಜೆಟ್ ಅಧಿವೇಶನಕ್ಕಿಂತ ಮೊದಲು apart from whatever tax concession that might be envisaged by the Hon'ble Chief Minister, and other taxation measures are secretive matters But other developmental projects that can be taken whether any Heads of Accounts are to be eliminated thers are hundreds and hundreds of heads of accounts, in the budget proposals which could be eliminated without any problem whatsoever. That should be effort ಅಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾನ್ಯ ವೀರಪ್ಪ ಮೊಯಿಲಿಯವರು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಚರ್ಚೆ ಮಾಡಿ ಮಾಡಬೇಕು. let it be a purposeful budget. Let it be a collective effort on the part of every Minister. ಇದೇನಾಗುತ್ತಿದೆಯೆಂದರೆ, ಬಜೆಟ್ ಬರುತ್ತದೆ. ಮಂತ್ರಿಗಳಾದಾಗ ನಾವು ಅಲೋಕೇಷನ್ ಜಾಸ್ತಿ ಮಾಡಬೇಕು ಎಂದು ಹೇಳುತ್ತೇವೆಯೇ ಹೊರತು ಅಮೇಲೆ ನೋಡು ವುದಕ್ಕೆ ಸಮಯ ಸಿಗುವುದಿಲ್ಲ. ಆದರೆ ಪೂರಕ ಬೇಡಿಕೆಗಳ ಮೇಲೆ ಚರ್ಚೆ ನಡೆಯಬೇಕಾದ ಅಗತ್ಯತೆ ಇದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ದೇಶಪಾಂಡೆಯವರು ಕೆ.ಇ.ಬಿ. ಬಗ್ಗೆ ಥರ್ಮಲ್ ಟ್ರಾನ್ಸ್‌ಮಿಷನ್ ಲಾಸಸ್ ಬಗ್ಗೆ continous rise in tariff ಬಗ್ಗೆ ಹೇಳಿದ್ದಾರೆ. ನಾವೂ ಅದಕ್ಕೆ ಪಾಲುದಾರರು. We are also abettors in this crime, ಮಂತ್ರಿ ಮಂಡಲದ ಸಭೆಯಲ್ಲಿ ಒಪ್ಪುತ್ತೇವೆ ಅದು ಬರುತ್ತದೆ. ಆದರೆ ನಿಜವಾಗಿ ನಡೆಯತಕ್ಕದ್ದು I am not pleading a case of privatisation, but we have come to a stage to ponder over the entire functioning of the KEB as such. ಇದು ಎಷ್ಟು ದೊಡ್ಡದಾಗಿದೆ ಎಂದರೆ ಲಕ್ಷಾಂತರ ನೌಕರರ ವರ್ಗ ಇರುತ್ತದೆ. ಅದನ್ನು ಹಿಡಿಯುವುದಕ್ಕೆ ಸಾಧ್ಯವಿಲ್ಲ. ಏನಾದರೂ ಮಾಡಿದರೆ ಯೂನಿಯನ್ ಪ್ರಾಬ್ಲಂ ಬರುತ್ತದೆ. ನಿಮ್ಮನ್ನು ಹೆದರಿಸುತ್ತಾರೆ. You are blackmailed. You are taken to ransom at every minute possible. ಆದ್ದರಿಂದ ನಿಮಗೆ ಧೈರ್ಯ ಇದ್ದರೆ ಕೆ.ಇ.ಬಿ.ಯನ್ನು ಪ್ರತ್ಯೇಕ ಮಾಡಬೇಕು. ಅದನ್ನು ನಾಲ್ಕು ಭಾಗಗಳನ್ನಾಗಿ ಮಾಡಿ ಡೀಸೆಂಟ್ರಲೈಸ್ ಮಾಡಬೇಕು. ೨೨೬ ಜನರ ಅಧಿಕಾರವನ್ನು ೫೮ ಸಾವಿರ ಜನರಿಗೆ ಕೊಟ್ಟರಲ್ಲ Why don't you adopt the same method of decentralisation when we have parted with powers. ಮಾನ್ಯ ಶಾಸಕರಾದ ಯಡಿಯೂರಪ್ಪ ನವರು ಹೇಳಿದಾಗ ನನಗೆ ಒಂದು ಕಡೆ ನೋವಾಯಿತು. ಒಬ್ಬ ಶಾಸಕನಿಗೆ ಇಂಥ ಕೆಲಸ ಆಯಿತಲ್ಲ ಪಂಚಾಯಿತಿ ಮೆಂಬರ್ ಹತ್ತಿರ ಹೋಗಿ ಕೇಳಬೇಕಾಯಿತಲ್ಲ ಎಂದು ನೋವಾಯಿತು. ನಂತರ ಏನು ಸಂತೋಷ ಆಯಿತು ಎಂದರೆ probably it is one of the most progressive, revolutionary concepts which was ever practised ನಾನು ಯು.ಎಸ್.ಎ. ಸರ್ಕಾರದ ಆಹ್ವಾನದ ಮೇರೆಗೆ ಇಂಟರ್‌ನ್ಯಾಷನಲ್ ವಿಸಿಟರ್ ಆಗಿ ಅಮೆರಿಕಾಕ್ಕೆ ಹೋಗಿದ್ದೆ. ಅಲ್ಲಿ ಇಂಡಿಯಾ ದೇಶದ ಬಗ್ಗೆ the subject of interest was the Bill that we were passing Zilla Parishad Bill. ಅಂಥ ದೊಡ್ಡತನವನ್ನು ನಾವು ರಾಜಕಾರಣಿಗಳು ತೋರಿಸಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಸನ್ಮಾನ್ಯ ಜೀವರಾಜಆಳ್ವ ಅವರು ಹೇಳಿದಂತೆ ಮಂಡಲ ಪಂಚಾಯಿತಿ ವ್ಯವಸ್ಥೆ ಮಾಡಿದ್ದುದು ಕ್ರಾಂತಿಕಾರಕ ಯೋಜನೆ. ಅದರ ಬಗ್ಗೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಕೇಂದ್ರ ಸರ್ಕಾರ ಕೂಡ ಇದರ ಬಗ್ಗೆ ಚಿಂತನೆ ಮಾಡಿ ಮಾಜಿ ಪ್ರಧಾನಿಯವರೂ ಕೂಡ ಈ ಬಗ್ಗೆ ಕ್ರಮ ಕೈಗೊಂಡಿದ್ದು ಎಲ್ಲರಿಗೂ ಗೊತ್ತಿರುವ ವಿಷಯ. ನಾನು ಏನು ಹೇಳಿದೆ ಎಂದರೆ ಒಬ್ಬ ಗೌರವಾನ್ವಿತ ಶಾಸಕನಾಗಿ ಮಂಡಲ ಪಂಚಾಯಿತಿ ಸಭೆಯಲ್ಲಿ ಕುಳಿತಾಗ ಕಾನೂನಿನ ಚೌಕಟ್ಟಿನಲ್ಲಿ ಮಂಡಲ ಪಂಚಾಯಿತಿ ಪ್ರಧಾನರು ಮಾಡುವ ತಪ್ಪುಗಳನ್ನು ಅಥವಾ ನಾನು ಶಾಸಕನಾಗಿ ನಾನು ಪ್ರತಿನಿಧಿಸುತ್ತಿರುವ ಕ್ಷೇತ್ರದ ಜನರ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ಪ್ರಯತ್ನ ಪಟ್ಟಾಗ ನಮಗೆ ಬೆಲೆ ಕೊಡದಿದ್ದರೆ ಏನು ಪ್ರಯೋಜನ? ನಾವು ಕೇವಲ ಪಟೇಲರಂತೆ ತಾಲ್ಲೂಕು ಪಂಚಾಯಿತಿಯಲ್ಲಿ ಶಾಸಕರಿರುತ್ತೇವೆ. ಅವರಿಗೆ ಇನ್ನೂ ಹೆಚ್ಚಿನ ಅಧಿಕಾರವನ್ನು ಕೊಟ್ಟರೆ ಇನ್ನೂ ಕ್ರಾಂತಿಕಾರಕ

ಹೆಚ್ಚೆಯಾಗುತ್ತದೆ. ಇಲ್ಲದಿದ್ದರೆ ನಮಗೆ ಅಧಿಕಾರ ಏನೂ ಬೇಡ, ಮಂಡಲ ಪಂಚಾಯಿತಿಯಲ್ಲೇ ಒಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸಿಕೊಳ್ಳುವ ವ್ಯವಸ್ಥೆ ಮಾಡಿ. ನಮಗೆ ಅಧಿಕಾರ ಬೇಕಾದರೆ ತೆಗೆದು ಬಿಡಿ. ನಾವು ಇಲ್ಲಿ ಕುಳಿತು ಏನು ಮಾಡಬೇಕೋ ನನಗರ್ಥವಾಗುತ್ತಿಲ್ಲ. ಇಲ್ಲಿ ಪ್ರಶ್ನೆ ಏನೆಂದರೆ ನಾವು ಜನತೆಯ ಪ್ರತಿನಿಧಿಯಾಗಿ ನಮ್ಮ ಕ್ಷೇತ್ರದ ಜನರ ಅಭಿವೃದ್ಧಿ ದೃಷ್ಟಿಯಿಂದ ಇಲ್ಲಿ ಏನಾದರೂ ಹೇಳಿದರೂ ನಮ್ಮ ಕೆಲಸ ಕಾರ್ಯಗಳು ಆಗುತ್ತಿಲ್ಲ. ಅಲ್ಲೂ ನಮ್ಮ ಮಾತು ನಡೆಯುವುದಿಲ್ಲ ಎಂದರೆ ಮುಂದೆ ಬರುವ ದಿವಸಗಳಲ್ಲಿ ಅನೇಕ ಕಷ್ಟಗಳು ಆಗಬಹುದು. ಜನರ ಹಿತದೃಷ್ಟಿಯಿಂದಲಾದರೂ ನಮಗೆ ಕೆಲವು ಅಧಿಕಾರ ಕೊಡಬೇಕು. ಇಲ್ಲದಿದ್ದರೆ ಮಂಡಲ ಪಂಚಾಯಿತಿ ಪ್ರಧಾನರಿಗೇ ಒಳ್ಳೆಯ ರೀತಿಯಲ್ಲಿ ಆಡಳಿತ ನಡೆಸುವುದಕ್ಕೆ ಅವಕಾಶ ಮಾಡಿಕೊಟ್ಟು ನಮಗೆ ಅಧಿಕಾರ ತೆಗೆದುಬಿಡಿ.

೩-೧೫ ಪಿ. ಎಂ.

ಡಾ. ಜೀವರಾಜಆಳ್ವ.— ಹಿರಿಯ ಮಿತ್ರರಾದ ಯಡಿಯೂರಪ್ಪನವರ ಸಲಹೆಯನ್ನು ನಾನು ಪೂರ್ಣವಾಗಿ ಅನುಮೋದಿಸುತ್ತಾ ಈ ಕಾನ್‌ಸೆಪ್ಟ್... ನಾನು ಏನು ಹೇಳಿದೆ ಎಂದರೆ you have not understood the concept of it, ೨೨೪ ಜನ ೫೮ ಸಾವಿರ ಜನರ ಜೊತೆ we are sharing power with them. It is most unheard of in the world history. ಇಂತಹ ಒಂದು ಕ್ರಾಂತಿಕಾರಕ ಬದಲಾವಣೆ ತಂದಾಗ, whatever you give, give it with grace, ಎಂದು ಹೇಳುತ್ತಾರೆ. ಏಕೆಂದರೆ ನನಗೆ ಅಲ್ಲಿ ಹೇಳಿದ ಹಾಗೆ, ಪ್ರತಾಪ್ ಅವರು ಹೇಳಿದ ಹಾಗೆ ಜಿಲ್ಲಾ ಪರಿಷತ್ತುಗಳು, ಹಳ್ಳಿಗಳ ಬಗ್ಗೆ ನನಗೆ ಅನುಭವ ಇಲ್ಲದೇ ಇರುವುದರಿಂದ ಪಂಚಾಯಿತಿಗಳಲ್ಲಿ ಏನು ಆಗುತ್ತಿದೆ ಎಂದು ಗೊತ್ತಿಲ್ಲದೇ ಇರುವುದರಿಂದ ಮಾನ್ಯ ಯಡಿಯೂರಪ್ಪನವರು ಏನು ಸೂಚನೆಯನ್ನು ತೋಡಿಕೊಂಡಿದ್ದಾರೆ ಅದು ಸರಿ ಇರಬಹುದೆಂದು ಹೇಳಿ ಅದನ್ನು ನಾನು ಅನುಮೋದನೆ ಮಾಡುತ್ತೇನೆ. But when we have ushered in this decentralisation of powers within us, why don't we adopt the same method of decentralisation of powers elsewhere. ನೀವು ಏಕೆ ಕೆಳಬಿ ಹಾಗೆ ಬಿಟ್ಟಿದ್ದೀರಿ? ಈಗ ಪ್ರೈವೆಟೈಸೇಷನ್ ಆಫ್ ವಾಟರ್ ಸಪ್ಲೈ ಬ್ರಿಟನ್‌ನಲ್ಲಿ ಅತ್ಯಂತ ಕ್ರಾಂತಿಕಾರಕ ಬದಲಾವಣೆ ತಂದಿದ್ದಾರೆ. Privatisation of water supply is there in Britain. ಅದನ್ನು ಮಾಡಿ ಜನಸಾಮಾನ್ಯರ ಚರ್ಚೆಗೆ ಬಿಡಿ.

ಶ್ರೀ ಕೆ. ಹೆಚ್. ಪಾಟೀಲ್.— ಕ್ರಾಂತಿಕಾರಕ ಬದಲಾವಣೆ ಎಂದು ಹೇಳುತ್ತಿದ್ದೀರಿ. ೧೯೫೪ರಲ್ಲಿ ಮೊಟ್ಟ ಮೊದಲ ಬಾರಿಗೆ ಬಾಂಬೇ ಗೌರ್ನಮೆಂಟ್‌ನಿಂದ ಧಾರವಾಡ ಜಿಲ್ಲಾ ನಲ್ಲೂಡಿ ಗ್ರಾಮದಲ್ಲಿ ಇದರ ಪ್ರಾರಂಭ ಆಯಿತು. ಅನಂತರ ಅದು ಬರು ಬರುತ್ತಾ ಎಲ್ಲಾ ಕಡೆ ಆಯಿತು. ಎಲ್ಲಾ ಊರುಗಳಲ್ಲಿ ಪಂಚಾಯಿತಿಗಳು ಆಗಿ ಆ ನಂತರ ತಾಲ್ಲೂಕು ಲೋಕಲ್ ಬೋರ್ಡ್‌ಗಳು ಅಸ್ತಿತ್ವಕ್ಕೆ ಬಂದವು. ಆ ನಂತರ ಜಿಲ್ಲಾ ಲೋಕಲ್ ಬೋರ್ಡ್‌ಗಳು ಆದವು, ಆಗಿನ ಪವರ್‌ಗೆ ಈಗ ಕಂಪೇರ್ ಮಾಡಿದರೆ ನಿಮ್ಮ ಯಾವುದೂ ಪವರ್ಸ್ ಸರಳವಾಗಿಲ್ಲ. ಇದಕ್ಕಿಂತಲೂ ಹೆಚ್ಚು ಪವರ್ಸ್ ಆಗ ಇತ್ತು. ಆಗ ಹೆಚ್ಚು ಚುನಾವಣೆ ಆಗುತ್ತಿದ್ದವು. ಆಗ ತಾಲ್ಲೂಕು ಬೋರ್ಡ್‌ಗೆ ಚುನಾವಣೆ ಆಗುತ್ತಾ ಇತ್ತು. ಆ ರೀತಿ ಸಿಸ್ಟಮ್ ಮಾಡಿದರೆ ಇನ್ನೂ ಹೆಚ್ಚು ಶ್ರೇಯಸ್ಕರ ಆಗುತ್ತದೆ ಮಾನ್ಯ ನಜೀರ್ ಸಾಬ್ ನನ್ನ ಪರಮ ಶಿಷ್ಯರಾಗಿದ್ದರು. ಅವರ ಬಗ್ಗೆ ನನಗೆ ಬಹಳ ಆತ್ಮ ಗೌರವ ಇದೆ. ಆದರೆ ಆತ ಏನಾಗಿದ್ದ ಎಂದರೆ he was a communist by himself. He was swayed away. ಅವರು ಬಂಗಾಲ ಒಂದನ್ನು ನೋಡಿ ಆದರ ಮೇಲೆ ಮಾಡಿದ್ದಾರೆ. ನಾನು ಅವರಿಗೆ ಆಗ ಹೇಳಿದೆ ಇದರಲ್ಲಿ ತಪ್ಪು ಇದೆ ಅದು ದಾರಿ ತಪ್ಪಿಸುತ್ತದೆ ಎಂದು ಹೇಳಿದೆ. ಆದರೆ ಆತ ಕಮಿಟೇಡ್ ವರ್ಕರ್ ಇದ್ದ. ಪ್ರಾಮಾಣಿಕವಾಗಿ ಆತನಿಗೆ ತಿಳಿದಿದ್ದನ್ನು ಮಾಡಿದ ನಾವೂ ನೀವೂ ಕುಳಿತು ಈ ಬಗ್ಗೆ ಆಲೋಚನೆ ಮಾಡಬೇಕು. ಎಲ್ಲೆಲ್ಲಿ ತಪ್ಪು ಇದೆ ಅದನ್ನು ತಿದ್ದಿಕೊಳ್ಳಬೇಕು. ಪಂಚಾಯಿತಿಗಳಲ್ಲಿ ಎಂ. ಎಲ್. ಎ ಗೆ ಅಧಿಕಾರ ಇಲ್ಲ ಎಂದು ಹೇಳಿದರು. ಅದು ನಿಜ. MLA is the Chairman of the Taluk Board. MLA is the man who has to execute the work there. He can recommend the work to Zilla Parishad. ಎಂ. ಎಲ್. ಎ ಗೆ ಪವರ್ ಕೊಟ್ಟರೆ ದುರುಪಯೋಗ ಕೂಡ ಆಗುತ್ತದೆ ಬಹಳ. ಅದನ್ನು ಲೆಕ್ಕದಲ್ಲಿ ಇಟ್ಟುಕೊಳ್ಳಬೇಕು. ಆ ದೃಷ್ಟಿಯಿಂದ ನಾವೂ ನೀವೂ ಎಲ್ಲರೂ ಕುಳಿತು ಪರ್ಯಾಲೋಚನೆ ಮಾಡಬೇಕು ಒಳ್ಳೆಯ ಯೋಜನೆ ಮಾಡಿದರೆ ಅವರ ಕೀರ್ತಿ ಯಾರಿಗೆ ಸೇರಲಿ. ಎಲ್ಲರೂ ಸೇರಿ ಸೂಕ್ತ ಕೆಲಸ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಜೀವರಾಜ ಆಳ್ವ. —ಜಿಲ್ಲಾಪರಿಷತ್ ವಿಧೇಯಕದ ಕೀರ್ತಿ ಪೂರ್ಣ ಈ ಸಭೆಗೆ ಸೇರಬೇಕಾದುದು ಇದರಲ್ಲಿ ಏನು ಕೆಲವು ನ್ಯೂನ್ಯತೆಗಳು ಇವೆ ಅವನ್ನು ಸರಿಪಡಿಸುವ ಕಾಲ ಬರುತ್ತಾ ಇದೆ. ನೀವು ಇದ್ದಾಗ ನ್ಯೂನ್ಯತೆಗಳನ್ನು ಏಕೆ ಸರಿ ಮಾಡಿಲ್ಲ ಎಂದು ತಾವು ಹೇಳಬಹುದು. ಆಗಿನ ಒಂದು ವ್ಯವಸ್ಥೆಯಲ್ಲಿ ನಾವು ಮಾಡುವ ಶಕ್ತಿ ನಮ್ಮಲ್ಲಿ ಇರಲಿಲ್ಲ ೧೯೭೫ ರಲ್ಲಿ ನಮ್ಮಲ್ಲಿ ಎಂತಹ ಶಕ್ತಿ ಇತ್ತೆಂಬುದು ತಮಗೆ ಗೊತ್ತಿದೆ. ನಮ್ಮ ಆಂತರಿಕ ಒಳಜಗಳದಿಂದಾಗಿ ಆ ನಂತರದ ಶಕ್ತಿ ಏನೆಂಬುದು ತಮಗೆ ಗೊತ್ತಿದೆ. ಅಂತಹ ಕಷ್ಟ ನಿಮಗೆ ಬರುವ ಮೊದಲು ತಾವು ಈ ಕೆಲಸ ಮಾಡಿ It has been a splended god-sent majority that you are enjoying the confidence reposed on you. You make the best of it. ಇಂತಹ ಕ್ರಾಂತಿಕಾರಕ ಬದಲಾವಣೆಯನ್ನು ಈ ವರ್ಷದಲ್ಲಿ ತರದೇ ಇದ್ದರೆ ಈ ಅಸೆಂಬ್ಲಿಯಲ್ಲಿ ತರದೇ ಇದ್ದರೆ ಮುಂದೆ ನೀವು ತರುವುದಕ್ಕಾಗುವುದಿಲ್ಲ. Bacause posterity will not pardon you for the omissions and commi-ssions. If we have this majority, probably things would have been defferent. ನಾನು ವಾಟರ್ ಸಪ್ಲೈ ಬಗ್ಗೆ ಹೇಳುತ್ತಿದ್ದೆ. ಇದರಲ್ಲಿ ಬಹಳ puritanic and idealistic, ನಾವು ಮಾಡಿದ್ದೇವೆ. Everyone wants to be radical. Everyone wants to be socialistic. ಯಾವ ವ್ಯವಸ್ಥೆಯನ್ನು ನಿರ್ಮಾಣ ಮಾಡಿದ್ದೇವೆ ಯಾವ ಜನಸಾಮಾನ್ಯರ ತೊಂದರೆಗಳನ್ನು ನಿವಾರಣೆ ಮಾಡಬೇಕೆಂದು ಈ ಸಮಿತಿಗಳನ್ನು ನಿರ್ಮಾಣ ಮಾಡಿದ್ದೇವೆ. ಆ ಸಂಸ್ಥೆಗಳಿಂದ ಜನರ ತೊಂದರೆ ನಿವಾರಣೆಯಾಗುತ್ತದೆ. ಈಗ ಬಿ. ಡಬ್ಲ್ಯು. ಎಸ್. ಎಸ್. ಬಿ. ಮತ್ತು ಕೆ. ಇ. ಬಿ. ಯಾವ ರೀತಿ ಇವೆಯೆಂದು ಹೇಳುತ್ತೀರಿ. Is there accountability ? has been checked ? Has it been assessed ? They have failed and failed and failed miserably. ಇವತ್ತು ಟ್ಯಾರಿಫ್ ಬೇಕಾದಹಾಗೆ ರೈಸ್ ಮಾಡುತ್ತಾರೆ, ಅದಕ್ಕೆ ಲೆಕ್ಕವಿಲ್ಲ. ಟ್ರಾನ್ಸ್‌ಮಿಷನ್ ಲಾಸ್ ಆಗುತ್ತಿದೆ. ಪವರ್ ಸಪ್ಲೈಯಿಲ್ಲ ಪವರ್ ಇರೆಗ್ಯುಲರ್ ಆ ಇರೆಗ್ಯುಲರ್ ಬ್ರೇಕ್‌ಡೌನ್ ಎಂದು ಹೇಳುತ್ತಾರೆ. If it is a regularly regular break down it is alright. Let there be a discussion, Let there be a House Committee. Let us place whatever happens in London about privatisation. Hand over these BWSSB, KEB and Urban Water Supply Board to the provatisation, and know both plus and minus points All these suggestions could be gauged. ಇಂತಹ ಒಂದು ಪ್ರಾಮಾಣಿಕ ಪ್ರಯತ್ನವನ್ನು ತಾವು ಮಾಡಬೇಕು. ಈ ದೇಶದಲ್ಲಿ ಕೆಲಸ ಮಾಡುವಂತಹ ಶಕ್ತಿ ತಮಗೆಲ್ಲರಿಗೂ ಇದೆ. ಆ ಶಕ್ತಿಯನ್ನು ದೇವರು ಕೊಡಲಿಯೆಂದು ಹಾರೈಸುತ್ತೇನೆ.

ಇನ್ನು ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಹಿರಿಯ ಸದಸ್ಯರಾದ ಮಾನ್ಯ ಘೋರ್ಪಡೆಯವರು ಹೇಳಿದರು, ರಾಜ್ಯಪಾಲರ ಭಾಷಣಗ ತರಹ ರಾಷ್ಟ್ರಪತಿಯವರ ಭಾಷಣ ಇತ್ತೆಂದು. ಎಲ್ಲಾ ಹಳೆಯದು ಹೊಸದೇನು ಇರಲಿಲ್ಲವೆಂದು ಹೇಳಿದರು. The usual mention of right of the democratic institutions and principles of human right's ಇದಕ್ಕಿಂಥ ಮೂಲ ತತ್ವ ಏನಿದೆ ? ಪ್ರಜಾಪ್ರಭುತ್ವದ ಮೂಲ ತಾರಕ ಮಂತ್ರವನ್ನು ಹೇಳಿದ್ದಾರೆ. There was an effort on the part of the Government at the Centre to destroy the credibility of the demceratic institutions. If the Restrapathi says it will be preserved, it is something new and it will bring in a new era and usher in a new ear. ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ.

(ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು)

ನಾನು ಜಯಮಹಲ್ ಕ್ಷೇತ್ರದಿಂದ ಆರಿಸಿ ಬಂದು ಈ ಮನೆಯಲ್ಲಿ ಕೆಲಸ ಮಾಡಿದ್ದೇನೆ, ಆ ಕ್ಷೇತ್ರದಲ್ಲಿ ಮುಸಲ್ಮಾನ್ ಬಾಂಧವರು ಜಾಸ್ತಿ ಇದ್ದಾರೆ. ಅವರ ನೋವುಗಳನ್ನು ಸ್ಪಂಧಿಸಿದ ಅನುಭವದಿಂದ ಮಾನ್ಯ ಕಮರುಲ್ಲ ಇಸ್ಲಾಮ್‌ರವರು ಅವರು ಹೇಳಿದಂತಹ ಪ್ರತಿಯೊಂದು ಮಾತನ್ನು ಪುನರುಚ್ಚಾರ ಮಾಡಲಿಕ್ಕೆ ಇಷ್ಟಪಡುತ್ತೇನೆ.

ಹೈದಾರಾಬಾದ್ ಕರ್ನಾಟಕ ಎಜುಕೇಷನ್ ಸೊಸೈಟಿಯವರು ಒಂದು ತರಹ. ತಾವು ಒಪ್ಪಬೇಕಾದ ಪರಿಸ್ಥಿತಿ ಬರುತ್ತದೆ. ನಮ್ಮ ಸರ್ಕಾರ ವಿದ್ದಾಗ ಅದನ್ನು ನಾವು ಒಪ್ಪಿದ್ದೇವೆ. ಈಗಲೂ ಒಪ್ಪುತ್ತೇವೆ, ಇದು ಸರ್ಕಾರದ ಪ್ರಶ್ನೆಯಲ್ಲ, ಇದು ಸಮಾಜದ ಪ್ರಶ್ನೆ.

ಶ್ರೀ ಕೆ. ಶಿವಮೂರ್ತಿ.— ಮಾನ್ಯ ಸದಸ್ಯರಿಗೆ ಆ ಪಕ್ಷ ಈ ಪಕ್ಷ ಎನ್ನುವ ಯಾವುದೇ ವ್ಯತ್ಯಾಸವಿಲ್ಲ.

ಶ್ರೀ ಜೀವರಾಜ ಆಳ್ವ.— ನೀವೂ ನಮ್ಮವರೇ

ಶ್ರೀ ಬಿ. ಎಸ್. ಯಡಿಯೂರಪ್ಪ.— ಬಹಳ ಪ್ರೀತಿಯಿಂದ ಹೇಳಿದ್ದಾರೆ.

ಶ್ರೀ ಜೀವರಾಜ ಆಳ್ವ.— ನಾನು ನಿಂತ ಸ್ಥಳದಿಂದ ಕದಲಲಿಲ್ಲ. ನನ್ನ ೧೪ ವರ್ಷಗಳ ರಾಜಕೀಯ ಇತಿಹಾಸದಲ್ಲಿ. whether you call it a prejudice, an obsersion I have always maintained my anti-Congress stand and I have never compromised on my conviction. I am not an idealist. I am not committed to any Ism. If there is any Ism, it is humanism. It is my concern. ನಾನು ಯಾವತ್ತೂ ನಿಮ್ಮನ್ನು ಟೀಕೆ ಮಾಡಿಲ್ಲ. ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು. ನಿಮ್ಮಲ್ಲಿ ಯಾರಿಗಾದರೂ ಆ ಪಕ್ಷ ಈಪಕ್ಷ ಅಂತ ಹೇಳಿ ಕೆಲಸ ಮಾಡಿದ್ದೇನೆಯೆ ? ನಮ್ಮ ನಾಯಕರು ಆ ತರಹ ಮಾಡಿಲ್ಲ. ಮಾನ್ಯ ಯಡಿಯೂರಪ್ಪನವರು ಭಾರತೀಯ ಜನತಾ ಪಕ್ಷದವರು ಯಾವುದೇ ಕೆಲಸವನ್ನು ಇಲ್ಲವೆಂದು ಹೇಳಿದ್ದೇನೆಯೆ ? ಆ ತರಹ ಯಾವಾಗಲೂ ನಡೆದುಕೊಂಡಿಲ್ಲ.

ಶ್ರೀ ಕೆ. ಶಿವಮೂರ್ತಿ.— ಯಾವುದೇ ಕೆಲಸ ಆಗಲಿಲ್ಲವೆಂದು ಹೇಳಿದರು.

ಶ್ರೀ ಜೀವರಾಜ ಆಳ್ವ — ಅದು ನಮಗೂ ಗೊತ್ತಿದೆ, ನಿಮಗೂ ಗೊತ್ತಿದೆ. I am not here to criticise for the sake of criticism. I am not here to exploit a situation that I have here But, I am here for a positive, constructive suggestion so that whatever fornits of the functioning of this government, will reach the poorest of the people or the general public. ಅದನ್ನು ಬಿಟ್ಟು ಟೀಕೆ ಮಾಡಬೇಕು, ವಿರೋಧಪಕ್ಷದಲ್ಲಿ ಕುಳಿತುಕೊಂಡಿದ್ದೇವೆಂದು ಹೇಳುತ್ತಿಲ್ಲ. ನಾವು ಮಾಡುವುದಕ್ಕೆ ಆಗಿಲ್ಲ ಜನಪರ ಕಾರ್ಯಕ್ರಮಗಳನ್ನು ನೀವು ಮಾಡಿಯೆಂದು ಹೇಳುತ್ತಿದ್ದೇನೆ ಬರೀ ಟೀಕೆ ಮಾಡುತ್ತಿಲ್ಲ. I know my own inherent weaknesses.

ನನ್ನ ಮಿತಿ ನನಗೆ ಗೊತ್ತಿದೆ. ನಾವು ಎಷ್ಟು ಕೆಲಸ ಮಾಡಿದೆವು, ಸಂಸ್ಕೃತಿ ಇಲಾಖೆಯ ಸಚಿವನಾಗಿ ಎಷ್ಟು ಮಾಡಿದೆ ವಿದ್ಯಾಮಂತ್ರಿಯಾಗಿ ಎಷ್ಟು ಮಾಡಿದೆ ಎಂದು ಗೊತ್ತಿದೆ. ಎಷ್ಟು ಮಾಡಲಿಕ್ಕೆ ಆಗಲಿಲ್ಲವೆಂಬುದನ್ನೂ ಹೇಳುತ್ತೇನೆ. ಆದ್ದರಿಂದ ಈ ಭಾಷಣ ತಮ್ಮನ್ನು ನೋಯಿಸಬೇಕೆಂದು ಅಲ್ಲ. ಅಧಿಕಾರಯುತ ಸ್ಥಾನದಲ್ಲಿರತಕ್ಕಂಥ ಪ್ರತಿಯೊಬ್ಬರ ಬಗ್ಗೆಯೂ ಕೂಡ ನನಗೆ ಗೌರವ ಇದೆ. ಆದರೆ ಯಾವ ಪಕ್ಷದಲ್ಲಿ ಇದ್ದೀರಿ ನೋಡಿ, ಅದರ ಬಗ್ಗೆ ಅತ್ಯಂತ ದುಃಖ ಇದೆ. ಬೇರೆ ಏನೂ ಇಲ್ಲ, ಏಕೆಂದರೆ ಮಹಾತ್ಮಾ ಗಾಂಧಿಯವರು ಒಂದು ಮಾತನ್ನು ಹೇಳಿದ್ದರು. 'Congress party should liquidate itself.' ಅದನ್ನು ನಂಬಿಕೊಂಡು ಕಾದಿದ್ದೇನೆ. ಇವತ್ತಲ್ಲ ನಾಳೆ ಅದು ಆಗುತ್ತೆ. ಆದ ಮೇಲೆ ನೀವೆಲ್ಲ ನಮ್ಮ ಜೊತೆಯಲ್ಲಿ ಬನ್ನಿ. ಆದ್ದರಿಂದ ಜವಾಬ್ದಾರಿ ಸ್ಥಾನದಲ್ಲಿ ತಾವು ಕುಳಿತಿದ್ದೀರಿ. ಅಧಿಕಾರ ಮಾಡುತ್ತೀರಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ನೀವು ಇಲ್ಲಿ ಇದೇ ತರಹ ಹೇಳಿದರೆ ಅಲ್ಲಿ ಮತ್ತೂ ಹೆಚ್ಚಾಗುತ್ತದೆ.

SRI M. BLASIUS D. SOUZA.—He said Congress should be dissolved.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅದಕ್ಕೆಲ್ಲ ಮೂಲಕ್ಕೆ ಹೋಗಬಾರದು.

DR. JEEVARJA ALVA—He said it should liquidate itself. ಮಾನ್ಯ ಅಧ್ಯಕ್ಷರೇ, ನನ್ನ ಪೂಜ್ಯ ತಂದೆಯವರು ಕೂಡ ಅವಿಭಾಜ್ಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು. ಆದರೆ ಯಾವ ಕಾಂಗ್ರೆಸ್ ಸಂಸ್ಥೆಯಿಂದ ರಾಜ್ಯಸಭಾ ಸದಸ್ಯರಾಗಿದ್ದರೋ, ಅದೇ ಕರ್ನಾಟಕದ ಹಿರಿಯ ನಾಯಕರಾದಂಥ ಡಾ॥ ನಾಗಪ್ಪ ಆಳ್ವ ಅವರನ್ನು ೭೬ನೇ ವರ್ಷದಲ್ಲಿ ತುರಂಗ ವಾಸಕ್ಕೆ ಕಳಿಸಿದರಲ್ಲ, ಅದನ್ನು ನೆನೆಸಿಕೊಳ್ಳಿ. ಆ ನೋವನ್ನು ಮರೆಯುವಂತಿಲ್ಲ. These histories cannot be erased ನೀವು ಮಾಡಿದ ಪಾಪ ಏನಿದೆ. ನಿಮ್ಮ ಪಕ್ಷದ ಹೆಸರಿನಲ್ಲಿ ಮಾಡಿದ ಪಾಪಗಳನ್ನು ಮರೆಯುವುದಕ್ಕೆ ಸಾಧ್ಯವಿಲ್ಲ. ಜನತೆ ಅದನ್ನು ಮರೆಯುವುದಿಲ್ಲ. ನೀವು ಒಂದಲ್ಲ ಒಂದು ದಿವಸ ನಿಮ್ಮ ಪಾಪಕ್ಕೆ ಕ್ಷಮೆ ಯಾಚನೆ ಮಾಡಬೇಕಾದ ಕಾಲ ಬರುತ್ತದೆ. You have to condone your action. ಇವತ್ತೇನೋ ಕಾರಣಾಂತರಗಳಿಂದ ಇದ್ದೀರಿ. ನಿಮ್ಮ ಅಂತರಾತ್ಮವನ್ನೊಮ್ಮೆ

ಕೇಳಿಕೊಳ್ಳಿ. Do you approve of any action of the Government ? ನಿಮ್ಮ ಸರ್ಕಾರದ ಪ್ರಧಾನಮಂತ್ರಿಗಳು ಮಾಡಿದಂಥ ಯಾವ ವಿಚಾರಧಾರೆಗೆ ಒಪ್ಪಿಗೆಯನ್ನು ಕೊಡುತ್ತೀರಾ ? ನಿಮ್ಮ ಅಂತರಾತ್ಮವನ್ನು ಕೇಳಿಕೊಳ್ಳಿ. Ask your consciencs. ಏನೋ ಬಂದಿದ್ದೀರಿ, ಬನ್ನಿ. ಹೆಚ್ಚಿನ ಕೆಲಸವನ್ನು ಮಾಡಿ.

ಶ್ರೀ ಡಿ. ಎ. ಚಿನ್ನಪ್ಪ.—ಜನ ಉತ್ತರ ಕೊಟ್ಟಿದ್ದಾರೆ. ಅದಕ್ಕಾಗಿ ಬಂದಿದ್ದೇವೆ. ಇದನ್ನು ನೀವು ಲಘುವಾಗಿ ತೆಗೆದುಕೊಳ್ಳಬೇಡಿ.

ಡಾ॥ ಜೀವರಾಜ ಆಳ್ವ.— ಪೂರ್ಣವಾದ ಗೌರವ ಕೊಟ್ಟೇ ನಾನು ಮಾತನಾಡಿದ್ದೇನೆ, ತಾವು ಬರುವ ಮೊದಲು ನಾನು ಹೇಳುತ್ತಿದ್ದೆ, ಒಂದು ಐತಿಹಾಸಿಕ ನಿರ್ಣಯವನ್ನು ಕೊಟ್ಟು ೧೭೭ ಮಂದಿ ನಿಮ್ಮ ಕಡೆಯವರನ್ನು ಆರಿಸಿ ಕಳಿಸಿದ್ದಾರೆ. ನನ್ನನ್ನು ಪ್ರವೋಕ್ ಮಾಡಿದ್ದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇಲ್ಲದಿದ್ದರೆ ಹೇಳುತ್ತಿರಲಿಲ್ಲ. I was provoked into saying all these things. I am here to give constructive suggestion. ನಾನು ನನ್ನ ಮಿತಿಯನ್ನು ದಾಟಿರಲಿಲ್ಲ. ಆದರೆ ಇವತ್ತು ಅದನ್ನು ದಾಟುವಂತಹ ಪ್ರಸಂಗವನ್ನು ಕ್ರಿಯೇಟ್ ಮಾಡಿದಿರಿ. Yau have to take it back. If you provoke me you have to take it back. ಆದ್ದರಿಂದ ನಾವು ನೀವು ಹೆಚ್ಚಿನ ಜನಪರ ಕಾರ್ಯಕ್ರಮ ಮಾಡೋಣ. ಇವತ್ತು ನಮ್ಮ ನಾಯಕರಾಗಿ ಶ್ರೀ ಚಂದ್ರೇಗೌಡರು ಇದ್ದಾರೆ. ಅತ್ಯಂತ ಹಿರಿಯ ಸದಸ್ಯರಾದವರು ಇದ್ದಾರೆ, ಶ್ರೀ ಯಡಿಯೂರಪ್ಪನವರು ಇದ್ದಾರೆ. ಹಿಂದೆ ನಾವು ೮೩ರಲ್ಲಿ ಒಟ್ಟಿಗೆ ಕೆಲಸ ಮಾಡಿದವರು. ಜನತಾಪಕ್ಷದ ಭೈರೇಗೌಡರು, ರೈತಸಂಘದ ಪಾಟೀಲರು ಇದ್ದಾರೆ. ಶ್ರೀ ವಾಟಾಳ್ ನಾಗರಾಜ್ ಅವರು ೧೮ ವರ್ಷಗಳ ನಂತರ ಇಲ್ಲಿಗೆ ಬಂದಿದ್ದಾರೆ. ಕನ್ನಡ ನಾಡು ನುಡಿಗಾಗಿ ಕೆಲಸ ಮಾಡಿದಂಥ ವ್ಯಕ್ತಿ ಅವರು. ಇವತ್ತು ನಮ್ಮ ಸಹಕಾರ ನಿಮಗೆ ಬೇಕು. ಆದ್ದರಿಂದ ಲಘುವಾಗಿ ತೆಗೆದುಕೊಳ್ಳಬೇಡಿ. ವಿರೋಧಪಕ್ಷದವರಾಗಿ ಟೀಕೆ ಮಾಡುವ ಉದ್ದೇಶದಿಂದ ಮಾತನಾಡುವವರು ಯಾರೂ ಇಲ್ಲಿ ಇಲ್ಲ. ನಿಮ್ಮ ಪಕ್ಷಕ್ಕೆ ಜನತೆ ಬೆಂಬಲ ಕೊಟ್ಟು ಸರ್ಕಾರ ರಚಿಸುವುದಕ್ಕೆ ಹೆಮ್ಮೆ ಪಡಿ. ಇಂತಹ ಅವಕಾಶ ನಮಗೆ ಸಿಕ್ಕಿಲ್ಲವೆಂದು ನಮಗೆ ನೋವು ಇದೆ. ಶ್ರೀ ಕಮರುಲ್ ಇಸ್ಲಾಮ್ ಅವರ ಬಗ್ಗೆ ಹೇಳುತ್ತೇನೆ.

SRI A. K. ANANTHAKRISHNA.—It is like devil quoting the scriptures.

DR. JEEVARAJ ALVA.—It is not the devil quoting the scriptures it is the angel quoting scriptures to the devils. ಅವರು ಹಿರಿಯರು ಇದ್ದಾರೆ. ಸಲ್ಪ ಕುಳಿತುಕೊಳ್ಳಿ. ಶ್ರೀ ಅನಂತಕೃಷ್ಣ ಅವರು ದೂರದಲ್ಲಿ ನನಗೆ ಕಾಣಿಸಲಿಲ್ಲ. ಶ್ರೀ ಅನಂತಕೃಷ್ಣ ರವರು ಡೆವಿಲ್, ಅಂತ ಕರೆದರೆ ನಾನು ಒಪ್ಪಿಕೊಳ್ಳುತ್ತೇನೆ. I beg to differ. You are an elderly person, I wouldnot like to get into the argument with you ಪ್ರಾಮಾಣಿಕ ಪ್ರಯತ್ನವನ್ನು ನಾವು ನೀವು ಸೇರಿ ಮಾಡೋಣ. ಅತ್ಯಂತ ದೊಡ್ಡ ಐತಿಹಾಸಿಕ ವಿಧಾನ ಸಭೆಯ ಅಧ್ಯಕ್ಷರಾಗಿ ತಾವು ಬಂದಿದ್ದೀರಿ. ತಾವು ನಮಗೆ ಹೆಚ್ಚಿನ ರಕ್ಷಣೆ ಕೊಡಬೇಕಾಗಿದೆ, ನಾವು ಬಹಳ ಕಡಿಮೆ ಜನ ಇದ್ದೇವೆ. One very touchy subject I want to touch-which is again a food for thought. It is not for my party. I am not speaking but as an Education Minister thought my party was Committed to abolition of capitation. ಆ ಮೇಲೆ ಸುಮಾರು ಒಂದು ವರ್ಷಕಾಲ ರಾಜ್ಯದ ವಿದ್ಯಾಮಂತ್ರಿಯಾಗಿ ಕೆಲಸ ಮಾಡಿ ಈ ವಿದ್ಯಾಸಂಸ್ಥೆಗಳನ್ನು ಅತ್ಯಂತ ಹತ್ತಿರದಿಂದ ನೋಡಿದ್ದೇವೆ. ಇವತ್ತು ರಾಜ್ಯಪಾಲರ ಭಾಷಣದಲ್ಲಿ ಬಹಳ ಡಿಪ್ಲೊಮ್ಯಾಟಿಕ್ ಆಗಿ ಒಂದು ವಾಕ್ಯ ಹಾಕಿದ್ದೀರಿ ಇದರಲ್ಲಿ ಮಾಲ್‌ಪ್ರಾಕ್ಟೀಸ್ ತಡೆಯುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದೀರಿ. Very very judicious and balanced stand that you have taken. When you want to have this radical socialistic thinking...ಒಂದು ಹೌಸ್‌ಕೀಪಿಂಗ್ ಮಾಡಿ. ಏಕೆಂದರೆ, ನೆನ್ನೆ ಭೀಮಣ್ಣ ಖಂಡ್ರೆಯವರು ಒಂದು ಮಾತು ಹೇಳಿದರು. ಕ್ಯಾಪಿಟೇಷನ್ ಫೀಯನ್ನು ತೆಗೆಯುವುದಕ್ಕೆ ಸಾಧ್ಯವಿಲ್ಲ. ನಿಮಗೆ ತಾಕತ್ತು ಇದ್ದರೆ ರಾಷ್ಟ್ರೀಕರಣ ಮಾಡಿ ಎಂದು ಹೇಳಿದರು. ಆದ್ದರಿಂದ, ಇದನ್ನು ಯಾವರೀತಿ ಮಾಡಬೇಕು, ಡೆವಲಪ್‌ಮೆಂಟ್ ಫೀ ಒಂದು ಮಾಡಬೇಕೇ, ಏನು ಮಾಡಬೇಕು ಎಂಬುದನ್ನು ತೀರ್ಮಾನ ಮಾಡಬೇಕಾಗಿದೆ. ರಾಜ್ಯಪಾಲರ ಆಡಳಿತದಲ್ಲಿ, ಕೊನೆಗೆ ಏನು ಮಾಡಿದರು, ಎಷ್ಟು ಕ್ಯಾಪಿಟೇಷನ್ ತೆಗೆದುಕೊಳ್ಳಬೇಕೆಂದು ಇತ್ತೋ ಅದಕ್ಕಿಂತ ೧೦ ಸಾವಿರ ಜಾಸ್ತಿ ಇವೊತ್ತು ಡೆವಲಪ್ ಮೆಂಟ್ ಫೀ ಮತ್ತು ಟ್ಯೂಷನ್ ಫೀ ಎಕ್ಸ್‌ಟ್ರಾ ಮಾಡಿದರು If you arereally mean

business you can make this as radical change......ನಿಮ್ಮ ಹತ್ತಿರ ಕೋಟ್ಯಾಂತರ ರೂಪಾಯಿ ಹಣ ಇಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಎರಡು ಕಡೆ ಪಕ್ಷದವರಿಗೂ ಸಹ ಕ್ಯಾಪಿಟೇಷನ್ ತೆಗೆಯಬೇಕೆಂದು ಸಮ್ಮತಿ ಇದೆ. ನಮ್ಮ ಪಕ್ಷದ ಚುನಾವಣೆಯ ಪ್ರಣಾಳಿಕೆಯಲ್ಲೂ ಹೇಳಿದ್ದೇವೆ. ಅದರ ಪ್ರಕಾರ ಜನರು ಮ್ಯಾನ್‌ಡೇಟ್ ಕೊಟ್ಟಿದ್ದೇವೆ. We go to the people that we are committed to remove this capitation fee. We are here for constructive purposes and constructive decisions .....ಇದರಲ್ಲಿ ಸಂಶಯ ಇಲ್ಲ. ಕ್ಯಾಪಿಟೇಷನ್ ಹೇಗೆ ತೆಗೆಯಬೇಕೆಂದು ತಾವು ಸಲಹೆ ಕೊಟ್ಟರೆ ಸರ್ಕಾರ ಅದನ್ನು ಪರಿಶೀಲನೆ ಮಾಡುತ್ತದೆ. ಅದು ಬಿಟ್ಟು ಹೇಗೆ ಮಾಡುತ್ತೀರಿ ಎಂದು ಹೇಳುತ್ತೀರಿ. ನೀವೇ ಹೇಳಿದಿರಿ, ಕನ್‌ಸ್ಟ್ರಕ್ಟೀವ್ ಅಪೊಸಿಷನ್ ಕೊಡುತ್ತೇವೆಂದು ಹೇಳಿದಿರಿ, ಈ ದೃಷ್ಟಿಯಿಂದ ಕ್ಯಾಪಿಟೇಷನ್ ಫೀ ತೆಗೆಯಬೇಕೆಂಬ ಬಗ್ಗೆ ಸಲಹೆ ಕೊಡಿ. ಸರ್ಕಾರ ಕಾಂಗ್ರೆಸ್‌ನವರ ಕೈಯಲ್ಲಿರಲಿ ಅಥವಾ ಬೇರೆಯವರ ಕೈಯಲ್ಲಿರಲಿ. ತಮ್ಮ ಸಲಹೆಯನ್ನೂ ಗಮನಕ್ಕೆ ತೆಗೆದುಕೊಳ್ಳೋಣ, ಸಲಹೆ ಪ್ರಕಾರ ಮಾಡೋಣ

ಡಾ॥ ಜೀವರಾಜ ಆಳ್ವ.—ಕಾನೂನು ಪ್ರಕಾರ ಈಗ ಕ್ಯಾಪಿಟೇಷನ್ ಫೀ ಇಲ್ಲ. ಆದರೆ ನಿಜವಾದ ಸಂಗತಿ, ಬೇರೆ ರೂಪದಲ್ಲಿ ಕ್ಯಾಪಿಟೇಷನ್ ಇದೆ. We cannot run away from realities. ಆದ್ದರಿಂದ ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಹೇಳಿದಂತೆ, ಅವರ ಸಲಹೆಯನ್ನು ನಾನು ಒಪ್ಪುತ್ತೇನೆ. ಇದು ಅಧಿಕಾರಿಗಳ ಮಟ್ಟದಲ್ಲಿ ತೀರ್ಮಾನವಾಗುವುದಿಲ್ಲ. It is a political commitment by both sides. ನೀವು ಪ್ರಣಾಳಿಕೆಯಲ್ಲಿ ಕೊಟ್ಟಿದ್ದೀರಿ ನಾವೂ ಕ್ಯಾಪಿಟೇಷನ್ ತೆಗೆದುಹಾಕಿದ್ದೇವೆಂದು ದೊಡ್ಡದಾಗಿ ತೋರಿಸಿಕೊಂಡಿದ್ದೇವೆ. ಆದರೆ ನಿಜವಾಗಿ ಆಗಿಲ್ಲ. ಆದರೆ ನೀವು ಸಹ ಇವತ್ತು ಇದರಲ್ಲಿರತಕ್ಕ ಇರೆಗ್ಯುಲಾರಿಟಿ ಸರಿಪಡಿಸುತ್ತೇವೆ ಎಂಬ ಬರೀ ಹಾರಿಕೆ ಮಾತು ಹೇಳಿದರೆ ಆಗುವುದಿಲ್ಲ. ಇದರ ಬಗ್ಗೆ ಮುಂದಿನ ಅಕೆಡೆಮಿಕ್ ವರ್ಷ ಬರುವುದರೊಳಗೆ ಒಂದು ಹೌಸ್ ಕಮಿಟಿಯಾಗಲೀ ಅಥವಾ in depth discussion. ಚರ್ಚೆಯಾಗಬೇಕು. ಮತ್ತೊಮ್ಮೆ ಮಾನ್ಯ ಕಮರುಲ್ ಇಸ್ಲಾಂ ಅವರ ಭಾವನೆಗಳಿಗೆ ಇಂಬು ಕೊಡುತ್ತಾ, ಹೈದರಾಬಾದ್ ಕರ್ನಾಟಕಕ್ಕೆ ಆಗಿರತಕ್ಕ ತೊಂದರೆಗಳು, ಮತ್ತು ನಮ್ಮ ಮೈನಾರಿಟೀಸ್‌ಗೆ ಆಗಿರತಕ್ಕ ತೊಂದರೆಗಳಿಗೆ ನಮ್ಮ ರಾಜ್ಯ ಸರ್ಕಾರ ಹೆಚ್ಚಿನ ರೀತಿಯಲ್ಲಿ ಸ್ಪಂಧಿಸಬೇಕೆಂದು ತಮ್ಮ ಮೂಲಕ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಈ ಸಭೆಯಲ್ಲಿ ಮಾತನಾಡುವುದಕ್ಕೆ ಅವಕಾಶ ಸಿಕ್ಕಿ ಸುಮಾರು ೧೬ ವರ್ಷ ಆಯಿತು. ೧೯೭೩ನೇ ಡಿಸೆಂಬರ್‌ನಿಂದ ಈ ಸಭೆಯ ಒಂದು ಸಂಬಂಧ ನನಗೆ ಕಡಿದುಹೋಯಿತು. ಬಹುಶಃ ನಾನಾಗಿಯೇ ಸ್ವತಂತ್ರವಾಗಿ ಗೆಲ್ಲಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು ಯಾವುದೇ ಪಕ್ಷದ ಬೆಂಬಲ ಇಲ್ಲದೆ, ಅಥವಾ ಪಕ್ಷಕ್ಕೆ ಸೇರದೇ. ಒಂದು ತತ್ವ, ಒಂದು ಆಧಾರ ಇಟ್ಟುಕೊಂಡು ಇಷ್ಟು ದಿವಸ ಒಂದು ಪರಿಸ್ಥಿತಿಯಲ್ಲಿದ್ದೆ. ಜನ ಮತ್ತೆ ಈ ಸಭೆಗೆ ಮೈಸೂರು ಜಿಲ್ಲೆಯ ಚಾಮರಾಜನಗರ ಕ್ಷೇತ್ರದಿಂದ ಆರಿಸಿ ಕಳುಹಿಸಿದ್ದಾರೆ. ಈ ಸಂದರ್ಭದಲ್ಲಿ ಆ ಜನತೆಗೆ ನಾನು ಪ್ರಣಾಮಗಳನ್ನು ಸಭೆಯ ಮೂಲಕ ಮತ್ತು ತಮ್ಮ ಮೂಲಕ ಅರ್ಪಿಸುತ್ತೇನೆ. ನನಗಂತೂ ಬಹಳ ಸಂತೋಷ. ನಾನು ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ವೈಕುಂಠಬಾಳಿಗಾರವರು ಅಧ್ಯಕ್ಷರಾಗಿದ್ದಾಗ ಆ ೬೦ರ ಸುವರ್ಣ ಯುಗದಲ್ಲಿ, ಸಾಹುಕಾರ್ ಚನ್ನಯ್ಯನವರು ಈ ಸಭೆಯಲ್ಲಿದ್ದರು ಗೋಪಾಲಗೌಡರು ಇದ್ದರು, ಹೆಚ್ ಎಂ ಚೆನ್ನಬಸಪ್ಪನವರು, ಸಿದ್ದವೀರಪ್ಪನವರು ವಿರೋಧ ಪಕ್ಷದಲ್ಲಿ ಕುಳಿತಿದ್ದರು. ಅಂತಹ ೬೫ ಜನ ವಿರೋಧ ಪಕ್ಷದಲ್ಲಿದ್ದಾಗ, ಈ ಸಭೆ ಅತ್ಯಂತ ಮಹತ್ವರವಾದ ಸಭೆಯಾಗಿತ್ತು, ಅವತ್ತು ನಡೆದಂಥ ಚರ್ಚೆಗಳನ್ನು ನಾನು ನೆನಸಿಕೊಂಡರೆ ಮತ್ತೆ ಆ ಸುವರ್ಣಯುಗ ನಮ್ಮ ಗಮನಕ್ಕೆ ಬರುತ್ತದೆ. ಆದಾದನಂತರ ಇವತ್ತೂ ಸಹಿತ ನಾನು ಅತ್ಯಂತ ಸಂತೋಷವಾಗಿದ್ದೇನೆ. ತಾವು ಅಧ್ಯಕ್ಷರಾಗಿ ಬಂದಮೇಲೆ ತಮ್ಮನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಮೂರು ನಾಲ್ಕು ದಿವಸದಿಂದಲೂ ತಾವು ಬಹಳ ತಾಳ್ಮೆಯಿಂದ ಅತ್ಯಂತ ಸೌಜನ್ಯದಿಂದ ಬಹಳ ತಿಳಿಗನ್ನಡ ಭಾಷೆಯಲ್ಲಿ ಈ ಸಭೆಯನ್ನು ನಡೆಸಿ, ಈ ಸಭೆಗೆ ಮಹತ್ತರವಾದ ಗೌರವವನ್ನು ತರುತ್ತಿದ್ದೀರಿ, ನನಗೆ ಬಹಳ ಸಂತೋಷ ಇದೇ ಸಂದರ್ಭದಲ್ಲಿ ನಾನು ೬೦ರಲ್ಲಿ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದರು, ನಂತರ ವೀರೇಂದ್ರ ಪಾಟೀಲರು ಬಂದರು. ಮತ್ತೆ ಈಗ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿ ಬಂದಿರುವುದನ್ನು ನೋಡಿದ್ದೇನೆ, ಆದರೆ ಈಗ ಯಾವುದು ವಿರೋಧ ಪಕ್ಷ ಎಂದು ನಮಗೆ ಗೊತ್ತಾಗುತ್ತಿಲ್ಲ. ಈ ಸಭೆಯಲ್ಲಿ ವಿರೋಧ ಪಕ್ಷದವರು ಇವರೋ ಅವರೋ ಎಂಬ ಗಂಭೀರ

ಪರಿಸ್ಥಿತಿ ಇದೆ. ಒಂದು ತಿಂಗಳ ಹಿಂದೆ ಇವರು ಸರಕಾರ ನಡೆಸುತ್ತಿದ್ದರು. ೧೨-೨೫ ದಿವಸದಿಂದ ಇವರ ಸರಕಾರ ಬಂದಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಒಂದು ವರ್ಷ ಆಯಿತು.

ಶ್ರೀ ವಾಟಾಳ್ ನಾಗರಾಜ್.—ಆರು ತಿಂಗಳಹಿಂದೆ ಬಂತು. ಮೊನ್ನೆ ಚುನಾವಣೆ ನಡೆಯಿತು. ಒಟ್ಟು ೯ ತಿಂಗಳು ಆಗಿರಬಹುದು. ಇದೇನು ತೀರಾ ಜಾಸ್ತಿ ಅಲ್ಲ.

ಅಧ್ಯಕ್ಷರು.—ಸುಲಭವಾಗಿ ಲೆಕ್ಕಕ್ಕೆ ಸಿಗುತ್ತದೆ. ಕಷ್ಟಪಡಬೇಕಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್.— ಈ ಸಂದರ್ಭದಲ್ಲಿ ಭ್ರಷ್ಟಾಚಾರದ ಆರೋಪಗಳ ಬಗ್ಗೆ ಮಾತನಾಡುವಾಗ ವಿರೋಧ ಪಕ್ಷದ ನಾಯಕರು ಇದ್ಯಾವುದಕ್ಕೂ ಸಿಕ್ಕಿಲ್ಲ. ಚಂದ್ರೇಗೌಡರು ಯಾವುದೇ ಸರಕಾರದಲ್ಲಿ ಇರಲಿಲ್ಲ. ಈ ಸಭೆಯ ಅಧ್ಯಕ್ಷರಾಗಿದ್ದರು. ವಿಧಾನಪರಿಷತ್ತಿನಲ್ಲಿದ್ದರು. ಈ ಒಂದು ಪರಿಸ್ಥಿತಿಗೆ ಅವರು ಸಿಕ್ಕಿಲ್ಲ. ಅವರೂ ವಿರೋಧ ಎಸ್. ಶಿವಪ್ಪನವರೂ ವಿರೋಧ ಪಕ್ಷದ ನಾಯಕರಾಗಿದ್ದರು. ಎಂತಹ ಒಂದು ಪರಂಪರೆಯನ್ನು ನೋಡಿದ್ದೇವೆ. ಬಹಳ ಒಳ್ಳೆಯ ರೀತಿ ಸಂಯುಕ್ತವಾಗಿ ಎಲ್ಲರ ಒಗ್ಗಟ್ಟನ್ನು ತೆಗೆದುಕೊಂಡು ಹೋಗತಕ್ಕಂಥ ಸಂಪ್ರದಾಯ ಇಲ್ಲಿ ಬೆಳೆದು ಬಂದಿದೆ. ಇವತ್ತು ಈ ಒಂದು ಮಾತುಗಳನ್ನು ತಮ್ಮ ಮುಂದೆ ಹೇಳಿ ರಾಜ್ಯಪಾಲರ ಭಾಷಣವನ್ನು ಸರಕಾರ ತರಾತುರಿಯಿಂದ ಮಾಡಿಸಿದೆ, ಅವರ ಪರಿಸ್ಥಿತಿಯೂ ಹಾಗಿತ್ತು ಅನಿಸುತ್ತದೆ. ನಾನು ಇವತ್ತು ಯಾರನ್ನೂ ಟೀಕೆ ಮಾಡುವುದಕ್ಕೆ, ಗಂಭೀರವಾದ ಆರೋಪವನ್ನು ಮಾಡುವುದಕ್ಕೆ ಬದಲಾಗಿ ಕೆಲವು ಮಾತನ್ನು ಹೇಳುತ್ತೇನೆ. ೧೯೬೭ರಿಂದ ೭೨ರ ವರೆಗೆ ನಾನು ನಗರ ಪ್ರದೇಶದಿಂದ ಚುನಾವಣೆಗೆ ನಿಂತು ಬರುತ್ತಿದ್ದೆ. ಗ್ರಾಮೀಣ ಜನತೆಯ ಪರಿಸ್ಥಿತಿ ನನಗೆ ಸುಮ್ಮನೆ ಒಂದು ರೀತಿ ನೋಟವಾಗಿತ್ತೇ ಹೊರತು ಗ್ರಾಮಾಂತರ ಮಟ್ಟದಲ್ಲಿ ಪ್ರತ್ಯಕ್ಷವಾಗಿ ಭಾಗಿಯಾಗಿ, ಜನತೆಯ ಪರಿಸ್ಥಿತಿಯನ್ನು ನೋಡತಕ್ಕ ಅವಕಾಶ ಬಂದಿರಲಿಲ್ಲ. ಈಗ ಅದು ನನಗೆ ದೊರಕಿದೆ. ಗ್ರಾಮೀಣ ಅಭಿವೃದ್ಧಿಯ ಬಗ್ಗೆ ಅಲ್ಲಿಂದ ಇಲ್ಲಿಯವರೆಗೆ ಬಂದಿರತಕ್ಕಂಥ ಅನೇಕ ಸರಕಾರಗಳನ್ನು ನಾನು ನೋಡಿದ್ದೇನೆ. ಆದರೂ ಸಹಿತ ಗ್ರಾಮೀಣ ಅಭಿವೃದ್ಧಿಯ ಬಗ್ಗೆ ಯಾವುದೇ ಸರಕಾರ ಪ್ರಾಮಾಣಿಕವಾದ ಪ್ರಯತ್ನ ಮಾಡಿಲ್ಲ, ಎಂಬ ಮಾತನ್ನು ನಾನು ಅತ್ಯಂತ ವೇದನೆಯಿಂದ ತಮ್ಮ ಮುಂದೆ ಮಂಡಿಸುತ್ತಿದ್ದೇನೆ. ತಮಗೆ ನಾನು ಹೇಳುತ್ತೇನೆ, ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾಗಿದ್ದರೂ ಹಳ್ಳಿಗಾಡಿನ ಮಹಿಳೆಯರು ಮಲ ಮೂತ್ರ ವಿಸರ್ಜನೆಗೆ ಹೋಗಬೇಕಾದರೆ ಅವರು ರಾತ್ರಿ ಕತ್ತಲಾಗುವುದನ್ನೇ ಕಾಯಬೇಕಾದ ಪರಿಸ್ಥಿತಿ ಇದೆ.

ಕತ್ತಲಾಗುವುದನ್ನೇ ಕಾದು ಬೇಲಿ ಪಕ್ಕದಲ್ಲಿ ಕುಳಿತು ಮಲಮೂತ್ರ ಮಾಡಬೇಕಾದ ಪರಿಸ್ಥಿತಿ ಇದೆ. ಅದಕ್ಕೆ ಸರಿಯಾದ ರೀತಿಯಲ್ಲಿ ಹಳ್ಳಿಗಳಲ್ಲಿ ಮಲಮೂತ್ರ ಮಾಡುವುದಕ್ಕೆ ಒಳಚರಂಡಿ ವ್ಯವಸ್ಥೆ ಆಗಿಲ್ಲ ನೀರಿನ ವ್ಯವಸ್ಥೆ ಆಗಲಿಲ್ಲ. ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಗ್ರಾಮಾಂತರ ಪ್ರದೇಶದ ಜನತೆಯ ಬಗ್ಗೆ ನಾವೆಲ್ಲರೂ ದೊಡ್ಡದಾಗಿ ಮಾತನಾಡುತ್ತೇವೆ. ಆದರೆ ಅವರ ಅಭಿವೃದ್ಧಿ ಬಗ್ಗೆ ಯಾರೂ ಗಮನ ನೀಡಲಿಲ್ಲ. ಅದೇ ನಗರ ಪ್ರದೇಶಗಳಿಗೆ ಬಂದ ತಕ್ಷಣ ಬೆಳಕು, ಎಲ್ಲಾ ರೀತಿಯ ವ್ಯವಸ್ಥೆಯನ್ನು ನೋಡಿದಾಗ ಈ ಗ್ರಾಮಾಂತರ ಪ್ರದೇಶದ ಜನರು ನೂರಕ್ಕೆ ನೂರರಷ್ಟು ನರಕದಲ್ಲಿ ಬಿದ್ದಿದ್ದಾರೆ. ಇವತ್ತಿಗೂ ಕೆಲವು ಹಳ್ಳಿಗಳಲ್ಲಿ ರಸ್ತೆ ಸೌಕರ್ಯಗಳು ಇಲ್ಲ, ಗರ್ಭಿಣಿ ಹೆಂಗಸರಿಗೆ ಬೇಕಾದ ಆಸ್ಪತ್ರೆಗಳು ಇಲ್ಲ, ಇಂತಹ ಅತ್ಯಂತ ಶೋಚನೀಯವಾದ ಪರಿಸ್ಥಿತಿಯಲ್ಲಿ ಹಳ್ಳಿಗಳು ಇವೆ. ಇವತ್ತು ಅಧಿಕಾರಕ್ಕೆ ಬಂದಿರತಕ್ಕಂಥ ಸರ್ಕಾರ, ಶ್ರೀಮಾನ್ ವೀರೇಂದ್ರಪಾಟೀಲರ ಸರ್ಕಾರ ಪ್ರಾಮಾಣಿಕವಾದ ಪ್ರಯತ್ನ ಮಾಡಬೇಕು. ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಸಮಗ್ರವಾಗಿ ಆಗಬೇಕು. ಈ ಬಗ್ಗೆ ಸರ್ಕಾರದವರು ಒಂದು ಯೋಜನೆಯನ್ನು ಹಾಕಿಕೊಂಡು ಹಳ್ಳಿಗಳಿಗೆ ಒಳಚರಂಡಿ ವ್ಯವಸ್ಥೆ, ನೀರಿನ ವ್ಯವಸ್ಥೆ, ಶಿಕ್ಷಣ ವ್ಯವಸ್ಥೆ, ರಸ್ತೆ ಸೌಕರ್ಯಗಳು, ಬಸ್ ಸೌಕರ್ಯ ಮುಂತಾದ ಮೂಲಭೂತವಾದ ವ್ಯವಸ್ಥೆಗಳನ್ನು ಸರ್ಕಾರದವರು ಅತ್ಯಂತ ವೇಗವಾಗಿ ಮಾಡಿಕೊಡುವುದು ತಮ್ಮ ಕರ್ತವ್ಯವೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಹೇಳಬಯಸುತ್ತೇನೆ. ಇದರ ಜೊತೆಗೆ ಗಡಿ ಪ್ರದೇಶಗಳ ಬಗ್ಗೆ, ಈ ಭಾಗಗಳಲ್ಲಿ ಮೊದಲಿನಿಂದಲೂ ಇದ್ದಂತಹ ಸರ್ಕಾರಗಳು ಕಡೆಗಾಣಿಸಿವೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಚಾಮರಾಜನಗರವು ಕೂಡ ಗಡಿ ಪ್ರದೇಶ. ತಾಳವಾಡಿ ಪ್ರದೇಶ ಕನ್ನಡ ಮಾತನಾಡುವಂತಹ ಪ್ರದೇಶ. ಆ ಭಾಗ ಕರ್ನಾಟಕಕ್ಕೆ ಬರಬೇಕೆಂದು ನಾವು ಹಿಂದೆಯೇ ಬಹಳ ಹೋರಾಟ ಮಾಡಿದ್ದುಂಟು. ತಾಳವಾಡಿ ಕರ್ನಾಟಕಕ್ಕೆ ಬರಬೇಕು. ಚಾಮರಾಜನಗರ ತಾಲ್ಲೂಕಿಗೆ ಸೇರಬೇಕು. ಈ ಬಗ್ಗೆ ಹಿಂದೆ ಒಂದು ದೊಡ್ಡ ಹೋರಾಟವೇ ನಡೆಯಿತು. ಇನ್ನು ಚಾಮರಾಜನಗರ ತಾಲ್ಲೂಕಿನ ಪರಿಸ್ಥಿತಿಯ ಬಗ್ಗೆ ಅಲ್ಲಿನ ವ್ಯವಸ್ಥೆಯ ಬಗ್ಗೆ ನಾನು

ತಮಗೆ ಹೇಳಬೇಕಾದರೆ ಸುಮಾರು ೧೨೦ ಹಳ್ಳಿಗಳು ಇರತಕ್ಕಂಥ ತಾಲ್ಲೂಕಿನಲ್ಲಿ ಸಾಮಾನ್ಯವಾಗಿ ಸುಮಾರು ೬೦೦ ಕೊಳವೆ ಬಾವಿಗಳು ಇರಬಹುದು. ಅದರಲ್ಲಿ ಸುಮಾರು ೩೫೦ ಕೊಳವೆ ಬಾವಿಗಳು ಕೆಟ್ಟು ಹೋಗಿ ಎರಡು ವರ್ಷಗಳು ಆಯಿತು. ಇದುವರೆವಿಗೂ ರಿಪೇರಿ ಕೆಲಸ ಆಗಲಿಲ್ಲ. ಒಂದು ತಾಲ್ಲೂಕಿನ ಪರಿಸ್ಥಿತಿ ಇದಾದರೆ ಇನ್ನು ಕರ್ನಾಟಕ ರಾಜ್ಯದಲ್ಲಿ ಇರತಕ್ಕಂಥ ಹಳ್ಳಿಗಳ ಹಣೆಬರಹವೇನು ? ಇಲ್ಲಿ ನಾನು ಒಂದು ಹಳ್ಳಿಯ ಪ್ರಶ್ನೆ ಹೇಳುತ್ತಿಲ್ಲ. ಇವತ್ತು ರಾಜ್ಯದಲ್ಲಿ ಕೊಳವೇ ಬಾವಿಗಳ ರಿಪೇರಿ ಕೆಲಸ ಮಾಡುವಂತಹ ವ್ಯವಸ್ಥೆ ಇಲ್ಲ. ಇದು ಅತ್ಯಂತ ಶೋಚನೀಯವಾದ ಮತ್ತು ನಾಚಿಕೆಗೇಡಿನ ಪರಿಸ್ಥಿತಿ ಎಂದರೂ ತಪ್ಪಾಗಲಾರದು. ರಾಜ್ಯದ ಕೆಲವೊಂದು ಸಣ್ಣ ಪುಟ್ಟ ಹಳ್ಳಿಗಳಲ್ಲಿ ಹೆಣ ಹೂಳುವುದಕ್ಕೆ ಸ್ಮಶಾನಗಳು ಇಲ್ಲ. ಉದಾಹರಣೆಗೆ ಹೇಳುವುದಾದರೆ ಚಾಮರಾಜನಗರ ತಾಲ್ಲೂಕಿನ ಸುಮಾರು ೫೦ ಹಳ್ಳಿಗಳಲ್ಲಿ ಹೆಣ ಹೂಳುವುದಕ್ಕೆ ಸ್ಮಶಾನಗಳು ಇಲ್ಲ, ಹೆಣ ಹೂಳುವುದಕ್ಕೆ ತೆಗೆದುಕೊಂಡು ಹೋದರೆ ಅಕ್ಕಪಕ್ಕದ ಜಮೀನುದಾರರು ವಿರೋಧ ವ್ಯಕ್ತಪಡಿಸುತ್ತಾರೆ. ಹೆಣ ಹೂಳುವುದಕ್ಕೆ ಬಿಡುವುದಿಲ್ಲ. ಒಂದು ಹಳ್ಳಿಯಲ್ಲಿ ಸತ್ತ ಹೆಣವನ್ನು ಹೂಳುವುದಕ್ಕೆ ಎರಡು ದಿವಸ ತೆಗೆದುಕೊಳ್ಳಲಾಯಿತು. ಕೊನೆಗೆ ಜಿಲ್ಲಾಧಿಕಾರಿಗಳು ಬಂದು ಹೆಣ ಹೂಳಿಸುವಂತಹ ಪರಿಸ್ಥಿತಿ ಬಂತು. ಇದು ಒಂದು ತಾಲ್ಲೂಕಿನಲ್ಲಿರುವ ಸಣ್ಣ ಪ್ರಶ್ನೆ. ಇದನ್ನು ಸರ್ಕಾರದವರು ಬಹಳ ಗಹನವಾಗಿ ಯೋಚನೆ ಮಾಡಬೇಕು. ಇನ್ನು ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳ ಬಗ್ಗೆ ಹೇಳುವುದಾದರೆ ಅಧಿಕಾರ ವಿಕೇಂದ್ರೀಕರಣ ಆಗಬೇಕು. ಅದಕ್ಕೆ ಬೇಕಾದಂತಹ ತಿದ್ದುಪಡಿಗಳು ಸಹ ಆಗಬೇಕಾಗುತ್ತವೆ. ನಾನು ಈ ಬಗ್ಗೆ ತಮಗೆ ಒಂದು ಮಾತನ್ನು ಹೇಳುವುದಾದರೆ ೫ ರೂಪಾಯಿಗಳ ಬಲ್ಬ್ ತೆಗೆದುಕೊಳ್ಳಬೇಕಾದರೂ ಮಂಡಲ ಪಂಚಾಯಿತಿಯವರಿಂದ ಅನುಮತಿ ಬೇಕು. ಚಾಮರಾಜನಗರ ತಾಲ್ಲೂಕಿನಲ್ಲಿ ಒಂದು ಸಣ್ಣ ಹಳ್ಳಿ. ಆ ಹಳ್ಳಿಯಲ್ಲಿ ಮೂರೇ ಮೂರು ಬಲ್ಬ್‌ಗಳು ಬೇಕಾಗಿತ್ತು. ಆ ಮೂರು ಬಲ್ಬ್‌ಗಳಿಗೆ ಸುಮಾರು ಒಂದೂವರೆ ವರ್ಷದಿಂದ ಮಂಡಲ ಪಂಚಾಯಿತಿಯವರು ೧೫ ರೂಪಾಯಿ ಕೊಟ್ಟಿಲ್ಲ. ಈ ಹಳ್ಳಿ ಯಾವುದೆಂದರೆ ಚಾಮರಾಜನಗರದ ಗಾಳಿಪುರ ಎಂದು. ಒಂದು ಬಲ್ಬ್‌ಗೆ ೫ ರೂಪಾಯಿ.

೩-೪೫ ಪಿ.ಎಂ.

ಈ ಮೂರು ಬಲ್ಬುಗಳನ್ನು ಹಾಕಬೇಕಾದರೆ ಒಂದು ವರ್ಷವಾಯಿತು. ಬಲ್ಬುಗಳನ್ನು ಹಾಕಿಸುವುದಕ್ಕೆ ಮಂಡಲ ಪಂಚಾಯಿತಿಗಳಲ್ಲಿ ಹಣ ಇಲ್ಲವಾದ್ದರಿಂದ ಬಲ್ಬುಗಳನ್ನು ಹಾಕಿಸುವುದಕ್ಕಾಗುವುದಿಲ್ಲವೆಂದು ಅವರು ಹೇಳಿದರು. ಒಂದು ಬಲ್ಬಿಗೆ ೫ ರೂಪಾಯಿ ನಾನು ಸ್ವತಃ ೩ ಬಲ್ಬುಗಳನ್ನು ಸ್ವಂತ ದುಡ್ಡಿನಲ್ಲಿ ತರಿಸಿ ಲೈನ್‌ಮ್ಯಾನ್‌ನ್ನು ಕರೆದುಕೊಂಡು ಹೋಗಿ ಬಲ್ಬನ್ನು ಹಾಕಿಸಿದೆ. ಆ ಊರಿನಲ್ಲಿ ನಮಗೆ ಒಂದು ಓಟೂ ಇರಲಿಲ್ಲ. ಆ ಬಲ್ಬ ಹಾಕಿಸಿದ ಮೇಲೆ ಆ ಊರಿನ ೩೫೦ ಓಟುಗಳನ್ನು ನನಗೆ ಕೊಟ್ಟರು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಒಂದು ವರ್ಷದಿಂದ ಆ ಊರಿಗೆ ಬಲ್ಬುಗಳನ್ನು ಹಾಕಿರಲಿಲ್ಲವಂತೆ. ಇಂಥಾ ಪರಿಸ್ಥಿತಿ ನೋಡಿದಾಗ ಬಹಳ ಶೋಚನೀಯವಾದುದು. ಇದು ಸಣ್ಣ ವಿಚಾರ ಇರಬಹುದು. ಇಂಥ ಪರಿಸ್ಥಿತಿ ಅತ್ಯಂತ ಶೋಚನೀಯವಾದುದು. ಆಮೇಲೆ ನಾನು ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇನೆ. ಪ್ರತಿಯೊಂದು ಹಳ್ಳಿಗಳಿಗೂ ಸ್ಮಶಾನ ಎಂಬುದನ್ನು ನಿಗದಿತ ಮಾಡಲಿಲ್ಲವೆಂದರೆ ಇನ್ನು ಮುಂದೆ ಶವ ಸಂಸ್ಕಾರಗಳನ್ನು ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಮಾಡಬೇಕಾಗುತ್ತದೆ ಎಂದು ಹೇಳಿದ್ದೇನೆ ಹೆಣವನ್ನು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಮುಂದೆ ಸಂಸ್ಕಾರ ಮಾಡಬೇಕಾಗುತ್ತದೆ. ಒಂದು ಊರಿನಲ್ಲಿ ಹೆಣವನ್ನು ಸಂಸ್ಕಾರ ಮಾಡಲಿಕ್ಕೆ ಜಾಗವಿಲ್ಲವೆಂದು ಎರಡು ದಿನ ಊರಿನಲ್ಲಿ ಇಟ್ಟುಕೊಂಡಿರತಕ್ಕ ಪ್ರಸಂಗ ನಿಜಕ್ಕೂ ನಾಚಿಕೆಗೇಡಿನದಾಗಿರುತ್ತದೆ. ಆ ಮೇಲೆ ಈ ಸರ್ಕಾರವು ಈಗ ಅಧಿಕಾರಕ್ಕೆ ಬಂದಿದೆ. ಮೊದಲಿನಿಂದಲೂ ನಮ್ಮ ರಾಜ್ಯದ ಗಡಿಯ ತಾಲ್ಲೂಕುಗಳನ್ನು ಸಮಗ್ರವಾಗಿ ಕಡೆಗಣಿಸಿದ್ದಾರೆ. ಬೆಳಗಾವಿ ಪ್ರಶ್ನೆ ತೆಗೆದುಕೊಳ್ಳಿ, ಬೆಳಗಾವಿ ಬಗ್ಗೆ ಯಾವುದೇ ಸರ್ಕಾರ ಸರಿಯಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಇವತ್ತಿನವರೆಗೂ ಸಾಧ್ಯವಾಗಿಲ್ಲ. ಗಡಿ ಪ್ರದೇಶಗಳ ಗ್ರಾಮಾಭಿವೃದ್ಧಿ ಬಗ್ಗೆ ಅವರು ಯೋಚನೆ ಮಾಡಿಲ್ಲ. ಬೆಳಗಾವಿಯನ್ನು ಅಭಿವೃದ್ಧಿಪಡಿಸಿ ಅಲ್ಲಿ ಸರಿಯಾದ ಕಾರ್ಖಾನೆಗಳನ್ನು ತೆಗೆದು ಮಾಡಿದ್ದರೆ ಅಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರು ಆರಿಸಿ ಬರುತ್ತಿರಲಿಲ್ಲ. ಅವರು ಗೆದ್ದು ಬರುವುದಕ್ಕೆ ನಮ್ಮ ಸರ್ಕಾರವೇ ಅನುಕೂಲ ಮಾಡಿಕೊಟ್ಟಿದೆ. ವ್ಯವಸ್ಥಿತವಾಗಿ ಬೆಳಗಾವಿ ಅಭಿವೃದ್ಧಿಯನ್ನು ಮಾಡಿದ್ದರೆ ಮತ್ತು ಸಮಗ್ರ ಅಭಿವೃದ್ಧಿಗೆ ಯೋಜನೆ ಮಾಡಿದ್ದರೆ, ಚಿಂತನೆ ಮಾಡಿದ್ದರೆ, ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಗೆದ್ದು ಬರುವುದಕ್ಕೇ ಸಾಧ್ಯವಿರುತ್ತಿರಲಿಲ್ಲ. ಚಾಮರಾಜ ನಗರದ ಕಡೆಯೂ ಸಹ ಗಡಿ ಪ್ರದೇಶಗಳ ಪ್ರದೇಶಗಳ ಬಗ್ಗೆ ಸರಿಯಾದ ಗಮನವನ್ನು ಸರ್ಕಾರವು ಹರಿಸಿಲ್ಲ. ಆದ್ದರಿಂದ, ಗಡಿ ಪ್ರದೇಶಗಳ

ಬೆಳವಣಿಗೆಗೆ ಮತ್ತು ಅವುಗಳ ಅಭಿವೃದ್ಧಿಗೆ ಗಡಿ ಪ್ರದೇಶಗಳ ಅಭಿವೃದ್ಧಿ ಪ್ರಾಧಿಕಾರವನ್ನು ಸರ್ಕಾರ ರಚನೆ ಮಾಡಬೇಕು. ಹೈದರಾಬಾದ್ ಕರ್ನಾಟಕ ಮಂಡಳಿಯನ್ನು ಮಾಡುತ್ತಿದ್ದೀರೋ ಅದೇ ರೀತಿಯಲ್ಲಿ ಇಡೀ ಸಮಗ್ರ ಕರ್ನಾಟಕಕ್ಕೆ, ಕರ್ನಾಟಕದ ಗಡಿ ಪ್ರದೇಶಗಳು ಎಲ್ಲೆಲ್ಲಿವೆ ಆ ಗಡಿ ಪ್ರದೇಶಗಳ ಅಭಿವೃದ್ಧಿಗೆ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವನ್ನು ರಚನೆ ಮಾಡಿ ವಿಶೇಷ ಸವಲತ್ತುಗಳನ್ನು ಅದಕ್ಕೆ ನೀಡಿ ಹೆಚ್ಚಿನ ಹಣವನ್ನು ಕೊಡಬೇಕೆಂದು ಸರ್ಕಾರದಲ್ಲಿ ತಮ್ಮ ಮೂಲಕ ಕೇಳುತ್ತಿದ್ದೇನೆ. ಇನ್ನು ಮುನಿಸಿಪಾಲಿಟಿಗಳ ಬಗ್ಗೆ ಹೇಳುತ್ತೇನೆ. ಹಣ ಇದ್ದರೆ ಇವುಗಳು ವ್ಯವಸ್ಥಿತವಾಗಿ ಕೆಲಸ ಮಾಡುತ್ತವೆ. ಎಷ್ಟೋ ಪುರಸಭೆಗಳಿಗೆ ಹಣದ ಕೊರತೆ ಇದೆ. ಕೆಲವು ಪುರಸಭೆಗಳಿಗೆ ಹಣ ಜಾಸ್ತಿ ಬರುತ್ತದೆ. ಕೆಲವು ಪುರಸಭೆಗಳಲ್ಲಿ ಕಸ ಗುಡಿಸುವ ಪೊರಕೆಗಳನ್ನು ಕೊಂಡುಕೊಳ್ಳುವುದಕ್ಕೆ ಹಣ ಇಲ್ಲ. ಅಂಥಾ ಪುರಸಭೆಗಳಲ್ಲಿ ನಮ್ಮ ಚಾಮರಾಜನಗರದ್ದೂ ಒಂದು. ಇಂಥಾ ಶೋಚನೀಯ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಬರಬಾರದು. ಇದನ್ನು ನೋಡಿದರೆ ನಾವು ಅತ್ಯಂತ ಭೀಕರವಾದಂಥ ಗಂಭೀರ ಪರಿಸ್ಥಿತಿಯಲ್ಲಿ ಇದ್ದೇವೆ. ಗಡಿ ಪ್ರದೇಶಗಳ ಅಭಿವೃದ್ಧಿಗಾಗಿ ಸಮಗ್ರವಾಗಿ ಯೋಚನೆ ಮಾಡಬೇಕು. ಇದರ ಬಗ್ಗೆ ಚಿಂತನೆಯನ್ನು ಮಾಡಬೇಕು. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಪ್ರೆಸ್ ಕ್ಲಬ್‌ನಲ್ಲಿ ಮಾತನಾಡುವಾಗ ಗಡಿ ಪ್ರದೇಶದ ಅಭಿವೃದ್ಧಿ ಪ್ರಾಧಿಕಾರದ ಬಗ್ಗೆ ಮಾತನಾಡಿದ್ದಾರೆ. ಅವರು ಆ ಪತ್ರಿಕಾ ವರದಿ ನೋಡಿ ಪ್ರೆಸ್ ಕ್ಲಬ್‌ನಲ್ಲಿ ಮಾತನಾಡಿದಾಗ ಗಡಿ ಪ್ರದೇಶ ಪ್ರಾಧಿಕಾರ ರಚನೆಗಿಂತ ಗಡಿ ಪ್ರದೇಶದ ತಾಲ್ಲೂಕುಗಳಿಗೆ ಹೆಚ್ಚಿನ ನೆರವನ್ನು ನೀಡುತ್ತೇನೆಂದು ಹೇಳಿದ್ದಾರೆ. ಆದ್ದರಿಂದ ಈ ಸಭೆ ಒಂದು ನಿರ್ಣಯಕ್ಕೆ ಬರಬೇಕಾದ ಕರ್ತವ್ಯ ಇದೆ. ಚಾಮರಾಜನಗರವು ದಕ್ಷಿಣದ ಕೊನೆಯ ಗಡಿ ತಾಲ್ಲೂಕು. ಹುಂಡೇಕಾರ್ ಸಮಿತಿ ಪ್ರಕಾರ ಚಾಮರಾಜನಗರವನ್ನು ಜಿಲ್ಲೆ ಮಾಡಬೇಕೆಂದು ಒಂದು ಶಿಫಾರಸ್ ಇದೆ.

ಶ್ರೀ ಎಂ. ಮಹದೇವ್.—ಹುಂಡೇಕಾರ್ ಕಮಿಟಿ ರಿಪೋರ್ಟ್ ಪ್ರಕಾರ ನಂಜನಗೂಡನ್ನು ಜಿಲ್ಲಾ ಕೇಂದ್ರ ಮಾಡಬೇಕೆಂದಿದೆ. ಚಾಮರಾಜನಗರವನ್ನು ಜಿಲ್ಲಾ ಕೇಂದ್ರ ಮಾಡಲು ಶಿಫಾರಸ್ ಮಾಡಿರುವುದು ಗದ್ದಿಗೇಗೌಡ ಕಮಿಟಿ.

ಶ್ರೀ ವಾಟಾಳ್ ನಾಗರಾಜ್.—ಆಯಿತು, ಯಾವುದೋ ಒಂದು ಮಾಡಲಿ. ಅಲ್ಲಿ ಸುವರ್ಣವತಿ ಮತ್ತು ಚಿಕ್ಕಹೊಳೆ ನೀರಿಗೆ ಆಸರೆ. ಕುಡಿಯಲು, ವ್ಯವಸಾಯಕ್ಕೆ ಇವಕ್ಕೆಲ್ಲ ನೀರು ಬೇಕಾದರೆ ತಮಿಳುನಾಡಿನ ತಾಳವಾಡಿ ಕಡೆಯಿಂದ ಬರಬೇಕು. ಅಲ್ಲಿ ಮಳೆ ಇಲ್ಲ ಅಂದರೆ ಸುವರ್ಣವತಿ ತುಂಬುವುದಿಲ್ಲ, ಚಿಕ್ಕಹೊಳೆಯೂ ತುಂಬುವುದಿಲ್ಲ. ಆದ್ದರಿಂದ ವರ್ಷದಲ್ಲಿ ೮ ತಿಂಗಳು ಕಾಲ ನೀರಿಗೆ ಬರಗಾಲ ಇದೆ. ಕುಡಿಯಲು ನೀರಿಲ್ಲ, ತಾವು ಮಹದೇಶ್ವರ ಬೆಟ್ಟಕ್ಕೆ ಹೋಗುವಾಗ ನಿಮ್ಮನ್ನು ಅಲ್ಲಿ ಎದುರುಗೊಂಡು ಕ್ಷೇತ್ರವನ್ನು ತೋರಿಸುತ್ತೇನೆ. ಇಡೀ ಚಾಮರಾಜನಗರ ಬೀದಿಯಲ್ಲಿ ಯಾವ ಕಡೆ ನೋಡಿದರೂ ೬ ಅಡಿ ಹಳ್ಳ ಬಿದ್ದಿದೆ, ನಲ್ಲಿಯಿಂದ ಬಂದ ನೀರು ಆ ತಗ್ಗು ಪ್ರದೇಶದಲ್ಲಿ ಬೀಳುವಾಗ ಬಿಂದಿಗೆಯನ್ನು ಒಡ್ಡುತ್ತಾರೆ. ಜನ ಶೋಚನೀಯ ರೀತಿಯಲ್ಲಿ ಅಲ್ಲಿ ಬದುಕುತ್ತಿದ್ದಾರೆ. ಇಡೀ ಕ್ಷೇತ್ರವನ್ನು ತಾವು ನೋಡಬೇಕು. ತೀರಾ ಬಡತನದ ಬೇಗೆಯಲ್ಲಿ ನರಳುವ ಕ್ಷೇತ್ರ ಅದು.

ಅಲ್ಲಿ ಕೆಲವು ಕೋಮು ಜಾತಿಗಳಿವೆ. ನಾಯಕ ಪರಿವಾರ ಎನ್ನುವ ಕೋಮು ಚುನಾವಣೆಯ ಸಂದರ್ಭದಲ್ಲಿ ಅವರು ಒಂದು ಘೋಷಣೆ ಮಾಡಿ ತಮಗೆ ಪರಿಶಿಷ್ಟ ವರ್ಗಕ್ಕೆ ಸೇರಿಸಲಿಲ್ಲ ಎಂದರೆ ನಾವು ನಿಮಗೆ ವೋಟು ಕೊಡುವುದಿಲ್ಲ ಎಂದರು. ಬಹಳ ದಿವಸಗಳಿಂದ ಇದರ ಬಗ್ಗೆ ಚರ್ಚೆ ನಡೆಯುತ್ತಿದೆ. ಹಿಂದೆ ಮುಖ್ಯಮಂತ್ರಿಯಾಗಿದ್ದ ಹೆಗಡೆಯವರು ಅವರ ವಾದವನ್ನು ಒಪ್ಪಿ ಕೇಂದ್ರದ ಒಪ್ಪಿಗೆಗಾಗಿ ಕಳಿಸುತ್ತೇನೆ ಎಂದಿದ್ದರು. ಈಗ ಕೇಂದ್ರದಲ್ಲಿ ಅವರ ಮಾತನ್ನು ಕೇಳುವ ಸ್ಥಿತಿಯಲ್ಲಿದೆ. ಅದೇ ಪ್ರಕಾರ ವೀರೇಂದ್ರ ಪಾಟೀಲರು ಮೈಸೂರು ಜಿಲ್ಲೆಯಲ್ಲಿ ಪ್ರವಾಸಕ್ಕೆ ಬಂದಾಗ ನಾಯಕರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸುವುದಕ್ಕೆ ಅಭ್ಯಂತರ ಇಲ್ಲ ಎಂದರು. ಇಬ್ಬರೂ ಈಗ ಒಂದು ತೀರ್ಮಾನಕ್ಕೆ ಬಂದಿರುವಾಗ ಒಂದು ಬಡ ಜನಾಂಗವನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಿ ಅವರ ಕಲ್ಯಾಣಕ್ಕೆ ಹೆಚ್ಚಿನ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕು. ಇದರ ಜೊತೆಗೆ ಮತ್ತೊಂದು ಸಣ್ಣ ಜಾತಿ ಇದೆ. ಮೇಲು ಸಕ್ಕರೆ ಸೆಟ್ಟಿ ಎಂದು. ಇಡೀ ಕರ್ನಾಟಕದಲ್ಲಿ ಮೂರು ತಾಲ್ಲೂಕುಗಳಲ್ಲಿ ಮಾತ್ರ ಈ ಜಾತಿ ಇದೆ. ಆ ತಾಲ್ಲೂಕಿನಲ್ಲಿ ಎಲ್ಲಿ ಹೋದರು ಚಿಕ್ಕಮೊಳೆ, ದೊಡ್ಡಮೊಳೆ ಎನ್ನುವ ಅವರ ಹೆಸರುಗಳೇ. ಇಲ್ಲಿ ಇರುವುದೆಲ್ಲ ಬರೀ ಅವರ ಗುಡಿಸಲುಗಳೇ. ಇವರದು ೧೫ ಸಾವಿರ ಗುಡಿಸಲುಗಳಿವೆ, ಕರ್ನಾಟಕದ ಬೇರಾವ ತಾಲ್ಲೂಕಿನಲ್ಲೂ ಇಷ್ಟೊಂದು ಗುಡಿಸಲು ಬೇರೆ ಜಾತಿಯವು ಇಲ್ಲ. ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಾ ಅವರು ದಯವಿಟ್ಟು ಆ ಕ್ಷೇತ್ರಕ್ಕೆ ಬರಬೇಕಾಗುತ್ತದೆ. ನಾವು ಕರೆದುಕೊಂಡು ಹೋಗಬೇಕಾಗುತ್ತದೆ. ಆ ಬಡ ಜಾತಿಗಳು ಬದುಕುವ ಸ್ಥಿತಿಯನ್ನು ತಾವು ನೋಡಬೇಕು ಇಡೀ ಊರಿನಲ್ಲಿ ಒಂದೂ ಹೆಂಚಿನ ಮನೆ ಇಲ್ಲ, ಬೆಂಕಿ ಬಿದ್ದರೆ ಊರಿಗೆ ಊರೇ ನಾಶ. ಒಬ್ಬ

ರಾಜಕೀಯ ವ್ಯಕ್ತಿಯೂ ಅಲ್ಲಿಂದ ಬಂದಿರಲಿಲ್ಲ, ದೇವರಾಜ ಅರಸರ ಕಾಲದಲ್ಲಿ ಆ ಜಾತಿಗೆ ಮಾನ್ಯತೆ ಕೊಡಬೇಕೆಂದು ಮೇಲ್ಮನೆಗೆ ಮಸಣಶೆಟ್ಟಿ ಎನ್ನುವವರನ್ನು ನಾಮಕರಣ ಮಾಡಿದ್ದರು. ಇವತ್ತು ಮುಖ್ಯಮಂತ್ರಿಗಳು ಆ ಜಾತಿಗಳಿಗೆ ನಾಮಿನೇಷನ್ ಮಾಡಬೇಕೆಂದು ಕೋರುತ್ತೇನೆ. ಚಾಮರಾಜ ನಗರ ನೀರಿನ ವ್ಯವಸ್ಥೆಗಾಗಿ ಕಾವೇರಿ ಯೋಜನೆ ಸಿದ್ಧವಾಗಿದೆ, ಅದನ್ನು ವೀರೇಂದ್ರ ಪಾಟೀಲರು ಗಮನಕ್ಕೆ ತೆಗೆದುಕೊಂಡು ಕಾರ್ಯಗತಗೊಳಿಸಲು ತೀರ್ಮಾನ ತೆಗೆದುಕೊಂಡರೆ ಉದ್ಘಾಟನೆಗೂ ಅವರನ್ನೆ ಕರೆಯಿಸುತ್ತೇನೆ, ತಾವು ಅಧ್ಯಕ್ಷರೂ ಊರಿಗೆ ಬರಬೇಕು. ಬೆಂಗಳೂರಿಗೆ ತೊರೇಕಾಡನಹಳ್ಳಿಯಿಂದ ನೀರು ತಂದಿದ್ದೇವೆ. ಕಾವೇರಿ ನೀರನ್ನು ಕೇವಲ ೨೫ ಕಿ.ಮೀ. ನಿಂದ ತರಲು ಯೋಜನೆಯು ಸಿದ್ಧವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ತರಾತುರಿಯಲ್ಲಿ ಕೆಲಸ ಮಾಡಿ ಅನುಕೂಲ ಮಾಡಿ ಕೊಡುವುದು ಕರ್ತವ್ಯವೆಂದು ಹೇಳುತ್ತೇನೆ. ಚಾಮರಾಜನಗರದ ಒಳಚರಂಡಿ ವ್ಯವಸ್ಥೆ ಬಗ್ಗೆ ನಾನು ಆಗಲೇ ಹೇಳಿದ ಹಾಗೆ ಪುರಸಭೆಗಳಲ್ಲಿ ಪೌರಕೆಗಳನ್ನು ಕೊಂಡುಕೊಳ್ಳಲು ಹಣ ಇಲ್ಲದಿದ್ದರೆ ಒಳಚರಂಡಿ ಪ್ರಶ್ನೆ ಬರುವುದೇ ಇಲ್ಲ. ಇವೆರಡಕ್ಕೂ ಸರ್ಕಾರ ಹಣ ಬಿಡುಗಡೆ ಮಾಡಬೇಕೆಂದು ಪ್ರಾಮಾಣಿಕತೆ ಯಿಂದ ಕೇಳಿಕೊಳ್ಳುತ್ತೇನೆ

ರಾಜ್ಯಪಾಲರ ಭಾಷಣದಲ್ಲಿ ಆಡಳಿತ ಭಾಷೆಯ ಬಗ್ಗೆ ನಾಲ್ಕು ಪಂಕ್ತಿಗಳಲ್ಲಿ ಮುಗಿಸಿದ್ದಾರೆ. ನನಗನಿಸುತ್ತದೆ ಅಧ್ಯಕ್ಷರೇ ಈ ರಾಜ್ಯದಲ್ಲಿ ಆಡಳಿತ ಭಾಷೆ ಯಾವ ಮಟ್ಟದಲ್ಲಿ ಬೆಳೆಯಬೇಕಾಗಿತ್ತೋ ಆ ಮಟ್ಟದಲ್ಲಿ ಬೆಳೆಯುತ್ತಿಲ್ಲ. ಬರೀ, ಘೋಷಣೆ ಹೇಳಿಕೆ ಇದರಲ್ಲೇ ನಡೆಯಿತೇ ಹೊರತು ಕಾರ್ಯ ರೂಪಕ್ಕೆ ಬರಲಿಲ್ಲ. ಯಾವ ಉದ್ದೇಶಕ್ಕಾಗಿ ಭಾಷಾವಾರು ಪ್ರಾಂತ್ಯವಾಯಿತೋ ಉದ್ದೇಶ ಕಲ್ಪನೆ ಹಿನ್ನಲೆ ಇವೆಲ್ಲ ಮರೆಯಾಗಿ ಇವತ್ತು ಕನ್ನಡ ತೀರ ಹಿಂದಕ್ಕೆ ಹೋಗುವಂತಹ ಭಾಷೆಯಾಗಿದೆ. ತೀರಾ ಅವಹೇಳನಕರವಾದ ರೀತಿಯಲ್ಲಿ ಕರ್ನಾಟಕದ ಬೆಳವಣಿಗೆಯಾಗಿದೆ. ಕನ್ನಡವನ್ನು ಏನು ರಾಜ್ಯಭಾಷೆ ಮಾಡಬೇಕೆಂದಿತ್ತೋ ಇದರ ಬಗ್ಗೆ ಪ್ರಾಮಾಣಿಕ ಪ್ರಯತ್ನಗಳು ನಡೆದಿಲ್ಲ. ಇದರ ಬಗ್ಗೆ ವಿಶೇಷ ಯೋಜನೆಯನ್ನು ಮಾಡಬೇಕಾಗಿದೆ. ಕನ್ನಡ ಸಂಸ್ಕೃತಿ ಇಲಾಖೆಯಿಂದ ಈ ಕೆಲಸ ಸಾಧ್ಯವಿಲ್ಲ. ನರ್ತಕಿಯರನ್ನು ಕರೆಸುವುದು, ನೃತ್ಯ ಮಾಡಿಸುವುದು. ಹಣಕೊಡುವುದು ಇಷ್ಟಲ್ಲದೆ ಇನ್ನೇನೂ ಅವರು ಮಾಡುವುದಿಲ್ಲ. ಕನ್ನಡ ಪುಸ್ತಕ ಮುದ್ರಿಸುವುದು, ನರ್ತಕಿಯರಿಂದ ನೃತ್ಯ ಮಾಡಿಸುವುದು ಅವರಿಗೆ ದುಡ್ಡು ಕೊಡುವುದು—ಇದಕ್ಕೆ ಕನ್ನಡ ಸಂಸ್ಕೃತಿ ಇಲಾಖೆ ಎಂದು ಹೆಸರು.

ಈ ಕನ್ನಡ ಸಂಸ್ಕೃತಿ ಇಲಾಖೆಗೆ ಕಾಯಕಲ್ಪ ಕೊಡಬೇಕು. ಕನ್ನಡ ಭಾಷೆಯ ಬೆಳವಣಿಗೆಗೆ ಹೊಸದಾಗಿ ವಿಶೇಷವಾದಂತಹ ಸಮರ್ಥವಾದಂತಹ ಯೋಜನೆಯನ್ನು ತಯಾರು ಮಾಡಬೇಕು. ಇವತ್ತು ಕರ್ನಾಟಕ ರಾಜ್ಯದಲ್ಲಿ ಕನ್ನಡ ಭಾಷೆ ಎರಡನೇ ಭಾಷೆ ಆಗತಕ್ಕಂತಹ ಪರಿಸ್ಥಿತಿ ಬಂದಿದೆ. ಇಲ್ಲಿನ ನೆಲ, ಜಲವನ್ನು ರಕ್ಷಣೆ ಮಾಡತಕ್ಕಂತಹ ಕಾಯಕವನ್ನು ಕೈಗೊಂಡಿರತಕ್ಕಂತಹ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಇದರ ಬಗ್ಗೆ ಗಮನ ಹರಿಸಬೇಕು ಎಂದು ನಾನು ವಿನಂತಿ ಮಾಡಿ ಕೊಳ್ಳುತ್ತೇನೆ.

ಅಧ್ಯಕ್ಷರು.— ಈಗ ೪ ಗಂಟೆಯಾಯಿತು ಚರ್ಚೆಯನ್ನು ನಾಳೆಗೆ ಮುಂದುವರಿಸೋಣ. ಈಗ ವಿಶೇಷ ಚರ್ಚೆ ಇದೆ. ಆದಕ್ಕೆ ಮೊದಲು ಈ ಸಭೆಯ ಅಭಿಪ್ರಾಯವನ್ನು ಪಡೆದುಕೊಳ್ಳಬೇಕೆಂದು ನನ್ನ ಇರಾದೆ. ನಾಳೆ ಕೊನೆಯ ದಿವಸವಾಗಿದ್ದು ಬೆಳಿಗ್ಗೆ ೯ ಗಂಟೆಗೆ ಅಧಿವೇಶನ ಸೇರಲಿದ್ದು ೧೧ ಗಂಟೆಯ ವರೆಗೆ ಈ ಚರ್ಚೆಯನ್ನು ಮುಂದುವರಿಸೋಣ ನಂತರ ಎರಡೂ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳು ಬೇರೆ ಬೇರೆ ಉತ್ತರ ಕೊಡುತ್ತಾರೆ. ಈ ಮಧ್ಯೆ ಹಲವಾರು ಗಮನ ಸೆಳೆಯುವ ಸೂಚನೆಗಳು ನನಗೆ ತಲುಪಿವೆ, ಗಮನ ಸೆಳೆಯತಕ್ಕಂತಹ ಸೂಚನೆ ಮತ್ತು ಈ ಚರ್ಚೆ ಎರಡಕ್ಕೂ ಒಪ್ಪಿದರೆ ಈ ಚರ್ಚೆಗೆ ಕಾಲ ಸೀಮಿತವಾಗುತ್ತದೆ. ಆದುದರಿಂದ ಈ ಸಭೆ ಒಪ್ಪಿದರೆ ಗಮನ ಸೆಳೆಯುವ ಸೂಚನೆಗಳನ್ನು ಮುಂದಿನ ಅಧಿವೇಶನಕ್ಕೆ ಹಾಕಿ ನಾಳೆ ಇರತಕ್ಕಂತಹ ಎರಡು ಗಂಟೆಯ ಅವಕಾಶವನ್ನು ಚರ್ಚೆಗೋಸ್ಕರ ಉಪಯೋಗಿಸಿಕೊಂಡು ಈ ಸದನವನ್ನು ಮುಗಿಸೋಣ ಎನ್ನುವ ಒಂದು ಸೂಚನೆಯನ್ನು ತಮ್ಮ ಮುಂದಿಟ್ಟಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಕಳೆದ ೩-೪ ತಿಂಗಳುಗಳಿಂದ ಸಹಕಾರಿ ಸಂಘದ ನೌಕರರು ತಮ್ಮ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಇದರಿಂದ ಸಹಕಾರಿ ಸಂಘದ ವಿತರಣಾ ವ್ಯವಸ್ಥೆ ನಿಂತು ಹೋಗಿದೆ ನಾವು ಇದನ್ನು ಅವರಿಗೇ ವಹಿಸಿದ್ದೇವೆ. ಸೊಸೈಟಿ ಸಾಲ ಕೊಡತಕ್ಕಂತಹ ಮತ್ತು ವಸೂಲು ಮಾಡತಕ್ಕಂತಹ ಕಾಲ ಇದಾಗಿವೆ. ಮಾನ್ಯ ಜಯದೇವರಾಜ ಅರಸ್ ವರ್ ಸಮಿತಿ ಕೂಡ ಅದೇ ಸಲಹೆಯನ್ನು ಮಾಡಿದೆ. ಇದೊಂದನ್ನು ನಾಳೆ ತಾವು ಅಡ್ಮಿಟ್ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದಂಥ ವಿಷಯ ಬಹಳ ಮಹತ್ವವಾದುದು. ನಾನು ರಾಜ್ಯ ಪಾಲರ ಭಾಷಣದ ಬಗ್ಗೆ ಮಾತನಾಡುವಾಗ

ಕೂಡ ಮಾನ್ಯ ಮಂತ್ರಿಗಳ ಗಮನ ಸೆಳೆದು ನೂರು ದಿವಸಗಳಿಂದ ಸತ್ಯಾಗ್ರಹ ಮಾಡುತ್ತಿರುವ ಅವರ ಬೇಡಿಕೆ ನ್ಯಾಯವಾಗಿದ್ದರೆ ಈಡೇರಿಸುತ್ತೇವೆಂದು ಆಶ್ವಾಸನೆ ಕೊಡಿ ಎಂದು ಹೇಳಿದೆ. ನಾವು ಇದೇ ಸದನದಲ್ಲಿ ೪ ಗಂಟೆಗೆ ಲಕ್ಷಾಂತರ ರೈತರ ಸಮಸ್ಯೆ ಬಗ್ಗೆ ಚರ್ಚೆ ಮಾಡುವವರಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಇದಕ್ಕೆ ನಾಳೆ ಅವಕಾಶ ಮಾಡಿಕೊಡಬೇಕು.

ಶ್ರೀ ಎಂ. ಮಹದೇವ್.—ನಾನು ಗಮನ ಸೆಳೆಯುವ ಸೂಚನೆ ಕೊಟ್ಟು ೪-೫ ದಿವಸವಾಯಿತು. ಆನೆಗಳ ಕಾಟ ಜಾಸ್ತಿಯಾಗಿದ್ದು ೬೦-೭೦ ಎಕರೆ ಜಮೀನನ್ನು ಹಾಳು ಮಾಡಿದೆ. ಬಡವರು ಮಲಗಿಕೊಳ್ಳುವುದಕ್ಕೆ ತೊಂದರೆಯಾಗಿದೆ.

ಶ್ರೀ ಎಂ. ಮಹದೇವ್.—ನಮ್ಮ ಭಾಗದಲ್ಲಿ ಆನೆಯ ಕಾಟ ಜಾಸ್ತಿಯಾಗಿರುವ ಬಗ್ಗೆ ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ. ಸುಮಾರು ೬೦-೭೦ ಎಕರೆ ಭೂಮಿಯಲ್ಲಿ ಇದ್ದಂತಹ ಬೆಳೆಯನ್ನು ಈ ಆನೆಗಳು ಹಾಳುಮಾಡಿವೆ.

ಶ್ರೀಮತಿ ಚಂದ್ರಪ್ರಭಾ ಅರಸ್.— ಹುಣಸೂರಿಗೂ ಸಹ ಆನೆಗಳು ಬಂದಿವೆ. ಅಲ್ಲೂ ಕೂಡ ಲಕ್ಷಾಂತರ ರೂಪಾಯಿಯ ಬೆಳೆ ಹಾಳಾಗಿದೆ, ಅಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲ.

ಶ್ರೀ ಎಂ. ಪಿ. ವೆಂಕಟೇಶ್.—ನಮ್ಮ ಹೆಗ್ಗಡದೇವನಕೋಟೆಯಲ್ಲೂ ಆನೆಕಾಟ ಹೆಚ್ಚಾಗಿದೆ.

ಅಧ್ಯಕ್ಷರು.—.ಆನೆಗಳು ಯಾವ ತಾರತಮ್ಯವನ್ನು ಮಾಡಿಲ್ಲ. ಕಾಂಗ್ರೆಸ್ 'ಐ' ಹಾಗೂ ಕಾಂಗ್ರೆಸ್ 'ಐ' ಏತರರ ಎಲ್ಲಾ ಕ್ಷೇತ್ರಗಳಲ್ಲೂ ಆನೆ ಕಾಟ ಕೊಡುತ್ತಿದೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ರೈತರ ಸಾಲ ವಸೂಲು ಮಾಡಲು ಅವರ ಮನೆಗಳಲ್ಲಿಯ ವಸ್ತುಗಳನ್ನು ಹರಾಜು ಮಾಡಲು ತೊಡಗಿದ್ದಾರೆ. ಈ ಬಗ್ಗೆ ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ರೈತರು ಪ್ರೀಮಿಯಂ ಹಣವನ್ನು ತುಂಬಬೇಕಾಗಿದೆ. ಅವರು ಹಣವನ್ನು ಕಟ್ಟುತ್ತಿಲ್ಲವೆಂದು ತಹಶೀಲ್ದಾರರು ಮನೆಗೆ ನುಗ್ಗಿ ಸಾಮಾನುಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಡಿ.ಸಿ.ಯವರಿಗೆ ಸರ್ಕಾರದವರು ಆದೇಶಕೊಡಬೇಕು. ಇದು ಇಡೀ ಕರ್ನಾಟಕ ರಾಜ್ಯದಲ್ಲಿರುವ ಸಾವಿರಾರು ಜನ ರೈತರಿಗೆ ಸಂಬಂಧಪಟ್ಟ ಪ್ರಶ್ನೆಯಾಗಿದೆ.

ಶ್ರೀ ಪಿ. ಸಿ. ಸಿದ್ದನಗೌಡರ್.—ಸೇವಾ ಸಹಕಾರ ಸಂಘದ ನೌಕರರ ಮುಷ್ಕರದ ಬಗ್ಗೆ ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೇನೆ,

ವಿಶೇಷ ಚರ್ಚೆ ರೈತರ ಸಾಲ ಮನ್ನಾ ಮಾಡುವ ಬಗ್ಗೆ

ಅಧ್ಯಕ್ಷರು.—ಈಗ ವಿಶೇಷ ಚರ್ಚೆ. ಶ್ರೀ ಯಡಿಯೂರಪ್ಪನವರು ಮಾತನಾಡಬೇಕು. ೫ ಗಂಟೆಗೆ ಸಭೆಯ ಸೆನ್ಸ್ ತೆಗೆದುಕೊಳ್ಳುತ್ತೇನೆ. ಸಭೆ ಯಾವಾಗಲೂ ಔದಾರ್ಯದಿಂದಿರುತ್ತದೆ. ತಾವು ದಯವಿಟ್ಟು ಗಂಟೆ ನೋಡಿಕೊಂಡು ಪ್ರಾರಂಭಮಾಡಿ. ಬಹಳ ಜನ ಸದಸ್ಯರು ಎರಡೂ ಕಡೆಯಿಂದ ಭಾಗವಹಿಸಬೇಕೆಂದು ಕೇಳಿಕೊಂಡಿದ್ದಾರೆ...

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ತಮ್ಮ ಆದೇಶಕ್ಕೆ ನಾನು ತಲೆಬಾಗುತ್ತೇನೆ. ರೈತರ ಸಾಲ ಮನ್ನಾ ಮಾಡುವ ವಿಷಯ ಅತ್ಯಂತ ಪ್ರಾಮುಖ್ಯವಾದ ವಿಷಯವಾಗಿದೆ. ತಾವು ೨ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿರುವುದಕ್ಕೆ ತಮಗೂ, ಹಾಗೂ ಸಭಾನಾಯಕರಿಗೂ ಈ ರಾಜ್ಯದ ರೈತರ ಪರವಾಗಿ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಪ್ರಾರಂಭ ಮಾಡುತ್ತೇನೆ. ನಮ್ಮ ಬೇಡಿಕೆ ಇರತಕ್ಕದ್ದು ಈ ರಾಜ್ಯದ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ, ಸಹಕಾರ ಸಂಘಗಳಲ್ಲಿ, ಪಿ.ಎಲ್.ಡಿ. ಬ್ಯಾಂಕುಗಳಲ್ಲಿ ಏನು ನಮ್ಮ ರಾಜ್ಯದ ರೈತರು ಕೃಷಿ ಸಾಲವನ್ನು ಪಡೆದಿದ್ದಾರೆ. ಆ ರೀತಿ ಎಲ್ಲಾ ಸಾಲವನ್ನು ಮನ್ನಾ ಮಾಡಿ ಈ ರಾಜ್ಯದ ರೈತನ್ನು ಗೌರವದಿಂದ ಸ್ವಾಭಿಮಾನದಿಂದ ನೆಮ್ಮದಿಯಿಂದ ಜೀವನ ಮಾಡುವಂತಹ ಅವಕಾಶವನ್ನು ಮಾಡಿಕೊಡಬೇಕೆಂದು ಅತ್ಯಂತ ವಿನಯದಿಂದ ತಮ್ಮ ಮೂಲಕ ಸನ್ಮಾನ್ಯ ಸಭಾನಾಯಕರನ್ನು ಪ್ರಾರ್ಥನೆ ಮಾಡಿ ಕೊಳುತ್ತೇನೆ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಇಂತಕ್ಕ ಸಾಲ ಮನ್ನಾ ಮಾಡುವ ಬಗ್ಗೆ ಅನೇಕ ಕಾನೂನು ಅಡಚಣೆಗಳು ಇರಬಹುದು, ಅದರ ಬಗ್ಗೆ ಅವರು ಸಂಬಂಧಪಟ್ಟ ಅವರೊಡನೆ ವ್ಯವಹರಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕು. ಇನ್ನು ಯಾವ ಯಾವ ಸಾಲವನ್ನು ರಾಜ್ಯ ಸರ್ಕಾರದವರು ಮನ್ನಾ ಮಾಡಬಹುದು ಅವುಗಳನ್ನು ಮನ್ನಾ ಮಾಡಲು ಕಾರ್ಯಕ್ರಮ ಹಾಕಿಕೊಳ್ಳಬೇಕು, ಇದು ಅತ್ಯಂತ ಪ್ರಾಮುಖ್ಯವಾದ ವಿಷಯವಾಗಿದೆ. ಈ ಸದನದ ಎಲ್ಲಾ ಪಕ್ಷಗಳ ಸದಸ್ಯರು ಹಾಗೂ ಮುಖಂಡರುಗಳ ಒಂದು ಸದನದ ಸಮಿತಿಯನ್ನು ಮಾಡಿ, ಇದರ